# ಮಹಾಸಭೆ: 30

# 2017–18 ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ

# ತಾ॥ 29.07.2018

ಗ್ರಾಮಭಾರತಿ ವಿದ್ಯಾಸಂಸ್ಥೆ (ರಿ) ಕೃಷ್ಣರಾಜಪೇಟೆ, ಈ ವಿದ್ಯಾಸಂಸ್ಥೆಯ 2017–18 ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ದಿನಾಂಕ: 29.07.2018 ನೇ ಭಾನುವಾರ ಬೆಳಿಗ್ಗೆ 10:30 ಗಂಟೆಗೆ ಸರಿಯಾಗಿ ವಿದ್ಯಾಸಂಸ್ಥೆ ಆವರಣದಲ್ಲಿ ಸಂಸ್ಥೆಯ ಘನ ಅಧ್ಯಕ್ಷರಾದ ಶ್ರೀಮಾನ್ ಎಸ್.ಸಿ.ಕಿರಣ್ ಕುಮಾರ್ ರವರ ಘನ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಈ ಮಹಾಸಭೆಯಲ್ಲಿ ತೆಗೆದುಕೊಂಡ ತೀರ್ಮಾನಗಳು.

ಹಾಜರಿ :– ಹಾಜರಾಗಿದ್ದ ಸದಸ್ಯರುಗಳ ಸಹಿಯನ್ನ ಅಲಾಯಿದ ಪಡೆದುಕೊಳ್ಳಲಾಗಿದೆ.

| | ವಿಷಯ | ತೀರ್ಮಾನ |
|---|---|---|
| 1. | ದೇವತಾ ಪ್ರಾರ್ಥನೆ | ವಿದ್ಯಾಸಂಸ್ಥೆಯ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕಿಯರು ಆದಂತಹ ಶ್ರೀಮತಿ ಲೀಲಾವತಿ ಮತ್ತು ಜಯಶ್ರೀಯವರು ಪ್ರಾರ್ಥನೆಯನ್ನು ಸುಮಧುರವಾಗಿ ನಡೆಸಿಕೊಟ್ಟರು. |
| 2. | ಸ್ವಾಗತ ಭಾಷಣ | ವಿದ್ಯಾಸಂಸ್ಥೆಯ ಬಿ.ಇಡಿ. ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಪಿ.ಸುರೇಶರವರು ಸಂಸ್ಥೆಯ ಅಧ್ಯಕ್ಷರು, ಕಾರ್ಯದರ್ಶಿಗಳು, ನಿರ್ದೇಶಕರುಗಳು, ಸದಸ್ಯರುಗಳು ಹಾಗೂ ಸಂಸ್ಥೆಯ ಎಲ್ಲಾ ವಿಭಾಗದ ಮುಖ್ಯಸ್ಥರು, ಉಪನ್ಯಾಸಕರು, ಶಿಕ್ಷಕರು ಹಾಗೂ ಸಿಬ್ಬಂದಿ ವರ್ಗದವರನ್ನ ತುಂಬು ಹೃದಯದಿಂದ ಸ್ವಾಗತಿಸಿದರು. |
| 3. | ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆಯನ್ನ ಓದಿ ರೆಕಾರ್ಡ್ ಮಾಡುವ ವಿಚಾರ. | 2017–18ನೇ ಸಾಲಿನ ಸರ್ವಸದಸ್ಯರ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆಯನ್ನು ಸಂಸ್ಥೆಯ ಎಸ್.ಎಂ.ಲಿಂಗಪ್ಪ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಬಿ.ಎಸ್.ರಘುಪತಿಯವರು ಆಹ್ವಾನ ಪತ್ರಿಕೆಯನ್ನ ಓದಿದ್ದನ್ನು ಸಭೆಯು |

| | | |
|---|---|---|
| | | ಸರ್ವಾನುಮತದಿಂದ ಒಪ್ಪಿ ರೆಕಾರ್ಡ ಮಾಡತಕ್ಕದ್ದೆಂದು ತೀರ್ಮಾನಿಸಿತು. |
| 4. | ಹಿಂದಿನ ಮಹಾಸಭೆಯ ವರದಿಯನ್ನು ಓದಿ ರೆಕಾರ್ಡ್ ಮಾಡುವುದು | ಹಿಂದಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ನಡಾವಳಿಗಳನ್ನ ಪ್ರೌಢಶಾಲಾ ವಿಭಾಗದ ಮುಖ್ಯ ಶಿಕ್ಷಕರಾದ ಶ್ರೀ ಹೆಚ್.ಎಸ್.ಕೃಷ್ಣರವರು ಓದಿದ್ದನ್ನು ಹಾಗೂ ಈ ನಡಾವಳಿಗಳನ್ನ ವಿಡಿಯೋ ಚಿತ್ರಗಳ ಮೂಲಕ ತೋರಿಸಿದ್ದನ್ನ ಸಭೆಯು ವೀಕ್ಷಿಸಿ ಚರ್ಚಿಸಿ ಹಿಂದಿನ ವಾರ್ಷಿಕ ಮಹಾಸಭೆಯ ನಡಾವಳಿಗಳನ್ನ ರೆಕಾರ್ಡ್ ಮಾಡತಕ್ಕದ್ದೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು. |
| 5. | ಸಂಸ್ಥೆಯ ವರದಿಯನ್ನು ಮಂಡಿಸವ ವಿಚಾರ. | 2017–18ನೇ ಸಾಲಿನಲ್ಲಿ ಸಂಸ್ಥೆಯು ಕೈಗೊಂಡ ಕಾರ್ಯಕ್ರಮಗಳ ಸಂಪೂರ್ಣ ವರದಿಯನ್ನ ಸಂಸ್ಥೆಯ ಪ್ರೌಢಶಾಲಾ ವಿಭಾಗದ ಸಹ ಶಿಕ್ಷಕರಾದ ಶ್ರೀ ಹೆಚ್.ಎನ್.ವಜ್ರಪ್ರಸಾದ್ ರವರು ವಿಡಿಯೋ ಮೂಲಕ ಓದಿದ್ದನ್ನ, ಸಭೆಯು ವೀಕ್ಷಿಸಿ, ಅದನ್ನ ಚರ್ಚಿಸಿ ಸಂಸ್ಥೆಯ ವರದಿಯನ್ನ ಸಭೆಯು ಸರ್ವಾನುಮತದಿಂದ ಒಪ್ಪಿ ಅಂಗೀಕರಿಸತಕ್ಕದ್ದೆಂದು ತೀರ್ಮಾನಿಸಿತು. |
| 6. | 2017–18ನೇ ಸಾಲಿನ ಲೆಕ್ಕ ಪರಿಶೋಧಕರ ವರದಿಯನ್ನು ಪರಿಶೀಲಿಸಿ ಅಂಗೀಕರಿಸುವ ವಿಚಾರ. | 2017–18ನೇ ಸಾಲಿನ ಲೆಕ್ಕಪರಿಶೋಧಕರ ವರದಿಯನ್ನ ಪ್ರೌಢಶಾಲಾ ವಿಭಾಗದ ಮುಖ್ಯಶಿಕ್ಷಕರಾದ ಹೆಚ್.ಎಸ್.ಕೃಷ್ಣರವರು ಮಂಡಿಸಿದರು. ಅದನ್ನ ವಿಡಿಯೋ ಮೂಲಕ ತೋರಿಸಲಾಯ್ತು. ಈ ವರದಿಗೆ ಸಭೆಯು ಸರ್ವಾನುಮತದಿಂದ ಒಪ್ಪಿಗೆ ನೀಡಿದ್ದರಿಂದ ಇದನ್ನ ಅಂಗೀಕರಿಸತಕ್ಕದ್ದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯ್ತು. |
| 7. | 2018–19ನೇ ಸಾಲಿನ ಬಡ್ಜೆಟ್ ಮಂಜೂರು ಮಾಡುವುದು. | 2018–19ನೇ ಸಾಲಿನ ಬಡ್ಜೆಟ್ ನ್ನ ವಿದ್ಯಾಸಂಸ್ಥೆಯ ಕಾರ್ಯದರ್ಶಿಯವರಾದ ಶ್ರೀ ಕೆ.ಜಿ.ಹುಚ್ಚೇಗೌಡರ |

| | | |
|---|---|---|
| | | ಪರವಾಗಿ ಶ್ರೀ ಕೆ.ಶಿವರಾಮೇಗೌಡರು ಕೆಳಕಂಡಂತೆ ಮಂಡಿಸಿದರು. |

## 2018-2019ನೇ ಸಾಲಿನ ಬಡ್ಜೆಟ್ ಮಂಜುರಾತಿ ವಿವರ.

| ಕ್ರ.ಸಂ. | ವಿವರ | 2017-18ನೇ ಸಾಲಿಗೆ ಮಂಜೂರಾಗಿರುವುದು | 2017-18ನೇ ಸಾಲಿಗೆ ಖರ್ಚಾಗಿರುವುದು | 2018-19ನೇ ಸಾಲಿಗೆ ಮಂಜೂರಾತಿ ಕೋರಿರುವುದು. |
|---|---|---|---|---|
| 1 | ಸಂಸ್ಥೆಯ ನೌಕರರ ಸಂಬಳ | 45,00,000-00 | 31,79444-00 | 50,00,000-00 |
| 2 | ವಾರ್ಷಿಕ ವಿದ್ಯುಚ್ಛಕ್ತಿ | 75,000-00 | 54,039-00 | 1,00,000-00 |
| 3 | ವಾರ್ಷಿಕ ಮಹಾಸಭೆಯ ಖರ್ಚು | 50,000-00 | 11850-00 | 50,000-00 |
| 4 | ಪುಸ್ತಕ ಮತ್ತು ವಿಜ್ಞಾನ ಉಪಕರಣಗಳು | 50,000-00 | ---- | 50,000-00 |
| 5 | ಪ್ರಯಾಣ ಭತ್ಯೆ | 25,000-00 | ---- | 25,000-00 |
| 6 | ಅತಿಥಿ ಸತ್ಕಾರ ಮತ್ತು ಗೌರವ ಧನ | 2,00,000-00 | 35,635-00 | 2,00,000-00 |
| 7 | ಅಂಚೆ ವೆಚ್ಚ | 5,000-00 | 650-00 | 50,000-00 |
| 8 | ಅನಿರೀಕ್ಷಿತ ವೆಚ್ಚ | 1,50,000-00 | 153-00 | 1,50,000-00 |
| 9 | ಜಾಹಿರಾತು ವೆಚ್ಚ | 25,000-00 | 8,000-00 | 25,000-00 |
| 10 | ಫರ್ನೀಚರ್ ವೆಚ್ಚ | 2,00,000-00 | 15,000-00 | 2,00,000-00 |
| 11 | ಸಾದಿಲ್ವಾರ್ ವೆಚ್ಚ ಮತ್ತು ಲೇಖನ ಸಾಮಾಗ್ರಿಗಳು | 2,00,000-00 | 59,505-00 | 2,00,000-00 |
| 12 | ವಿದ್ಯಾಸಂಸ್ಥೆ ಕಟ್ಟಡ ಹಾಗೂ ಆಸ್ತಿ ನಿರ್ವಹಣ ವೆಚ್ಚ | 10,00,000-00 | 99,100-00 | 30,00,000-00 |
| 13 | ಮುಂಗಡ ಹಣ ಮತ್ತು ಸಾಲಗಳ ಮರುಪಾವತಿ ವೆಚ್ಚ | 1,60,000-00 | ---- | 1,60,000-00 |
| 14 | ಸ್ಥಿರ ನಿಧಿಗಾಗಿ | 10,00,000-00 | 9,00,000-00 | 10,00,000-00 |
| 15 | ಬಿ.ಇಡಿ., ಪಿ.ಯು.ಸಿ. ನವೀಕರಣ ಶುಲ್ಕ ಪಾವತಿಸಲು | 2,00,000-00 | 1,59,310-00 | 2,00,000-00 |
| | **ಒಟ್ಟು** | **78,40,000-00** | **45,22,686-00** | **1,03,65,000-00** |

ಮೇಲ್ಕಂಡ ಬಡ್ಜೆಟ್ ನ್ನ ಮಂಜೂರು ಮಾಡತಕ್ಕದ್ದೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

| | | |
|---|---|---|
| 8. | 2018-19 ನೇ ಸಾಲಿನ ಆಡಳಿತ ಮಂಡಳಿ ರಚನೆ. | 2018-19 ನೇ ಸಾಲಿನ ಆಡಳಿತ ಮಂಡಳಿಯ ಸದಸ್ಯರು ಮತ್ತು ಪದನಾಮಗಳನ್ನ ಕಾರ್ಯದರ್ಶಿಯವರಾದ ಶ್ರೀ ಕೆ.ಜಿ.ಹುಚ್ಚೇಗೌಡರ ಪರವಾಗಿ ಶ್ರೀಮತಿ ಜಯಶ್ರೀ ರವರು ಕೆಳಕಂಡಂತೆ ಮಂಡಿಸಿದರು. |

| ಹೆಸರು | ಪದನಾಮ |
|---|---|
| 1. ಶ್ರೀ ಎಸ್.ಸಿ.ಕಿರಣ್ ಕುಮಾರ್ ರವರು | ಅಧ್ಯಕ್ಷರು |

2. ಶ್ರೀ ಕೆ.ಜಿ.ಹುಚ್ಚೇಗೌಡರು ಕಾರ್ಯದರ್ಶಿ
3. ಶ್ರೀ ಎ.ಎಂ.ನಂಜುಂಡೇಗೌಡರು ನಿರ್ದೇಶಕರು
4. ಶ್ರೀ ಎಸ್.ಎಸ್.ಶಾಂತಹೃದಯರವರು ನಿರ್ದೇಶಕರು
5. ಶ್ರೀ ಎಸ್.ಸಿ.ರಾಮಲಿಂಗೇಗೌಡರು ನಿರ್ದೇಶಕರು
6. ಶ್ರೀಮತಿ ಕೆ.ಎಂ.ಪುಟ್ಟಲಕ್ಷ್ಮಮ್ಮನವರು ನಿರ್ದೇಶಕರು
7. ಶ್ರೀ ಬಿ.ಎಸ್.ಚಂದ್ರಶೇಖರ್ ರವರು ನಿರ್ದೇಶಕರು
8. ಶ್ರೀ ಎಲ್.ಎನ್.ಯಶ್ವಂತ್ ಕುಮಾರ್ ರವರು ನಿರ್ದೇಶಕರು
9. ಶ್ರೀ ಎಂ.ಜಿ.ಪರಮೇಶ್ ರವರು ನಿರ್ದೇಶಕರು

| | | |
|---|---|---|
| 9. | ಸಂಸ್ಥೆಯ ಸದಸ್ಯರುಗಳಿಗೆ ಸಲಹೆಗಳನ್ನ ನೀಡಲು ಅವಕಾಶದ ವಿಚಾರ. | ಸಂಸ್ಥೆಯ ಸದಸ್ಯರುಗಳಿಗೆ ಸಲಹೆ ನೀಡುವ ಅವಕಾಶದ ಸಂಬಂಧ ಬಳ್ಳೇಕೆರೆ ಕೃಷ್ಣೇಗೌಡರು ಈ ಸಂಸ್ಥೆಯನ್ನು ಪರಮ ಪೂಜ್ಯರಾದ ಶ್ರೀ ಎಸ್.ಎಂ.ಲಿಂಗಪ್ಪನವರು ತಂದರು. ಪ್ರಾಮಾಣಿಕವಾಗಿ, ನಿಷ್ಠೆಯಾಗಿದ್ದರು. ಅವರು ಈ ಗ್ರಾಮಭಾರತಿ ವಿದ್ಯಾಸಂಸ್ಥೆಯನ್ನು & ಸೊಸೈಟಿ ತೆರೆದು ಇದನ್ನ ಅಭಿವೃದ್ಧಿ ಪಡಿಸಿದರು. ಈ ಸಂಸ್ಥೆಯನ್ನು ಅದೇ ರೀತಿ ಪ್ರಾಮಾಣಿಕವಾಗಿ ಕಿರಣ್ ಕುಮಾರ್ ರವರು ನಡೆಸಿಕೊಂಡು ಹೋಗುತ್ತಿದ್ದಾರೆ. ಒಂದು ವೇಳೆ ಈ ವಿದ್ಯಾಸಂಸ್ಥೆಯಲ್ಲಿ ಲೋಪ ದೋಷ ಕಂಡು ಬಂದಿದ್ದರೆ ಅದನ್ನ ಎತ್ತಿ ಹಿಡಿಯಬಹುದಾಗಿತ್ತು. ಆ ರೀತಿ ಯಾವುದೇ ತಪ್ಪುಗಳಿಲ್ಲದೆ ಸಂಸ್ಥೆಯನ್ನ ಉತ್ತಮವಾಗಿ ನಡೆಸಿಕೊಂಡು ಹೋಗುತ್ತಿರುವ ಅಧ್ಯಕ್ಷರಿಗೆ ಯಾವಾಗಲೂ ನನ್ನ ಪ್ರೋತ್ಸಾಹ ಇದ್ದೆ ಇರುತ್ತದೆ ಎಂದು ಹೇಳಿದರು. ಸಭೆಯು ಈ ಮಾತಿಗೆ ಉತ್ತಮ ಅಭಿಪ್ರಾಯ ವ್ಯಕ್ತಪಡಿಸಿತು ಮತ್ತು ಶ್ಲಾಘಿಸಿತು. |
| 10. | ಅಧ್ಯಕ್ಷರ ಭಾಷಣ | ಗೌರವಾನ್ವಿತ ಅಧ್ಯಕ್ಷರು, ಸಭೆಯಲ್ಲಿದ್ದ ಕಾರ್ಯಕಾರಿ ಮಂಡಳಿಯ ನಿರ್ದೇಶಕರು, ಸದಸ್ಯರು ಹಾಗೂ |

| | | |
|---|---|---|
| | | ಸಂಸ್ಥೆಯ ಎಲ್ಲಾ ವಿಭಾಗದ ಬೋಧಕ–ಬೋಧಕೇತರ ವರ್ಗದವರನ್ನ ಅಭಿನಂದಿಸುತ್ತಾ ಸಭೆಯನ್ನು ಉದ್ದೇಶಿಸಿ ಈ ಕೆಳಕಂಡಂತೆ ಭಾಷಣವನ್ನು ಮಾಡಿದರು.<br>ಗ್ರಾಮ ಭಾರತಿ ವಿದ್ಯಾಸಂಸ್ಥೆಯ ಸಂಸ್ಥಾಪಕರಾದ ಪರಮಪೂಜ್ಯ ಶ್ರೀ ಎಸ್.ಎಂ.ಲಿಂಗಪ್ಪನವರು ಬದುಕಿದ್ದರೆ ಈಗ ಅವರಿಗೆ ನೂರು ವರ್ಷಗಳಾಗಿರುತ್ತಿತ್ತು. ಆದುದರಿಂದ ಈ ವರ್ಷ ನಮ್ಮ ಸಂಸ್ಥೆ ಮತ್ತು ಎಸ್.ಎಂ.ಲಿಂಗಪ್ಪ ಚಾರಿಟಬಲ್ ಟ್ರಸ್ಟ್ ವತಿಯಿಂದ ಪರಮಪೂಜ್ಯ ಶ್ರೀ ಎಸ್.ಎಂ.ಲಿಂಗಪ್ಪನವರ ಜನ್ಮ ಶತಮಾನೋತ್ಸವವನ್ನು ಆಚರಿಸಲು ತೀರ್ಮಾನಿಸಿದ್ದೇವೆ ಎಂದರು. ಈಗಾಗಲೇ ಜನ್ಮ ಶತಮಾನೋತ್ಸವ ಆಚರಣ ಸಮಿತಿಯನ್ನು ರಚಿಸಿ, ಸಮಿತಿಯ ವತಿಯಿಂದ ತಾಲೂಕಿನ ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ನಡೆಸುವ ಕ್ರೀಡಾಕೂಟವನ್ನು ಆಯೋಜನೆ ಮಾಡುವುದು ಮತ್ತು ಬಹುಮಾನಗಳನ್ನು, ಪ್ರಶಸ್ತಿ ಪತ್ರಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗಿದೆ. ಇದಲ್ಲದೆ ಶ್ರೀ ಎಸ್.ಎಂ.ಲಿಂಗಪ್ಪನವರನ್ನು ಕುರಿತು ಪುಸ್ತಕವನ್ನು ಪ್ರಕಟಿಸಲು ಕ್ರಮ ಕೈಗೊಳ್ಳಲಾಗಿದೆ. ಇದಲ್ಲದೆ ಎಸ್.ಎಂ.ಲಿಂಗಪ್ಪನವರ ಜನ್ಮ ಶತಮಾನೋತ್ಸವ ಸಾಹಿತ್ಯ ಮಾಲಿಕೆಯಡಿ ತಾಲೂಕಿನ ಐವರು ಲೇಖಕರ (ಸಾಹಿತಿಗಳ) ಪುಸ್ತಕಗಳನ್ನು ಹೊರತರಲು ನಿರ್ಧರಿಸಲಾಗಿದೆ. ಮತ್ತು ಎಸ್.ಎಂ.ಲಿಂಗಪ್ಪನವರ ಅನುಯಾಯಿಗಳು, ಅವರ ಶಿಷ್ಯಂದಿರು ಜನಸಾಮಾನ್ಯರುಗಳಿಂದ ಎಸ್.ಎಂ.ಲಿಂಗಪ್ಪನವರನ್ನು ಕುರಿತು ಲೇಖನಗಳನ್ನ ಆಹ್ವಾನಿಸಲಾಗಿದೆ. ಈ ಲೇಖನಗಳನ್ನ ಒಟ್ಟುಗೂಡಿಸಿ ಸಂಸ್ಮರಣ ಗ್ರಂಥವನ್ನು |

| | | |
|---|---|---|
| | | ಪ್ರಕಟಿಸಲು ಕಾರ್ಯೋನ್ಮುಖರಾಗಿದ್ದೇವೆ. ತಾಲೂಕಿನ ಎಲ್ಲಾ ಪ್ರೌಢ ಶಾಲೆಗಳಲ್ಲಿ "ಸಹಕಾರ ಶಿಲ್ಪಿ ಪರಮಪೂಜ್ಯ ಶ್ರೀ ಎಸ್.ಎಂ. ಲಿಂಗಪ್ಪನವರಿಗೆ ನೂರರ ನಮನ" ಕಾರ್ಯಕ್ರಮವನ್ನು ಆಗಸ್ಟ್ 21–2018 ರಿಂದ ಸೆಪ್ಟೆಂಬರ್ 10–2018 ರೊಳಗೆ ಹಮ್ಮಿಕೊಳ್ಳಲು ಸಮಿತಿಯಲ್ಲಿ ತೀರ್ಮಾನಿಸಲಾಗಿದೆ. ಈ ಕಾರ್ಯಕ್ರಮದ ಉದ್ಘಾಟನೆ ಯನ್ನು ಆಗಸ್ಟ್ 21–2018 ರಂದು ಎಸ್.ಎಂ.ಲಿಂಗಪ್ಪ ನವರ ಜನ್ಮಭೂಮಿ ಶೀಳನೆರೆಯಲ್ಲಿ ಹಾಗೂ ಸಮಾರೋಪ ಸಮಾರಂಭವನ್ನು ಅವರ ಕರ್ಮಭೂಮಿ ಗ್ರಾಮಭಾರತಿಯಲ್ಲಿ ಮಾಡಲು ತೀರ್ಮಾನಿಸಿದ್ದೇವೆ. ಇದಲ್ಲದೆ ಡಿಸೆಂಬರ್ – 18 – 2018 ರಂದು ಜನ್ಮ ಶತಮಾನೋತ್ಸವ ಕಾರ್ಯಕ್ರಮವನ್ನು ಸಂಸ್ಥೆಯ ವತಿಯಿಂದ ವಿಜೃಂಭಣೆಯಿಂದ ಆಚರಿಸಲು ತೀರ್ಮಾನಿಸಲಾಗಿದೆ ಎಂದರು.<br>ನಾನು ಅಧ್ಯಕ್ಷನಾದಾಗ ಸಂಸ್ಥೆಯ ಆರ್ಥಿಕ ಪರಿಸ್ಥಿತಿ ಚೆನ್ನಾಗಿರಲಿಲ್ಲ. ಸಂಬಳ ನೀಡಲು ಸಹ ಹಣದ ಕೊರತೆ ಇತ್ತು. ಆಗ ನನ್ನ ನೆರವಿಗೆ ಧಾವಿಸಿದವರು ದಿ॥ ಬಿ.ಎಸ್.ಲಕ್ಷ್ಮಿಪತಿಜೋಯಿಸರವರು, ಎ.ಎಂ.ನಂಜುಂಡೇ ಗೌಡರು ಹಾಗೂ ನನ್ನ ಮಾತೃಶ್ರೀಯವರಾದ ಶ್ರೀಮತಿ ಕೆ.ಎಂ.ಪುಟ್ಟಲಕ್ಷ್ಮಮ್ಮ ನವರು ಸಂಸ್ಥೆಗೆ ಅಗತ್ಯವಿದ್ದಾಗ ಧನ ಸಹಾಯವನ್ನು ಈ ಮೂವರು ಮಾಡಿರುತ್ತಾರೆ ಹಾಗೂ ನನ್ನ ತಾಯಿಯವರು ಸೈಕಲ್ ಸ್ಟ್ಯಾಂಡಿಗೆ ಶೀಟುಗಳನ್ನು ಮತ್ತು ಕಿಡ್ಸ್ ವಿಭಾಗಕ್ಕೆ ಆಟೋಪಕರಣಗಳನ್ನು ಒದಗಿಸಿರುವುದಕ್ಕೆ ಧನ್ಯವಾದಗಳು ಅರ್ಪಿಸುತ್ತೇನೆ. ಇದಲ್ಲದೆ ಎಸ್.ಎಂ.ಲಿಂಗಪ್ಪ ಟ್ರಸ್ಟ್ ಆಡಳಿತ ಮಂಡಳಿಯವರು ಸಹ ನಮಗೆ ಅಗತ್ಯವಿದ್ದಾಗ ಧನ |

| | | |
|---|---|---|
| | | ಸಹಾಯ ಮಾಡಿರುತ್ತಾರೆ ಅವರಿಗೂ ಸಹ ಧನ್ಯವಾದಗಳನ್ನ ತಿಳಿಸಿದರು. ಮುಂದುವರೆದಂತೆ ನಾನು ಈ ಸಂಸ್ಥೆಯ ಅಧ್ಯಕ್ಷನಾಗಿ ಹತ್ತು ವರ್ಷಗಳನ್ನು ಪೂರೈಸಿದ್ದೇನೆ. ಹತ್ತು ವರ್ಷಗಳಲ್ಲಿ ಸಂಸ್ಥೆಯಲ್ಲಿ ಸುಮಾರು ರೂ ಎರಡುವರೆ ಕೋಟಿಗೂ ಅಧಿಕ ವೆಚ್ಚದಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ಹಣ ವಿನಯೋಗಿಸಲಾಗಿದೆ. ಅಲ್ಲದೆ ದಾಖಲಾತಿಯು ಸಹ ವರ್ಷದಿಂದ ವರ್ಷಕ್ಕೆ ಸುಧಾರಿಸುತ್ತಿರುವುದು ಸಂಸ್ಥೆಯ ನೌಕರರ ಶ್ರಮದಿಂದ ಎಂಬುದು ಅರ್ಥವಾಗುತ್ತದೆ ಎಂದರು. ಅವರುಗಳಿಗೆ ಈ ಸಂದರ್ಭದಲ್ಲಿ ಸಂಸ್ಥೆಯಿಂದ ಹಾಗೂ ನನ್ನ ವೈಯಕ್ತಿಕವಾಗಿ ಅಭಿನಂದನೆಗಳನ್ನ ಸಲ್ಲಿಸುತ್ತಿದ್ದೇನೆ ಎಂದರು. ಸಂಸ್ಥೆಯ ಎಲ್ಲಾ ನೌಕರರುಗಳಿಗೆ ಕಳೆದ ಹತ್ತು ವರ್ಷಕ್ಕೆ ಹೋಲಿಸಿದ್ದಲ್ಲಿ ಸಂಬಳವನ್ನು ನಿಯಮಿತವಾಗಿ ಏರಿಕೆ ಮಾಡುತ್ತಾ ಸರಿ ಸುಮಾರು ಐದನೇ ವೇತನ ಆಯೋಗದ ಮೂಲವೇತನದ ಹತ್ತಿರಕ್ಕೆ ಬಂದಿರುತ್ತದೆ ಎಂದು ತಿಳಿಸಲು ಸಂತೋಷತ್ತೇನೆ ಎಂದರು. ಇದೇ ರೀತಿ ಸಂಸ್ಥೆಯ ಎಲ್ಲಾ ನೌಕರರು ಇನ್ನೂ ಉತ್ತಮವಾಗಿ ಕರ್ತವ್ಯ ಮಾಡುವುದರ ಮುಖಾಂತರ ಸಂಸ್ಥೆಯ ಅಭಿವೃದ್ಧಿಗೆ ಶ್ರಮಿಸಬೇಕೆಂದು ಕೋರಿದರು. |
| 11. | ವಂದನಾರ್ಪಣೆ | ಸಂಸ್ಥೆಯ ಪ್ರೌಢಶಾಲೆಯ ಶ್ರೀ ಹೆಚ್.ಎನ್.ವಜ್ರಪ್ರಸಾದ್ ರವರು ಸಭೆಯಲ್ಲಿ ಹಾಜರಿದ್ದ ಗೌರನ್ವಿತ ಅಧ್ಯಕ್ಷರು, ನಿರ್ದೇಶಕರು, ಸದಸ್ಯರುಗಳು, ಎಲ್ಲಾ ವಿಭಾಗಗಳ ಸಿಬ್ಬಂದಿ ವರ್ಗದವರಿಗೆ ವಂದನೆಗಳನ್ನ ಸಲ್ಲಿಸಿದರು. |

| | | |
|---|---|---|
| 12. | ರಾಷ್ಟ್ರಗೀತೆ | ಸಭೆಯಲ್ಲಿ ಹಾಜರಿದ್ದ ಎಲ್ಲರೂ ಎದ್ದು ನಿಂತು ಗೌರವಯುತವಾಗಿ ರಾಷ್ಟ್ರಗೀತೆಯನ್ನ ಹಾಡುವುದರ ಮೂಲಕ ಸಭೆಯನ್ನು ಮುಕ್ತಾಯಗೊಳಿಸಲಾಯಿತು. |

ದಿನಾಂಕ: 29.07.2018

ಸ್ಥಳ: ಗ್ರಾಮ ಭಾರತಿ ವಿದ್ಯಾಸಂಸ್ಥೆ ಆವರಣ

ಕೆ.ಆರ್.ಪೇಟೆ.

–ಸಹಿ–

(ಎಸ್.ಸಿ.ಕಿರಣ್ ಕುಮಾರ್)

(ಸಭಾಧ್ಯಕ್ಷರು)

## ಮಹಾಸಭೆ: 31

## 2018–19 ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ

## ತಾ॥ 21.07.2019

ಗ್ರಾಮಭಾರತಿ ವಿದ್ಯಾಸಂಸ್ಥೆ (ರಿ) ಕೃಷ್ಣರಾಜಪೇಟೆ, ಈ ವಿದ್ಯಾಸಂಸ್ಥೆಯ 2018–19 ನೇ ಸಾಲಿನ ವಾರ್ಷಿಕ ಮಹಾಸಭೆಯನ್ನ ದಿನಾಂಕ: 21.07.2019 ನೇ ಭಾನುವಾರ ಬೆಳಿಗ್ಗೆ 10:30 ಗಂಟೆಗೆ ಸರಿಯಾಗಿ ವಿದ್ಯಾಸಂಸ್ಥೆ ಆವರಣದಲ್ಲಿ ಸಂಸ್ಥೆಯ ಘನ ಅಧ್ಯಕ್ಷರಾದ ಶ್ರೀಮಾನ್ ಎಸ್.ಸಿ.ಕಿರಣ್ ಕುಮಾರ್ ರವರ ಘನ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಈ ಮಹಾಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳು.

ಹಾಜರಿ :– ಹಾಜರಾದ ಸದಸ್ಯರುಗಳ ಹಾಜರಿ ಸಹಿಯನ್ನ ಅಲಾಯಿದ ಪಡೆದುಕೊಳ್ಳಲಾಗಿದೆ.

| | ವಿಷಯ | ತೀರ್ಮಾನ |
|---|---|---|
| 1. | ದೇವತಾ ಪ್ರಾರ್ಥನೆ | ವಿದ್ಯಾಸಂಸ್ಥೆಯ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕಿಯರುಗಳಾದಂತಹ ಶ್ರೀಮತಿ ಲೀಲಾವತಿ ಮತ್ತು ಶ್ರೀಮತಿ ಜಯಶ್ರೀಯವರ ಜೊತೆಯಲ್ಲಿ ಶ್ರೀಮತಿ ವೀಣಾರವರು ಪ್ರಾರ್ಥನೆಯನ್ನು ಸುಮಧುರವಾಗಿ ನಡೆಸಿಕೊಟ್ಟರು. |
| 2. | ಸ್ವಾಗತ ಭಾಷಣ | ವಿದ್ಯಾಸಂಸ್ಥೆಯ ಎಸ್.ಎಂ.ಲಿಂಗಪ್ಪ ಶಿಕ್ಷಣ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಶ್ರೀ ಪಿ.ಸುರೇಶ ರವರು ಸಂಸ್ಥೆಯ ಗೌರನ್ವಿತ ಅಧ್ಯಕ್ಷರು, ಕಾರ್ಯದರ್ಶಿಯವರು, ನಿರ್ದೇಶಕರುಗಳು, ಸಂಸ್ಥೆಯ ಸದಸ್ಯರುಗಳು ಹಾಗೂ ಸಂಸ್ಥೆಯ ಎಲ್ಲಾ ವಿಭಾಗದ ಮುಖ್ಯಸ್ಥರು, ಉಪನ್ಯಾಸಕರು, ಶಿಕ್ಷಕರು ಹಾಗೂ ಸಿಬ್ಬಂದಿ ವರ್ಗದವರನ್ನ ತುಂಬು ಹೃದಯದಿಂದ ಸ್ವಾಗತಿಸಿದರು. |
| 3. | ಸರ್ವ ಸದಸ್ಯರ ವಾರ್ಷಿಕ ಮಹಾಸಭೆ 2018–19 ನೇ ಸಾಲಿನ ಆಹ್ವಾನ | ಸರ್ವಸದಸ್ಯರ ವಾರ್ಷಿಕ ಮಹಾಸಭೆ 2018–19 ರ ಸಾಲಿನ ಆಹ್ವಾನ ಪತ್ರಿಕೆಯನ್ನು ಸಂಸ್ಥೆಯ ಎಸ್.ಎಂ.ಲಿಂಗಪ್ಪ ಪದವಿ ಪೂರ್ವ ಕಾಲೇಜಿನ |

| | | |
|---|---|---|
| | ಪತ್ರಿಕೆಯನ್ನ ಓದಿ ರೆಕಾರ್ಡ್ ಮಾಡುವ ವಿಚಾರ. | ಪ್ರಾಂಶುಪಾಲರಾದ ಶ್ರೀ ಬಿ.ಎಸ್.ರಘುಪತಿಯವರು ಆಹ್ವಾನ ಪತ್ರಿಕೆಯನ್ನ ಓದಿದ್ದನ್ನ ಸಭೆಯು ಸರ್ವಾನುಮತದಿಂದ ಒಪ್ಪಿ ರೆಕಾರ್ಡ ಮಾಡತಕ್ಕದ್ದೆಂದು ತೀರ್ಮಾನಿಸಿತು. |
| 4. | ಹಿಂದಿನ ಮಹಾಸಭೆಯ ವರದಿಯನ್ನು ಓದಿ ರೆಕಾರ್ಡ್ ಮಾಡುವುದು | ಹಿಂದಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ವರದಿಯನ್ನು (ನಡಾವಳಿ) ಸಂಸ್ಥೆಯ ಗ್ರಾಮಭಾರತಿ ಪ್ರೌಢಶಾಲೆ ಮುಖ್ಯಶಿಕ್ಷಕರಾದ ಹೆಚ್.ಎಸ್.ಕೃಷ್ಣರವರು ಓದಿದ್ದನ್ನ ಹಾಗೂ ಈ ನಡಾವಳಿಗಳನ್ನ ವಿಡಿಯೋ ಮೂಲಕ ತೋರಿಸಿದ್ದನ್ನ ಸಭೆಯು ರೆಕಾರ್ಡ್ ಮಾಡತಕ್ಕದ್ದೆಂದು ಸರ್ವಾನುಮತದಿಂದ ತೀರ್ಮಾನಿಸಿತು. |
| 5. | ಸಂಸ್ಥೆಯ 2018–19 ನೇ ಸಾಲಿನ ವರದಿಯನ್ನು ಮಂಡಿಸವ ವಿಚಾರ. | ಸಂಸ್ಥೆಯು 2018–19 ನೇ ಸಾಲಿನಲ್ಲಿ ನಡೆಸಿರುವ ವಿವಿಧ ಕಾರ್ಯಕ್ರಮಗಳ ಸಂಪೂರ್ಣ ವರದಿಯನ್ನು ಸಂಸ್ಥೆಯ ಪ್ರೌಢಶಾಲಾ ವಿಭಾಗದ ಸಹ ಶಿಕ್ಷಕರಾದ ಹೆಚ್.ಎನ್.ವಜ್ರಪ್ರಸಾದ್ ರವರು ವಿಡಿಯೋ ಮೂಲಕ ಓದಿದ್ದನ್ನ, ಸಭೆಯು ವೀಕ್ಷಿಸಿ, ಅದನ್ನ ಚರ್ಚಿಸಿ ಸಂಸ್ಥೆಯ ವರದಿಯನ್ನ ಸಭೆಯು ಸರ್ವಾನುಮತದಿಂದ ಒಪ್ಪಿ ಅಂಗೀಕರಿಸತಕ್ಕದ್ದೆಂದು ತೀರ್ಮಾನಿಸಿತು.<br>ವಿಶೇಷ ವರದಿ:– ಇದರ ಜೊತೆ 2018–19 ರಲ್ಲಿ ನಡೆದ "ಎಸ್.ಎಂ.ಲಿಂಗಪ್ಪನವರ ನೂರರ ನಮನ" ಕಾರ್ಯಕ್ರಮಗಳಲ್ಲಿ ಆದ ವಿವಿಧ ಕಾರ್ಯಕ್ರಮಗಳ ವಿಶೇಷ ವರದಿಯನ್ನ ಸಹಶಿಕ್ಷಕರಾದ ಶ್ರೀ ಹೆಚ್.ಎನ್.ವಜ್ರಪ್ರಸಾದ್ ರವರು ಹಾಗೂ ಇಡೀ ಕಾರ್ಯಕ್ರಮ ಚಿತ್ರಣವನ್ನ ಸಂಕಲನ ಮಾಡಿದವರು ಹಿರೆಮಟ್, ಈ ವಿಶೇಷ ಕಾರ್ಯಕ್ರಮವನ್ನ ವಿಡಿಯೋ ಮೂಲಕ ತೋರಿಸಿದ್ದನ್ನ ವಿಕ್ಷಿಸಿ ಸಭೆಯು ತುಂಬಾ ಸಂತೋಷವನ್ನ ವ್ಯಕ್ತಪಡಿಸಿತು. |

| | | |
|---|---|---|
| 6. | 2018–19ನೇ ಸಾಲಿನ ಲೆಕ್ಕ ಪರಿಶೋಧಕರ ವರದಿಯನ್ನು ಪರಿಶೀಲಿಸಿ ಅಂಗೀಕರಿಸುವುದು. | 2018–19ನೇ ಸಾಲಿನ ಲೆಕ್ಕಪರಿಶೋಧಕರ ವರದಿಯನ್ನ ಹೆಚ್.ಎನ್.ವಜ್ರಪ್ರಸಾದ್ ರವರು ಮಂಡಿಸಿದರು. ಲೆಕ್ಕ ಪರಿಶೋದಿಸಲ್ಪಟ್ಟ ವರದಿಯನ್ನ ವಿಡಿಯೋ ಚಿತ್ರಣದ ಮೂಲಕ ತೋರಿಸಲಾಯಿತು. ಇದನ್ನ ಸಭೆಯು ಚರ್ಚಿಸಿ, ಪರಿಶೀಲಿಸಿ ಅಂಗೀಕರಿಸತಕ್ಕದ್ದೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು. |
| 7. | 2019–20 ನೇ ಸಾಲಿನ ಬಡ್ಜೆಟ್ ಮಂಜೂರು ಮಾಡುವುದು. | 2019–20ನೇ ಸಾಲಿನ ಬಡ್ಜೆಟ್ ನ್ನ ವಿದ್ಯಾಸಂಸ್ಥೆಯ ಕಾರ್ಯದರ್ಶಿಯವರಾದ ಶ್ರೀ ಕೆ.ಜಿ.ಹುಚ್ಚೇಗೌಡರ ಪರವಾಗಿ ಶ್ರೀ ಹೆಚ್.ಎಸ್.ಕೃಷ್ಣರವರು ಕೆಳಕಂಡಂತೆ ಮಂಡಿಸಿದರು. |

**2019–2020ನೇ ಸಾಲಿನ ಬಡ್ಜೆಟ್ ಮಂಜುರಾತಿ ವಿವರ.**

| ಕ್ರ.ಸಂ. | ವಿವರ | 2018–19ನೇ ಸಾಲಿಗೆ ಮಂಜೂರಾಗಿರುವುದು | 2018–19ನೇ ಸಾಲಿಗೆ ಖರ್ಚಾಗಿರುವುದು | 2019–20ನೇ ಸಾಲಿಗೆ ಮಂಜೂರಾತಿ ಕೋರಿರುವುದು. |
|---|---|---|---|---|
| 1 | ಸಂಸ್ಥೆಯ ನೌಕರರ ಸಂಬಳ | 50,00,000–00 | 43,87,536–00 | 55,00,000–00 |
| 2 | ವಾರ್ಷಿಕ ವಿದ್ಯುಚ್ಛಕ್ತಿ | 1,00,000–00 | 71,819–00 | 1,25,000–00 |
| 3 | ವಾರ್ಷಿಕ ಮಹಾಸಭೆಯ ಖರ್ಚು | 50,000–00 | 20,100–00 | 50,000–00 |
| 4 | ಪುಸ್ತಕ ಮತ್ತು ವಿಜ್ಞಾನ ಉಪಕರಣಗಳು | 50,000–00 | –––– | 50,000–00 |
| 5 | ಪ್ರಯಾಣ ಭತ್ಯೆ | 25,000–00 | –––– | 25,000–00 |
| 6 | ಅತಿಥಿ ಸತ್ಕಾರ ಮತ್ತು ಗೌರವ ಧನ | 2,00,000–00 | 34,266–00 | 2,00,000–00 |
| 7 | ಅಂಚೆ ವೆಚ್ಚ | 50,000–00 | 3,000–00 | 5,000–00 |
| 8 | ಅನಿರೀಕ್ಷಿತ ವೆಚ್ಚ | 1,50,000–00 | –––– | 1,50,000–00 |
| 9 | ಜಾಹಿರಾತು ವೆಚ್ಚ | 25,000–00 | –––– | 25,000–00 |
| 10 | ಫರ್ನಿಚರ್ ವೆಚ್ಚ | 2,00,000–00 | –––– | 2,00,000–00 |
| 11 | ಸಾದಿಲ್ವಾರ್ ವೆಚ್ಚ ಮತ್ತು ಲೇಖನ ಸಾಮಾಗ್ರಿಗಳು | 2,00,000–00 | 1,22,000–00 | 2,00,000–00 |
| 12 | ವಿದ್ಯಾಸಂಸ್ಥೆ ಕಟ್ಟಡ ಹಾಗೂ ಆಸ್ತಿ ನಿರ್ವಹಣ ವೆಚ್ಚ | 30,00,000–00 | 38,400–00 | 20,00,000–00 |
| 13 | ಮುಂಗಡ ಹಣ ಮತ್ತು ಸಾಲಗಳ ಮರುಪಾವತಿ ವೆಚ್ಚ | 1,60,000–00 | –––– | 1,60,000–00 |
| 14 | ಸ್ಥಿರ ನಿಧಿಗಾಗಿ | 10,00,000–00 | –––– | 10,00,000–00 |
| 15 | ಬಿ.ಇಡಿ., ಪಿ.ಯು.ಸಿ. ನವೀಕರಣ ಶುಲ್ಕ ಪಾವತಿಸಲು | 2,00,000–00 | 1,61,520–00 | 2,00,000–00 |
| | **ಒಟ್ಟು** | **1,03,65,000–00** | **48,28,641–00** | **98,90,000–00** |

| | | |
|---|---|---|
| | | ಮೇಲ್ಕಂಡ ಮಂಡಿಸಿದ ಬಡ್ಜೆಟ್ ನ್ನ ಮಂಜೂರು ಮಾಡತಕ್ಕದ್ದೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು. |
| 8. | 2019–20 ನೇ ಸಾಲಿನ ಆಡಳಿತ ಮಂಡಳಿ ರಚನೆ. | 2019–20 ನೇ ಸಾಲಿನ ಆಡಳಿತ ಮಂಡಳಿಯ ಸದಸ್ಯರು ಮತ್ತು ಪದನಾಮಗಳನ್ನ ಕಾರ್ಯದರ್ಶಿಯವರಾದ ಶ್ರೀ ಕೆ.ಜಿ.ಹುಚ್ಚೇಗೌಡರ ಪರವಾಗಿ ಶ್ರೀಮತಿ ಜಯಶ್ರೀ ರವರು ಕೆಳಕಂಡಂತೆ ಮಂಡಿಸಿದರು. |

| ಹೆಸರು | ಪದನಾಮ |
|---|---|
| 1. ಶ್ರೀ ಎಸ್.ಸಿ.ಕಿರಣ್ ಕುಮಾರ್ ರವರು | ಅಧ್ಯಕ್ಷರು |
| 2. ಶ್ರೀ ಕೆ.ಜಿ.ಹುಚ್ಚೇಗೌಡರು | ಕಾರ್ಯದರ್ಶಿ |
| 3. ಶ್ರೀ ಎ.ಎಂ.ನಂಜುಂಡೇಗೌಡರು | ನಿರ್ದೇಶಕರು |
| 4. ಶ್ರೀ ಎಸ್.ಎಸ್.ಶಾಂತಹೃದಯರವರು | ನಿರ್ದೇಶಕರು |
| 5. ಶ್ರೀ ಎಸ್.ಸಿ.ರಾಮಲಿಂಗೇಗೌಡರು | ನಿರ್ದೇಶಕರು |
| 6. ಶ್ರೀಮತಿ ಕೆ.ಎಂ.ಪುಟ್ಟಲಕ್ಷ್ಮಮ್ಮನವರು | ನಿರ್ದೇಶಕರು |
| 7. ಶ್ರೀ ಬಿ.ಎಸ್.ಚಂದ್ರಶೇಖರ್ ರವರು | ನಿರ್ದೇಶಕರು |
| 8. ಶ್ರೀ ಎಲ್.ಎನ್.ಯಶ್ವಂತ್ ಕುಮಾರ್ ರವರು | ನಿರ್ದೇಶಕರು |
| 9. ಶ್ರೀ ಎಂ.ಜಿ.ಪರಮೇಶ್ ರವರು | ನಿರ್ದೇಶಕರು |

| | | |
|---|---|---|
| 9. | ಸಂಸ್ಥೆಯ ಸದಸ್ಯರುಗಳಿಗೆ ಸಲಹೆಗಳನ್ನ ನೀಡಲು ಅವಕಾಶದ ವಿಚಾರ. | ಸಂಸ್ಥೆಯ ಸದಸ್ಯರುಗಳಿಗೆ ಸಲಹೆ ನೀಡುವ ಅವಕಾಶದ ಸಂಬಂಧ ಮೊದಲಿಗೆ ಸಂಸ್ಥೆಯ ಪ್ರೌಢಶಾಲೆಯಲ್ಲಿನ ನಿವೃತ್ತ ಕನ್ನಡ ಭಾಷಾ ಶಿಕ್ಷಕರು ಹಾಗೂ ಸದಸ್ಯರಾದ ಶ್ರೀ ಕೆ ಅಣ್ಣೇಗೌಡರು, ದಿವಂಗತ ಪೂಜ್ಯ, ರಾಜಕೀಯ ಸಂತ ಎಸ್.ಎಂ.ಲಿಂಗಪ್ಪನವರು, ಎಸ್.ಸಿ.ಚಿಕ್ಕಣ್ಣಗೌಡರು ಹಾಗೂ ಎಂ.ಜಿ.ಗಿರಿಗೌಡರನ್ನ ಸ್ಮರಿಸುತ್ತಾ, ಈ ದಿನ ಮಹಾಸಭೆಯ ವೇದಿಕೆಯಲ್ಲಿ ಆಸೀನರಾಗಿರುವ |

| | | |
|---|---|---|
| | | ದೂರದರ್ಶತ್ವವುಳ್ಳ ನಲ್ಮೆಯ ಅಧ್ಯಕ್ಷರಾದ ಶ್ರೀ ಎಸ್.ಸಿ.ಕಿರಣ್ ಕುಮಾರ್ ರವರು ಹಾಗೂ ಅವರ ಬೆನ್ನೆಲುಬುಗೆ ನಿಂತಿರುವ ಸಂಸ್ಥೆಯ ನಿರ್ದೇಶಕರು ಹಾಗೂ ಸಂಸ್ಥೆಯ ಎಲ್ಲಾ ನೌಕರರ ವೃಂದದವರು ಹಾಗೂ ಎಲ್ಲಾ ಆತ್ಮೀಯರೇ ಸನ್ಮಾನ್ಯ ಪೂಜ್ಯ ಎಸ್.ಎಂ.ಲಿಂಗಪ್ಪನವರು ಹಳ್ಳಿಯ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಗ್ರಾಮಭಾರತಿ ವಿದ್ಯಾಸಂಸ್ಥೆಯನ್ನು ಸ್ಥಾಪಿಸಿದರು. ಈ ವಿದ್ಯಾಸಂಸ್ಥೆಯಲ್ಲಿ ಗ್ರಾಮೀಣ ಮಕ್ಕಳಿಗಲ್ಲದೆ ನಮ್ಮಂತಹ ಗ್ರಾಮೀಣ ಪ್ರತಿಭೆಗಳನ್ನ ಗುರುತಿಸಿ ಕೆಲಸ ಕೊಟ್ಟು (ಉದ್ಯೋಗ) ನಮ್ಮ ಜೀವಕ್ಕೆ ದಾರಿ ತೋರಿಸಿದರು. ಅವರ ಕಾಲದಲ್ಲಿ ಪ್ರೌಢಶಾಲಾ ವಿಭಾಗ ಹೊಂದಿದ್ದು, 150 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದರು. ಅವರ ಕಾಲದಲ್ಲೇ ಸಂಸ್ಥೆಯ ಹೆಸರು ರಾಜ್ಯ ವ್ಯಾಪಿಯಾಗಿತ್ತು<br>ತದನಂತರ ವಿಧಿಯ ಕರೆಗೆ ಒಬ್ಬಟ್ಟು ಈ ಲೋಕ ತ್ಯಜಿಸಿದರು. ನಂತರ ನನಗೆ ಆತ್ಮೀಯರಾದ ಎಸ್.ಸಿ.ಚಿಕ್ಕಣ್ಣಗೌಡರು ಅಧ್ಯಕ್ಷರಾದರು. ಅವರು ಎಲ್ಲರೊಡನೆ ಬಹಳ ಆತ್ಮೀಯವಾಗಿರುತ್ತಿದ್ದರು. ಸಂಸ್ಥೆಗೆ ಪದೇ ಪದೇ ಭೇಟಿ ಇಟ್ಟು ಹೆಚ್ಚು ಸಮಯವನ್ನು ಇಲ್ಲೇ ಕಳೆಯುತ್ತಿದ್ದರು. 3 ತರಗತಿಗಳಿದ್ದ ಪ್ರೌಢಶಾಲೆಯನ್ನು 9 ತರಗತಿಗಳವರೆಗೆ ಏರಿಕೆ ಮಾಡಿದ್ದಲ್ಲದೆ, ಗ್ರಾಮಭಾರತಿ ಹಿರಿಯ ಪ್ರಾಥಮಿಕ ಶಾಲೆ, ಬಿ.ಇಡಿ., ಡಿ.ಇಡಿ. ಹಾಗೂ ಪದವಿಪೂರ್ವ ಕಾಲೇಜುಗಳನ್ನ ಎಸ್.ಎಂ.ಲಿಂಗಪ್ಪನವರ ಹೆಸರಿನಲ್ಲಿ ಪ್ರಾರಂಭಿಸಿದರು. ಹಳೆ ಕಟ್ಟಡದಲ್ಲಿದ್ದ ಸಂಸ್ಥೆಯನ್ನ ಹೊಸ ಕಟ್ಟಡಕ್ಕೆ ವರ್ಗಾಯಿಸಿ ಬೃಹದಾಕಾರದ ಕಟ್ಟಡವನ್ನ ನಿರ್ಮಿಸಿದರು. |

| | | |
|---|---|---|
| | | ಸಂಸ್ಥೆ ಉಚ್ಛ್ರಾಯ ಸ್ಥಿತಿಯಲ್ಲಿದ್ದ ಸಂದರ್ಭದಲ್ಲಿ ಅಕಾಲಿಕ ಮರಣ ಹೊಂದಿದರು. ನಂತರ ಬಂದ ಎಸ್.ಸಿ.ಕಿರಣ್ ಕುಮಾರ್ ರವರು ಯುವಕರು, ಹೇಗೆ ನಡೆಸುತ್ತಾರೆ ಎಂದು ಆತಂಕವಿತ್ತು. ಆದರೆ ಹಿರಿಯರ ಮಾರ್ಗದರ್ಶನದಲ್ಲಿ ಸಂಸ್ಥೆಯನ್ನು ಉತ್ತಮವಾಗಿ ನಡೆಸಿಕೊಂಡು ಹೋಗುತ್ತಾ ಹಾಗೂ ಅವರ ಹಿರಿಯರ ಆದರ್ಶಗಳನ್ನ ಪಾಲಿಸಿಕೊಂಡು ಸಂಸ್ಥೆಯನ್ನು ಮುನ್ನಡೆಸಿಕೊಂಡು ಹೋಗುತ್ತಿದ್ದಾರೆ. ಹಿರಿಯರ ಕನಸುಗಳನ್ನ ಸಾಕಾರಗೊಳಿಸುತ್ತಿದ್ದಾರೆ. ಇವರು ಹೀಗೆ ಸಂಸ್ಥೆಯನ್ನು ಮುನ್ನಡೆಸುತ್ತಾ ಹೋಗಲಿ ಎಂದು ಹಾಗೂ ಅವರಿಗೆ ಆರೋಗ್ಯ, ಆಯಸ್ಸು ಹಾಗೂ ಐಶ್ವರ್ಯಗಳನ್ನ ದೇವರು ದಯಪಾಲಿಸಲಿ ಎಂದು ಹಾರೈಸುತ್ತಾ ತಮ್ಮ ಮಾತುಗಳನ್ನು ಮುಗಿಸಿದರು.<br>ಸಂಸ್ಥೆ ಮತ್ತೊಬ್ಬ ಸದಸ್ಯರು ಹಾಗೂ ಗ್ರಾಮಭಾರತಿ ಪ್ರೌಢಶಾಲೆಯ ನಿವೃತ್ತ ವಿಜ್ಞಾನ ಶಿಕ್ಷಕರಾದ ಶ್ರೀ ಟಿ.ಸುರೇಶ್ ರವರು ಸಭೆಯನ್ನು ಕುರಿತು ಈ ಸಂಸ್ಥೆಯನ್ನು ಕಟ್ಟಿ ಬೆಳೆಸಿದ 3 ಅಧ್ಯಕ್ಷರುಗಳ ಜೊತೆ ಕರ್ತವ್ಯವನ್ನು ನಿರ್ವಹಿಸಿದ್ದೇನೆ. ಇವರುಗಳನ್ನು ನಾನು ಒಂದು ಕಟ್ಟಡಕ್ಕೆ ಹೋಲಿಸಲು ಬಯಸುತ್ತೇನೆ ಎಂದರು. ಅದರಲ್ಲೂ ಮೊದಲಿಗೆ ಎಸ್.ಎಂ.ಲಿಂಗಪ್ಪನವರು ಕಟ್ಟಡದ ಅಡಿಪಾಯ, ಎಸ್.ಸಿ.ಚಿಕ್ಕಣ್ಣಗೌಡರು ಅಡಿಪಾಯದ ಮೇಲಿನ ಕಟ್ಟಡವನ್ನು ನಿರ್ಮಿಸಿದರು. ಎಸ್.ಸಿ.ಕಿರಣ್ ಕುಮಾರ್ ರವರು ಕಟ್ಟಡಕ್ಕೆ ಸುಂದರವಾದ ವಿನ್ಯಾಸವನ್ನು ಕೊಟ್ಟಿರುತ್ತಾರೆ. ಒಟ್ಟಾರೆ ಎಲ್ಲದಕ್ಕೂ ತಳಪಾಯ ಬಿಗಿಯಾಗಿದ್ದರಿಂದ ಈ ಸಂಸ್ಥೆ ಬೃಹದಾಕಾರವಾಗಿ ಬೆಳೆಯಲು ಸಾಧ್ಯವಾಗಿದೆ ಎಂದರು. |

| | | |
|---|---|---|
| | | ಎಸ್.ಎಂ.ಲಿಂಗಪ್ಪನವರು ತಮಗೆ ಆಗದವರನ್ನು ಕರೆಸಿ ಕಾರ್ಯಕ್ರಮಗಳನ್ನ ನಡೆಸುತ್ತಿದ್ದರು. ಅವರು ನನಗೆ ಅವನನ್ನು ಏಕೆ ಕರೆಸಿದ್ದೀರಿ ಎಂದು ಕೇಳುತ್ತಿರಲಿಲ್ಲ. ನಾನು ವಿಜ್ಞಾನ ಪರಿಷತ್ ಕಾರ್ಯಕ್ರಮಗಳನ್ನ ಮಾಡುತ್ತಿದ್ದಾಗ ಅವರೇ ಈ ವಿಜ್ಞಾನ ಪರಿಷತ್ತಿಗೆ ತಮ್ಮ ಟಿ.ಎ.ಪಿ.ಸಿ.ಎಂ.ಎಸ್. ನ ಧರ್ಮನಿಧಿಯಿಂದ ಹಣವನ್ನ ನೀಡಿದ್ದರು. ಸಂಸ್ಥೆಯ ಬೆಳವಣಿಗೆಗೆ ಒಮ್ಮೆ ನಮ್ಮನ್ನು ರಾಮಕೃಷ್ಣ ಆಶ್ರಮಕ್ಕೆ ಕಳುಹಿಸಿದ್ದರು. ಅಲ್ಲಿನ ವ್ಯವಸ್ಥೆಗಳನ್ನ ತಿಳಿದುಕೊಂಡು ಅವುಗಳನ್ನು ನಮ್ಮ ಸಂಸ್ಥೆಗೆ ಅಳವಡಿಸಿಕೊಳ್ಳುವಂತೆ ಪ್ರೋತ್ಸಾಹಿಸಿದರು. ಕೆಲವೊಮ್ಮೆ ಸರ್ಕಾರದಿಂದ ಸಂಬಳ ಬರುವುದು ತಡವಾದರೆ ಸಂಸ್ಥೆಯಿಂದ ನಮಗೆ ಅಡ್ವಾನ್ಸ್ ರೂಪದಲ್ಲಿ ಹಣವನ್ನ ಕೊಡುತ್ತಿದ್ದು, ನೀವು ಹಣದ ಬಗ್ಗೆ ಯೋಚನೆ ಮಾಡಬೇಡಿ ಚೆನ್ನಾಗಿ ಪಾಠ ಮಾಡಿ ಎಂದು ಹೇಳುತ್ತಿದ್ದರು.<br>ಎರಡನೇ ಅಧ್ಯಕ್ಷರಾದ ಶ್ರೀ ಎಸ್.ಸಿ.ಚಿಕ್ಕಣ್ಣಗೌಡರು ಸರಳ ಜೀವಿ ಅವರ ಜೊತೆ ನಾನು ಜಗಳ ಮಾಡಿದರು ಮಾರನೇ ದಿನ ಮಾತನಾಡುತ್ತಿದ್ದರು. ಅವರು ಯಾವುದೇ ದ್ವೇಷವಿಲ್ಲದೆ ನಿಷ್ಕಲ್ಮಶ ಮನಸ್ಸಿನವರಾಗಿದ್ದರು. ಇವರು ತಮ್ಮ ಆಡಳಿತ ಅವಧಿಯಲ್ಲಿ ಅನೇಕ ವಿಭಾಗಗಳನ್ನ ಸ್ಥಾಪಿಸಿದರು.<br>ಈಗಿನ 3 ನೇ ಅಧ್ಯಕ್ಷರಾದ ಶ್ರೀ ಎಸ್.ಸಿ.ಕಿರಣ್ ಕುಮಾರ್ ರವರು ಆಡಳಿತದಲ್ಲಿ ಸಂಪೂರ್ಣ ಪಾರದರ್ಶಕತೆ ಕಾಯ್ದುಕೊಂಡು ಬಂದಿದ್ದಾರೆ. ಅದಕ್ಕೆ ಒಂದು ಉದಾಹರಣೆ ಹೇಳುವುದಾದರೆ ಎಸ್.ಎಂ.ಲಿಂಗಪ್ಪನವರ ಜನ್ಮ ಶತಮಾನೋತ್ಸವದ |

| | | |
|---|---|---|
| | | ನೂರರ ನಮನ ಕಾರ್ಯಕ್ರಮದಲ್ಲಿ ಸಂಪೂರ್ಣ ಅವರ ಸ್ವಂತ ಹಣವನ್ನು ಖರ್ಚು ಮಾಡಿದ್ದರು ಸಹ ಅದರ ಲೆಕ್ಕವನ್ನು ಸಮಿತಿಯ ಮುಂದೆ ಮಂಡಿಸಿ ಅನುಮೋದನೆಯನ್ನು ಪಡೆದರು. ಅವರು ಕಾರ್ಯಕ್ರಮದಲ್ಲಿ ಆದ ಖರ್ಚು ವೆಚ್ಚಗಳ ಲೆಕ್ಕವನ್ನು ನಮಗೆ ಕೊಡುವ ಅವಶ್ಯಕತೆ ಇರಲಿಲ್ಲ. ಆದರೂ ಸಹ ಲೆಕ್ಕವನ್ನು ಕೊಟ್ಟಿರುವುದು ಅವರ ಪಾರದರ್ಶಕತೆಗೆ ನಿದರ್ಶನವಾಗಿದೆ. 'ಎಸ್.ಎಮ್. ಲಿಂಗಪ್ಪನವರ ನೂರರ ನಮನ' ಕಾರ್ಯಕ್ರಮವನ್ನು ನಾವುಗಳು ನಿರೀಕ್ಷಿಸಿದ್ದಕ್ಕಿಂತ ಹೆಚ್ಚು ಅದ್ದೂರಿಯಾಗಿ, ಶಿಸ್ತು ಬದ್ಧವಾಗಿ, ಎಲ್ಲೂ ಕೊರತೆ ಬರದ ರೀತಿಯಲ್ಲಿ ವ್ಯವಸ್ಥಿತವಾಗಿ ನಡೆಸಿದ್ದು ಸಾರ್ವಜನಿಕರ ಉತ್ತಮ ಪ್ರಶಂಸೆಗೆ ಪಾತ್ರವಾಯಿತು ಎಂದರು. ಈ ಕಾರ್ಯಕ್ರಮದಿಂದ ನಮಗೆ ಹಳೆಯ ಶಿಷ್ಯರನ್ನು ನೋಡುವ ಭಾಗ್ಯ ಸಿಕ್ಕಿತು. ಅವರೆಲ್ಲ ನಮ್ಮನ್ನು ಅಭಿನಂದಿಸಿದ ರೀತಿ ಇಂತಹ ಶಿಷ್ಯರನ್ನು ಪಡೆದ ನಾವು ಎಷ್ಟು ಭಾಗ್ಯಶಾಲಿಗಳು ಎಂದೆನಿಸಿತು ಎಂದರು. ಇವರ ಕಾಲದಲ್ಲಿ ಇಷ್ಟು ವ್ಯವಸ್ಥಿತವಾಗಿ ಈ ಕಾರ್ಯಕ್ರಮವನ್ನು ನಡೆಸಿದ್ದಕ್ಕೆ ಹಾಗೂ ಇದೇ ರೀತಿ ಸಂಸ್ಥೆಯನ್ನು ಅಧ್ಯಕ್ಷರಾದ ಶ್ರೀ ಎಸ್.ಸಿ.ಕಿರಣ್ ಕುಮಾರ್ ರವರು ನಡೆಸಿಕೊಂಡು ಹೋಗುತ್ತಾರೆ ಎಂದು ಆಶಿಸುತ್ತಾ ತಮ್ಮ ಮಾತನ್ನು ಮುಗಿಸಿದರು. |
| 10. | ಅಧ್ಯಕ್ಷರ ಭಾಷಣ | ಅಧ್ಯಕ್ಷರು ಈ ಕೆಳಕಂಡಂತೆ ತಮ್ಮ ಭಾಷಣವನ್ನು ಮಾಡಿದರು.<br>ಕಳೆದ ಸಾಲಿನಲ್ಲಿ ನಾವು ಸಂಸ್ಥೆಯ ವತಿಯಿಂದ ಆಯೋಜಿಸಿದ ಎಸ್.ಎಂ.ಲಿಂಗಪ್ಪ ಜನ್ಮ ಶತಮಾನೋತ್ಸವ ಕಾರ್ಯಕ್ರಮ ಬಹಳ |

| | | |
|---|---|---|
| | | ವಿಜೃಂಭಣೆಯಿಂದ ಜರುಗಿದ್ದು, ನನಗೆ ಬಹಳ ಹರ್ಷವನ್ನುಂಟು ಮಾಡಿತು. ಈ ಕಾರ್ಯಕ್ರಮದ ಯಶಸ್ಸಿಗೆ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸಲಹೆ, ಸಹಕಾರ ನೀಡಿದ ಪ್ರತಿಯೊಬ್ಬರಿಗೂ ಧನ್ಯವಾದಗಳು ಅರ್ಪಿಸಿದರು. ನಂತರ ಮುಂದುವರೆದು ಮಾತನಾಡುತ್ತಾ ಈ ಕಾರ್ಯಕ್ರಮದ ಬಗ್ಗೆ ಎಸ್.ಎಂ.ಲಿಂಗಪ್ಪನವರ ಅಭಿಮಾನಿಯೊಬ್ಬರು ಮಂಡ್ಯದಿಂದ ಫೋನ್ ಮಾಡಿ ನನಗೆ ಧನ್ಯವಾದಗಳು ಅರ್ಪಿಸಿ, ನಾನು ಪತ್ರಿಕೆಯಲ್ಲಿ ಎಸ್.ಎಂ.ಲಿಂಗಪ್ಪನವರ ಜನ್ಮ ಶತಮಾನೋತ್ಸವ ಕಾರ್ಯಕ್ರಮದ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಪಡೆದಿದ್ದೇನೆ. ಎಸ್.ಎಂ.ಲಿಂಗಪ್ಪನವರ ಸಮಕಾಲಿನವರೆಲ್ಲರ ಪುಸ್ತಕ ಪ್ರಕಟಣೆಯಾಗಿದ್ದವು. ಆದರೆ ಎಸ್.ಎಂ.ಲಿಂಗಪ್ಪನವರ ಬಗ್ಗೆ ಯಾವ ಪುಸ್ತಕವು ಪ್ರಕಟಣೆಯಾಗಿಲ್ಲವೆಂಬ ಕೊರಗು ಇತ್ತು. ಆದರೆ ಇಂದು ನೀವು ಆ ಕೊರಗನ್ನು ನೀಗಿಸಿದಿರಿ ಮತ್ತು ಮಂಡ್ಯ ಜಿಲ್ಲೆಯ ಯಾವೊಬ್ಬ ರಾಜಕಾರಣಿಗಳಿಗೂ ಶಂಕರಗೌಡರೊಳಗೊಂಡಂತೆ ಈ ರೀತಿಯ ಅದ್ದೂರಿ ಅರ್ಥಪೂರ್ಣ ಜನ್ಮ ಶತಮಾನೋತ್ಸವ ಕಾರ್ಯಕ್ರಮ ಯಾರು ಮಾಡಿರಲಿಲ್ಲ. ಇದಕ್ಕೆ ಪ್ರಮುಖ ಕಾರಣ ನಿಮ್ಮಂತೆ ಮುಖಂಡತ್ವ ವಹಿಸಲು ಯಾರು ಮುಂದೆ ಬರಲಿಲ್ಲ. ನಾನು ನಿಮ್ಮನ್ನ ಮುಖತಃ ಭೇಟಿ ಮಾಡಿ ನಿಮಗೆ ಅಭಿನಂದನೆ ತಿಳಿಸಬೇಕು. ಆದರೆ ನನಗೆ ಪ್ರಯಾಣ ಮಾಡಲು ಆಗದಿರುವ ಕಾರಣ ಫೋನ್ ಮಾಡುತ್ತಿದ್ದೇನೆ ಅನ್ಯತಾ ಭಾವಿಸಬೇಡಿ ಎಂದರು.<br>ಮುಂದುವರೆದು ಮಾತನಾಡುತ್ತಾ ನಾನು ಹತ್ತು ವರ್ಷಗಳ ಹಿಂದೆ ಸಂಸ್ಥೆಯ ಅಧ್ಯಕ್ಷನಾದಾಗ ಮೊದಲ |

| | | |
|---|---|---|
| | | ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ಸದಸ್ಯರಾದ ದಿವಂಗತ ಛೇರ್ಮನ್ ಶಿವಣ್ಣಗೌಡರು ಎಸ್.ಎಮ್. ಲಿಂಗಪ್ಪನವರ ಹಾಗೂ ಎಸ್.ಸಿ.ಚಿಕ್ಕಣ್ಣಗೌಡರ ಪ್ರತಿಮೆಯನ್ನು ಸ್ಥಾಪಿಸಬೇಕೆಂಬ ಬೇಡಿಕೆ ಇಟ್ಟಾಗ ನಾನು ಮೂರು ವರ್ಷ ಸಮಯ ತೆಗೆದುಕೊಂಡು ನಂತರ ಅವರ ಬೇಡಿಕೆಯನ್ನು ತಿರಸ್ಕರಿಸಿ ಸಂಸ್ಥೆಯಲ್ಲಿ ಯಾರೊಬ್ಬರ ಪ್ರತಿಮೆಯನ್ನು ಸ್ಥಾಪಿಸುವುದು ಬೇಡ ಬದಲಾಗಿ ಅವರ ಆದರ್ಶಗಳನ್ನ ನಮ್ಮಲ್ಲಿ ನಾವು ಅಳವಡಿಸಿಕೊಳ್ಳುವ ಮೂಲಕ ಅವರನ್ನು ಸದಾ ನೆನಿಯುವ ಕೆಲಸ ಮಾಡೋಣ ಎಂದು ಹೇಳಿದ್ದೆ. ಅದರಂತೆ ಅವರ ಆದರ್ಶಗಳನ್ನ ಮುಂದಿನ ಪೀಳಿಗೆಗೆ ತಲುಪಿಸುವ ಕೆಲಸವನ್ನ ಎಸ್.ಎಂ.ಲಿಂಗಪ್ಪನವರ ಜನ್ಮ ಶತಮಾನೋತ್ಸವ ಹಾಗೂ ಶೀಲವಂತ ರಾಜಕಾರಣಿ ಎಸ್.ಎಂ.ಲಿಂಗಪ್ಪ ಅಭಿನಂದನ ಗ್ರಂಥವನ್ನು ಲೋಕಾರ್ಪಣೆಗೊಳಿಸುವುದರ ಮೂಲಕ ಮಾಡಿದ್ದೇನೆ ಎಂದರು. ಕಳೆದ ಹತ್ತು ವರ್ಷಗಳ ಹಿಂದೆ ನಾನು ಸಂಸ್ಥೆಯ ಅಭಿವೃದ್ಧಿಗಾಗಿ ಹಾಕಿಕೊಂಡಿದ್ದ ಗುರಿಯನ್ನು ತಲುಪಿದ್ದೇನೆ. ಈಗ ನಾನು ಮುಂದಿನ 10 ವರ್ಷಗಳಿಗೆ ಯೋಜನೆಯನ್ನು ಹಾಕಿಕೊಂಡಿದ್ದೇನೆ. ಅದರಲ್ಲಿ ಪ್ರಮುಖವಾದದ್ದು ಸಂಸ್ಥೆಯನ್ನು ಸ್ವಾವಲಂಬಿ ಸಂಸ್ಥೆಯನ್ನಾಗಿಸುವುದು. ಅಲ್ಲದೆ ಸಂಸ್ಥೆಯ ನೌಕರರ ಸಂಬಳದ ಕನಿಷ್ಠ ಅರ್ಧದಷ್ಟು ಸಂಪನ್ಮೂಲ ಸಂಸ್ಥೆಯ ಹೆಸರಿನಲ್ಲಿರುವ ಠೇವಣಿಯಿಂದ ಬರುವಂತಾಗಬೇಕು. ಆ ನಿಟ್ಟಿನಲ್ಲಿ ನನ್ನ ಮುಂದಿನ ಹೆಜ್ಜೆ ಇಡಲು ಅಣಿಯಾಗುತ್ತಿದ್ದೇನೆ. ಅದಕ್ಕೆ ತಮ್ಮೆಲ್ಲರ ಸಹಕಾರ |

| | | |
|---|---|---|
| | | ಅಗತ್ಯವೆಂದು ತಿಳಿಸಿ ಎಲ್ಲರಿಗೂ ವಂದಿಸಿ ತಮ್ಮ ಭಾಷಣವನ್ನು ಮುಗಿಸಿದರು. |
| 11. | ವಂದನಾರ್ಪಣೆ | ಸಂಸ್ಥೆಯ ಬಿ.ಇಡಿ. ವಿಭಾಗದ ಶ್ರೀ ಶಿವರಾಮೇಗೌಡರು ಸಭೆಯಲ್ಲಿದ್ದ ಅಧ್ಯಕ್ಷರು, ಕಾರ್ಯದರ್ಶಿಗಳು, ನಿರ್ದೇಶಕರು, ಸದಸ್ಯರು ಹಾಗೂ ಎಲ್ಲಾ ಸಿಬ್ಬಂದಿ ವರ್ಗದವರಿಗೆ ವಂದನೆಗಳನ್ನ ಸಲ್ಲಿಸಿದರು. |
| 12. | ರಾಷ್ಟ್ರಗೀತೆ | ಸಭೆಯಲ್ಲಿ ಹಾಜರಿದ್ದ ಎಲ್ಲರೂ ಎದ್ದು ನಿಂತು ಗೌರವಯುತವಾಗಿ ರಾಷ್ಟ್ರಗೀತೆಯನ್ನ ಹಾಡುವುದರ ಮೂಲಕ ಸಭೆಯನ್ನು ಮುಕ್ತಾಯಗೊಳಿಸಲಾಯಿತು. |

ತಾರೀಖು: 21.07.2019 –ಸಹಿ–

ಸ್ಥಳ: ಗ್ರಾಮ ಭಾರತಿ ವಿದ್ಯಾಸಂಸ್ಥೆ ಆವರಣ (ಎಸ್.ಸಿ.ಕಿರಣ್ ಕುಮಾರ್)21/07/19

ಕೆ.ಆರ್.ಪೇಟೆ.

## ಮಹಾಸಭೆ: 32

# 2019–20 ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ

## ತಾ॥ 30.07.2020

ಗ್ರಾಮಭಾರತಿ ವಿದ್ಯಾಸಂಸ್ಥೆ (ರಿ) ಕೃಷ್ಣರಾಜಪೇಟೆ, ಈ ವಿದ್ಯಾಸಂಸ್ಥೆಯ 2019–20 ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನ ದಿನಾಂಕ: 30.07.2020 ನೇ ಭಾನುವಾರ ಬೆಳಿಗ್ಗೆ 10:30 ಗಂಟೆಗೆ ಸರಿಯಾಗಿ ವಿದ್ಯಾಸಂಸ್ಥೆ ಆವರಣದಲ್ಲಿ ಸಂಸ್ಥೆಯ ಘನ ಅಧ್ಯಕ್ಷರಾದ ಶ್ರೀಮಾನ್ ಎಸ್.ಸಿ.ಕಿರಣ್ ಕುಮಾರ್ ರವರ ಘನ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಈ ಮಹಾಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳು.

ಹಾಜರಿ :– ಹಾಜರಾದ ಸದಸ್ಯರುಗಳ ಹಾಜರಿ ಸಹಿಯನ್ನ ಅಲಾಯಿದ ಪಡೆದುಕೊಳ್ಳಲಾಗಿದೆ.

| | ವಿಷಯ | ತೀರ್ಮಾನ |
|---|---|---|
| 1. | ದೇವತಾ ಪ್ರಾರ್ಥನೆ | ವಿದ್ಯಾಸಂಸ್ಥೆಯ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕಿಯರುಗಳಾದಂತಹ ಶ್ರೀಮತಿ ಲೀಲಾವತಿ ಮತ್ತು ಶ್ರೀಮತಿ ಜಯಶ್ರೀಯವರ ಜೊತೆಯಲ್ಲಿ ಶ್ರೀಮತಿ ವೀಣಾರವರು ಪ್ರಾರ್ಥನೆಯನ್ನು ಸುಮಧುರವಾಗಿ ನಡೆಸಿಕೊಟ್ಟರು. |
| 2. | ಸ್ವಾಗತ ಭಾಷಣ | ವಿದ್ಯಾಸಂಸ್ಥೆಯ ಎಸ್.ಎಂ.ಲಿಂಗಪ್ಪ ಶಿಕ್ಷಣ ಮಹಾ ವಿದ್ಯಾಲಯದ ಪ್ರಾಂಶುಪಾಲರಾದ ಶ್ರೀ ಪಿ.ಸುರೇಶ್ ರವರು ಸಂಸ್ಥೆಯ ಗೌರನ್ವಿತ ಅಧ್ಯಕ್ಷರು, ಕಾರ್ಯದರ್ಶಿಯವರು, ನಿರ್ದೇಶಕರುಗಳು, ಸಂಸ್ಥೆಯ ಸದಸ್ಯರುಗಳು ಹಾಗೂ ಸಂಸ್ಥೆಯ ಎಲ್ಲಾ ವಿಭಾಗದ ಮುಖ್ಯಸ್ಥರು, ಉಪನ್ಯಾಸಕರು, ಶಿಕ್ಷಕರು ಹಾಗೂ ಸಿಬ್ಬಂದಿ ವರ್ಗದವರನ್ನ ತುಂಬು ಹೃದಯದಿಂದ ಸ್ವಾಗತಿಸಿದರು. |

| | | |
|---|---|---|
| 3. | ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಆಹ್ವಾನ ಪತ್ರಿಕೆಯನ್ನ ಓದಿ ರೆಕಾರ್ಡ್ ಮಾಡುವ ವಿಚಾರ. | ಸರ್ವಸದಸ್ಯರ ವಾರ್ಷಿಕ ಮಹಾಸಭೆಯ 2019–20 ನೇ ಸಾಲಿನ ಆಹ್ವಾನ ಪತ್ರಿಕೆಯನ್ನು ಸಂಸ್ಥೆಯ ಎಸ್.ಎಂ.ಲಿಂಗಪ್ಪ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಬಿ.ಎಸ್.ರಘುಪತಿಯವರು ಆಹ್ವಾನ ಪತ್ರಿಕೆಯನ್ನು ಓದಿದ್ದನ್ನ ಸಭೆಯು ಸರ್ವಾನುಮತದಿಂದ ಒಪ್ಪಿ ರೆಕಾರ್ಡ ಮಾಡತಕ್ಕದ್ದೆಂದು ತೀರ್ಮಾನಿಸಿತು. |
| 4. | ಹಿಂದಿನ ಮಹಾಸಭೆಯ ವರದಿಯನ್ನು ಓದಿ ರೆಕಾರ್ಡ್ ಮಾಡುವುದು | ಹಿಂದಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ವರದಿ (ನಡಾವಳಿ) ಯನ್ನು ಸಂಸ್ಥೆಯ ಗ್ರಾಮಭಾರತಿ ಪ್ರೌಢಶಾಲೆ ಮುಖ್ಯಶಿಕ್ಷಕರಾದ ಹೆಚ್.ಎಸ್.ಕೃಷ್ಣರವರು ಓದಿದ್ದನ್ನ ಸಭೆಯು ರೆಕಾರ್ಡ್ ಮಾಡತಕ್ಕದ್ದೆಂದು ಸರ್ವಾನುಮತದಿಂದ ತೀರ್ಮಾನಿಸಿತು. |
| 5. | ಸಂಸ್ಥೆಯ 2019–20 ನೇ ಸಾಲಿನ ವರದಿಯನ್ನು ಮಂಡಿಸವ ವಿಚಾರ. | ಸಂಸ್ಥೆಯು 2019–20 ನೇ ಸಾಲಿನಲ್ಲಿ ನಡೆಸಿರುವ ಕಾರ್ಯಕ್ರಮಗಳ ಸಂಪೂರ್ಣ ವರದಿಯನ್ನ ಸಂಸ್ಥೆಯ ಪ್ರೌಢಶಾಲಾ ವಿಭಾಗದ ಸಹಶಿಕ್ಷಕರಾದ ಹೆಚ್.ಎನ್.ವಜ್ರ ಪ್ರಸಾದ್ ರವರು ಓದಿದ್ದನ್ನ, ಸಭೆಯು ಒಪ್ಪಿ ಅಂಗೀಕರಿಸತಕ್ಕದ್ದೆಂದು ಸರ್ವಾನುಮತದಿಂದ ತೀರ್ಮಾನಿಸಿತು. |
| 6. | 2019–20ನೇ ಸಾಲಿನ ಲೆಕ್ಕ ಪರಿಶೋಧಕರ ವರದಿಯನ್ನು ಪರಿಶೀಲಿಸಿ ಅಂಗೀಕರಿಸು ವುದು. | 2019–20 ನೇ ಸಾಲಿನ ಲೆಕ್ಕಪರಿಶೋಧಕರ ವರದಿಯನ್ನ ಹೆಚ್.ಎಸ್.ಕೃಷ್ಣರವರು ಮಂಡಿಸಿದರು. ಲೆಕ್ಕಪರಿಶೋಧಕ ರಿಂದ ಪರಿಶೋದಿಸಲ್ಪಟ್ಟ ವರದಿಯನ್ನ ಸಭೆಯು ಚರ್ಚಿಸಿ, ಪರಿಶೀಲಿಸಿ ಅಂಗೀಕರಿಸತಕ್ಕದ್ದೆಂದು ಸರ್ವಾನುಮತದಿಂದ ತೀರ್ಮಾನಿಸಿತು. |
| 7. | 2020–21 ನೇ ಸಾಲಿನ ಬಡ್ಜೆಟ್ ಮಂಜೂರು ಮಾಡುವುದು. | 2020–21ನೇ ಸಾಲಿನ ಬಡ್ಜೆಟ್ ನ್ನ ವಿದ್ಯಾಸಂಸ್ಥೆಯ ಕಾರ್ಯದರ್ಶಿಯವರಾದ ಶ್ರೀ ಕೆ.ಜಿ.ಹುಚ್ಚೇಗೌಡರ |

| | | |
|---|---|---|
| | | ಪರವಾಗಿ ಶ್ರೀ ಹೆಚ್.ಎಸ್.ಕೃಷ್ಣರವರು ಕೆಳಕಂಡಂತೆ ಮಂಡಿಸಿದರು. |

**2019-2020ನೇ ಸಾಲಿನ ಬಡ್ಜೆಟ್ ಮಂಜುರಾತಿ ವಿವರ.**

| ಕ್ರ.ಸಂ. | ವಿವರ | 2019-20ನೇ ಸಾಲಿಗೆ ಮಂಜೂರಾಗಿರುವುದು | 2019-20ನೇ ಸಾಲಿಗೆ ಖರ್ಚಾಗಿರುವುದು | 2020-21ನೇ ಸಾಲಿಗೆ ಮಂಜೂರಾತಿ ಕೋರಿರುವುದು. |
|---|---|---|---|---|
| 1 | ಸಂಸ್ಥೆಯ ನೌಕರರ ಸಂಬಳ | 55,00,000-00 | 52,58,355-00 | 55,00,000-00 |
| 2 | ವಾರ್ಷಿಕ ವಿದ್ಯುಚ್ಛಕ್ತಿ | 1,25,000-00 | 74,657-00 | 1,25,000-00 |
| 3 | ವಾರ್ಷಿಕ ಮಹಾಸಭೆಯ ಖರ್ಚು | 50,000-00 | ---- | 50,000-00 |
| 4 | ಪುಸ್ತಕ ಮತ್ತು ವಿಜ್ಞಾನ ಉಪಕರಣಗಳು | 50,000-00 | ---- | 50,000-00 |
| 5 | ಪ್ರಯಾಣ ಭತ್ಯೆ | 25,000-00 | ---- | 25,000-00 |
| 6 | ಅತಿಥಿ ಸತ್ಕಾರ ಮತ್ತು ಗೌರವ ಧನ | 2,00,000-00 | 40,000-00 | 2,00,000-00 |
| 7 | ಅಂಚೆ ವೆಚ್ಚ | 5,000-00 | ---- | 5,000-00 |
| 8 | ಅನಿರೀಕ್ಷಿತ ವೆಚ್ಚ | 1,50,000-00 | 1,57,079-00 | 1,50,000-00 |
| 9 | ಜಾಹಿರಾತು ವೆಚ್ಚ | 25,000-00 | ---- | 25,000-00 |
| 10 | ಫರ್ನಿಚರ್ ವೆಚ್ಚ | 2,00,000-00 | 3,41,627-00 | 2,00,000-00 |
| 11 | ಸಾದಿಲ್ವಾರ್ ವೆಚ್ಚ ಮತ್ತು ಲೇಖನ ಸಾಮಾಗ್ರಿಗಳು | 2,00,000-00 | 1,95,000-00 | 2,00,000-00 |
| 12 | ವಿದ್ಯಾಸಂಸ್ಥೆ ಕಟ್ಟಡ ಹಾಗೂ ಆಸ್ತಿ ನಿರ್ವಹಣ ವೆಚ್ಚ | 20,00,000-00 | ---- | 20,00,000-00 |
| 13 | ಮುಂಗಡ ಹಣ ಮತ್ತು ಸಾಲಗಳ ಮರುಪಾವತಿ ವೆಚ್ಚ | 1,60,000-00 | ---- | 1,60,000-00 |
| 14 | ಸ್ಥಿರ ನಿಧಿಗಾಗಿ | 10,00,000-00 | 16,00,000-00 | 10,00,000-00 |
| 15 | ಬಿ.ಇಡಿ., ಪಿ.ಯು.ಸಿ. ನವೀಕರಣ ಶುಲ್ಕ ಪಾವತಿಸಲು | 2,00,000-00 | 1,94,800-13 | 3,00,000-00 |
| | **ಒಟ್ಟು** | **98,90,000-00** | **78,61,518-13** | **99,90,000-00** |

ಮೇಲ್ಕಂಡಂತೆ ಮಂಡಿಸಿದ ಬಡ್ಜೆಟ್ ನ್ನ ಮಂಜೂರು ಮಾಡತಕ್ಕದ್ದೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

| | | |
|---|---|---|
| 8. | 2020-21 ನೇ ಸಾಲಿನ ಆಡಳಿತ ಮಂಡಳಿ ರಚನೆ. | 2020-21 ನೇ ಸಾಲಿನ ಆಡಳಿತ ಮಂಡಳಿಯ ಸದಸ್ಯರು ಮತ್ತು ಪದನಾಮಗಳನ್ನ ಕಾರ್ಯದರ್ಶಿಯವರಾದ ಶ್ರೀ ಕೆ.ಜಿ.ಹುಚ್ಚೇಗೌಡರ ಪರವಾಗಿ ಶ್ರೀಮತಿ ಜಯಶ್ರೀ ರವರು ಕೆಳಕಂಡಂತೆ ಮಂಡಿಸಿದರು. |

| ಹೆಸರು | ಪದನಾಮ |
|---|---|
| 1. ಶ್ರೀ ಎಸ್.ಸಿ.ಕಿರಣ್ ಕುಮಾರ್ ರವರು | ಅಧ್ಯಕ್ಷರು |

2. ಶ್ರೀ ಕೆ.ಜಿ.ಹುಚ್ಚೇಗೌಡರು — ಕಾರ್ಯದರ್ಶಿ
3. ಶ್ರೀ ಎ.ಎಂ.ನಂಜುಂಡೇಗೌಡರು — ನಿರ್ದೇಶಕರು
4. ಶ್ರೀ ಎಸ್.ಎಸ್.ಶಾಂತಹೃದಯರವರು — ನಿರ್ದೇಶಕರು
5. ಶ್ರೀ ಎಸ್.ಸಿ.ರಾಮಲಿಂಗೇಗೌಡರು — ನಿರ್ದೇಶಕರು
6. ಶ್ರೀಮತಿ ಕೆ.ಎಂ.ಪುಟ್ಟಲಕ್ಷ್ಮಮ್ಮನವರು — ನಿರ್ದೇಶಕರು
7. ಶ್ರೀ ಬಿ.ಎಸ್.ಚಂದ್ರಶೇಖರ್ ರವರು — ನಿರ್ದೇಶಕರು
8. ಶ್ರೀ ಎಲ್.ಎನ್.ಯಶ್ವಂತ್ ಕುಮಾರ್ ರವರು — ನಿರ್ದೇಶಕರು
9. ಶ್ರೀ ಎಂ.ಜಿ.ಪರಮೇಶ್ ರವರು — ನಿರ್ದೇಶಕರು

| | | |
|---|---|---|
| 9. | ಸಂಸ್ಥೆಯ ಸದಸ್ಯರುಗಳಿಗೆ ಸಲಹೆಗಳನ್ನ ನೀಡಲು ಅವಕಾಶದ ವಿಚಾರ. | ಸಂಸ್ಥೆಯ ಸದಸ್ಯರುಗಳಿಗೆ ಸಲಹೆ ನೀಡಲು ಅವಕಾಶ ಕೊಟ್ಟಿರುವ ವಿಚಾರದ ಸಂಬಂಧ, ಸಂಸ್ಥೆಯು ಉತ್ತಮ ರೀತಿಯಲ್ಲಿ ವ್ಯವಸ್ಥಿತವಾಗಿ ಮುನ್ನಡೆಸಿಕೊಂಡು ಅಧ್ಯಕ್ಷರು & ಆಡಳಿತ ಮಂಡಳಿ ಹೋಗುತ್ತಿರುವುದರಿಂದ ಯಾವುದೇ ಸಲಹೆ ಕೊಡುವಂತಹ ಅವಶ್ಯಕತೆ ಇಲ್ಲವೆಂದು ಸಭೆಯು ಒಕ್ಕೊರಳನಿಂದ ಸೂಚಿಸಿತು. |
| 10. | ಅಧ್ಯಕ್ಷರ ಭಾಷಣ | ಗ್ರಾಮ ಭಾರತಿ ವಿದ್ಯಾಸಂಸ್ಥೆಯ 2020-21 ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ವೇದಿಕೆಯಲ್ಲಿ ಆಸೀನರಾಗಿದ್ದ ತೀರ್ಥರೂಪ ಸಮಾನರಾದ ಕಾರ್ಯದರ್ಶಿಯವರಿಗೆ, ನಿರ್ದೇಶಕರಿಗೆ ಮಾತೃಶ್ರೀ ಯವರಿಗೆ, ಮುಖ್ಯಸ್ಥರುಗಳಿಗೆ, ಉಪಾಧ್ಯಾಯ ವೃಂದದ ವರಿಗೆ ಹಾಗೂ ಎಲ್ಲಾ ಸಿಬ್ಬಂದಿಯವರಿಗೆ ಶುಭಕಾಮನೆ ಗಳನ್ನು ತಿಳಿಸುತ್ತಾ, ಕಳೆದ ಸಾಲಿನಲ್ಲಿ ಸಂಸ್ಥೆಯು ಉತ್ತಮವಾಗಿ ಕಾರ್ಯನಿರ್ವಹಿಸಲು 2018-19 ನೇ ಸಾಲಿನಲ್ಲಿನ ಶೈಕ್ಷಣಿಕ ಸಾಧನೆಯಿಂದ 2019-20ನೇ ಸಾಲಿನಲ್ಲಿ 2018-19 ನೇ ಸಾಲಿಗಿಂತ 200 ವಿದ್ಯಾರ್ಥಿ ಗಳು ಹೆಚ್ಚು ದಾಖಲಾತಿ ಹೊಂದಿದ್ದು, ಸಂಸ್ಥೆಯ ಶೈಕ್ಷಣಿಕ |

| | | |
|---|---|---|
| | | ಗುಣಮಟ್ಟವನ್ನ ಉನ್ನತ ಸ್ಥಿತಿಗೆ ಕೊಂಡೊಯ್ಯುತ್ತಿದೆ ಎಂದು ತಿಳಿಸಿದರು. ಅಷ್ಟು ವಿದ್ಯಾರ್ಥಿಗಳಿಗೆ ಸಮಯಕ್ಕೆ ಸರಿಯಾಗಿ ಪೀಠೋಪಕರಣಗಳು, ಉಪಾಧ್ಯಾಯರ ಕೊರತೆ ಇಲ್ಲದಂತೆ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ವ್ಯಕ್ತಪಡಿಸಿದರು. ಸರ್ಕಾರಿ ಆದೇಶದಂತೆ ಎಲ್ಲಾ ರಾಷ್ಟ್ರೀಯ ಹಬ್ಬಗಳು ಹಾಗೂ ಜಯಂತಿಗಳನ್ನು ಆಚರಿಸಲಾಗಿದೆ. ಮುಂದುವರೆದು ಮಾತನಾಡುತ್ತಾ ಕಳೆದ ಮಹಾಸಭೆಯಲ್ಲಿ ತಿಳಿಸಿದಂತೆ ಸಂಸ್ಥೆಯನ್ನ ಸ್ವಾವಲಂಬಿಯಾಗಲು ಮುಂದಿನ 10 ವರ್ಷಗಳಲ್ಲಿ ಸುಮಾರು ಒಂದುವರೆ ಕೋಟಿ (1,50,00,000/–) ರೂಪಾಯಿಗಳಷ್ಟು ಠೇವಣಿ ಸಂಗ್ರಹಿಸುವ ಗುರಿ ಹೊಂದಿದ್ದು, ಅದರ ಮೊದಲ ಭಾಗವಾಗಿ ಕಳೆದ ಸಾಲಿನಲ್ಲಿ ಸುಮಾರು 15 ಲಕ್ಷ ರೂಪಾಯಿಗಳನ್ನ ಬ್ಯಾಂಕಿನಲ್ಲಿ ಅಧ್ಯಕ್ಷರು ಹಾಗೂ ಕಾರ್ಯದರ್ಶಿಯವರ ಹೆಸರಿನಲ್ಲಿ ಠೇವಣಿ ಇಡಲಾಗಿದೆ. ಕಳೆದ ಸಾಲಿನಲ್ಲಿ ತಿಂಗಳಿನಲ್ಲಿ ಕರೋನ ವೈರಸ್ ನಿಂದಾಗಿ ಲಾಕ್ ಡೌನ್ ಘೋಷಣೆಯಾದ ಹಿನ್ನೆಲೆಯಲ್ಲಿ ಏಪ್ರಿಲ್ ತಿಂಗಳಿನಲ್ಲಿ ನೀಡಬೇಕಿದ್ದ ಮಾರ್ಚಿ ತಿಂಗಳ (2020) ಸಂಬಳವನ್ನು ಮಾರ್ಚಿ 23–2020 ರಂದೇ ನೀಡ ಲಾಗಿದ್ದು, ಸರ್ಕಾರದ ಆದೇಶಗಳನ್ನ ಮತ್ತು ನಿಯಮ ಗಳನ್ನ ಪಾಲಿಸಲು ಆಡಳಿತ ಮಂಡಳಿಯು ಕ್ರಮ ಕೈಗೊಂಡಿದೆ. ಆದುದರಿಂದ ಕಳೆದ ಸಾಲಿನಲ್ಲಿ ಆಡಿಟ್ ವರದಿಯಲ್ಲಿ ನೌಕರರ ವೇತನ ಬಾಪ್ತು 13 ತಿಂಗಳದ್ದು ಸೇರಿದೆ.<br>2019ರಲ್ಲಿ ಡಿಸೆಂಬರ್ 18ರಂದು ಸಂಸ್ಥೆಯ ಸಂಸ್ಥಾಪಕ ರಾದ ದಿ॥ ಎಸ್.ಎಂ.ಲಿಂಗಪ್ಪನವರ 101ನೇ ಜನ್ಮದಿನ |

| | | |
|---|---|---|
| | | ವನ್ನು ಸರಳವಾಗಿ ಆಚರಿಸಲಾಯಿತು. ಇದೇ ಸಂದರ್ಭದಲ್ಲಿ ಶೀಲವಂತ ರಾಜಕಾರಣಿ ಎಸ್.ಎಂ.ಲಿಂಗಪ್ಪ ಶತಮಾನ ಸಂಸ್ಮರಣ ಸಂಪುಟದ ಸಾವಿರ ಪ್ರತಿಗಳ ಮುದ್ರಣವನ್ನ ಮಾಡಿಸಿ. ಇದರ ಪ್ರತಿಗಳನ್ನು ಲೋಕಾರ್ಪಣೆ ಮಾಡಲಾಯಿತು. ಅಂದು ಸದರಿ ಕಾರ್ಯಕ್ರಮದಲ್ಲಿ ಜನ್ಮ ಶತಮಾನೋತ್ಸವದಲ್ಲಿ ಭಾಗವಹಿಸಿದ್ದ ಸಂಪನ್ಮೂಲ ವ್ಯಕ್ತಿಗಳಿಗೆ, ಎಸ್.ಎಂ.ಲಿಂಗಪ್ಪನವರ ಸಂಬಂಧಿಕರಿಗೆ, ಹಿತೈಷಿಗಳಿಗೆ, ಪ್ರತಿಗಳನ್ನ ವಿತರಿಸಲಾಯಿತು ಎಂದು ತಿಳಿಸಿದರು. ಸಂಸ್ಥೆಯ ಅಜೀವ ಸದಸ್ಯರುಗಳು ಸಂಸ್ಥೆಯ ಕಛೇರಿ ಸಮಯದಲ್ಲಿ ಪಡೆದುಕೊಳ್ಳಲು ಕೋರಿದರು.<br>ಸಂಸ್ಥೆಯ ನೌಕರರನ್ನ ಉದ್ದೇಶಿಸಿ ಯಾವುದೇ ಕಾರಣಕ್ಕೂ ಈ ಕರೋನಾ ಪರಿಸ್ಥಿತಿಯಲ್ಲಿ ಕಳೆದೆರಡು ತಿಂಗಳುಗಳಿಂದ ಸಂಬಳ ನೀಡಲಾಗಲ್ಲದ್ದರಿಂದ ಯಾರು ಹತಾಶರಾಗುವ ಅವಶ್ಯಕತೆ ಇಲ್ಲ. ಒಮ್ಮೆ ಲಾಕ್ ಡೌನ್ ತೆರವಾಗಿ, ಶಾಲೆ ಪ್ರಾರಂಭವಾದ ಕೂಡಲೇ ಎಲ್ಲಾ ನೌಕರರಿಗೂ ಸಂಸ್ಥೆಯ ಆರ್ಥಿಕ ಪರಿಸ್ಥಿತಿಯನ್ನ ಗಮನದಲ್ಲಿಟ್ಟುಕೊಂಡು, ಎಷ್ಟು ಸಂಬಳ ನೀಡಬೇಕೆಂಬುದನ್ನ ತೀರ್ಮಾನಿಸುತ್ತೇನೆ. ದಯವಿಟ್ಟು ಅಲ್ಲಿಯವರೆಗೂ ತಾವುಗಳು ಆಡಳಿತ ಮಂಡಳಿಯೊಂದಿಗೆ ಸಹಕರಿಸಬೇಕೆಂದು ಮನವಿ ಮಾಡಿಕೊಂಡರು. ಮುಂದೆಯೂ ಸಹ ಸಂಸ್ಥೆಯ ಸಮಗ್ರ ಅಭಿವೃದ್ಧಿಗಾಗಿ ತಮ್ಮೆಲ್ಲರ ಸಹಕಾರ ಅತ್ಯಗತ್ಯ ಎಂದು ಹೇಳುತ್ತಾ ತಮ್ಮ ಅಧ್ಯಕ್ಷೀಯ ನುಡಿಗಳನ್ನು ಮುಗಿಸಿದರು. |
| 11. | ವಂದನಾರ್ಪಣೆ | ಸಂಸ್ಥೆಯ ಬಿ.ಇಡಿ. ವಿಭಾಗದ ಪ್ರಾಧ್ಯಾಪಕರಾದ ಶ್ರೀಕಾಂತ್ ರವರು ಸಭೆಯಲ್ಲಿದ್ದ ಅಧ್ಯಕ್ಷರು, |

| | | |
|---|---|---|
| | | ಕಾರ್ಯದರ್ಶಿಯವರು, ನಿರ್ದೇಶಕರು, ಸದಸ್ಯರು ಹಾಗೂ ಎಲ್ಲಾ ಸಿಬ್ಬಂದಿ ವರ್ಗದವರಿಗೆ ವಂದನೆಗಳನ್ನ ತಿಳಿಸಿದರು. |
| 12. | ರಾಷ್ಟ್ರಗೀತೆ | ಸಭೆಯಲ್ಲಿ ಹಾಜರಿದ್ದ ಎಲ್ಲರೂ ಎದ್ದು ನಿಂತು ಗೌರವಯುತವಾಗಿ ರಾಷ್ಟ್ರಗೀತೆಯನ್ನ ಹಾಡುವುದರ ಮೂಲಕ ಸಭೆಯನ್ನು ಮುಕ್ತಾಯಗೊಳಿಸಲಾಯಿತು. |

ತಾರೀಖು: 30.07.2020

ಸ್ಥಳ: ಗ್ರಾಮ ಭಾರತಿ ವಿದ್ಯಾಸಂಸ್ಥೆ ಆವರಣ

ಕೆ.ಆರ್.ಪೇಟೆ.

–ಸಹಿ–

(ಎಸ್.ಸಿ.ಕಿರಣ್ ಕುಮಾರ್)

ಸಭಾಧ್ಯಕ್ಷರು

## ಮಹಾಸಭೆ: 33

## 2020–21 ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ

## ತಾ॥ 31.07.2021

ಗ್ರಾಮಭಾರತಿ ವಿದ್ಯಾಸಂಸ್ಥೆ (ರಿ) ಕೃಷ್ಣರಾಜಪೇಟೆ, ಈ ವಿದ್ಯಾಸಂಸ್ಥೆಯ 2019–20 ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನ ದಿನಾಂಕ: 31.07.2021 ನೇ ಶನಿವಾರ ಬೆಳಿಗ್ಗೆ 10:30 ಗಂಟೆಗೆ ಸರಿಯಾಗಿ ವಿದ್ಯಾಸಂಸ್ಥೆ ಆವರಣದಲ್ಲಿ ಸಂಸ್ಥೆಯ ಘನ ಅಧ್ಯಕ್ಷರಾದ ಶ್ರೀಮಾನ್ ಎಸ್.ಸಿ.ಕಿರಣ್ ಕುಮಾರ್ ರವರ ಘನ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಈ ಮಹಾಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳು.

ಹಾಜರಿ :– ಹಾಜರಾದ ಸದಸ್ಯರುಗಳ ಹಾಜರಿ ಸಹಿಯನ್ನ ಅಲಾಯಿದ ಪಡೆದುಕೊಳ್ಳಲಾಗಿದೆ.

| | ವಿಷಯ | ತೀರ್ಮಾನ |
|---|---|---|
| 1. | ದೇವತಾ ಪ್ರಾರ್ಥನೆ | ವಿದ್ಯಾಸಂಸ್ಥೆಯ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕಿಯರುಗಳಾದಂತಹ ಶ್ರೀಮತಿ ಲೀಲಾವತಿ ಮತ್ತು ಶ್ರೀಮತಿ ಜಯಶ್ರೀಯವರ ಸುಮಧುರವಾಗಿ ಹಾಡುವುದರ ಮೂಲಕ ಪ್ರಾರ್ಥನೆಯನ್ನು ನಡೆಸಿಕೊಟ್ಟರು. |
| 2. | ಸ್ವಾಗತ ಭಾಷಣ | ವಿದ್ಯಾಸಂಸ್ಥೆಯ ಎಸ್.ಎಂ.ಲಿಂಗಪ್ಪ ಶಿಕ್ಷಣ ಮಹಾ ವಿದ್ಯಾಲಯದ ಪ್ರಾಂಶುಪಾಲರಾದ ಶ್ರೀ ಪಿ.ಸುರೇಶ್ ರವರು ಸಂಸ್ಥೆಯ ಅಧ್ಯಕ್ಷರಾದ ಶ್ರೀಮಾನ್ ಎಸ್.ಸಿ.ಚಿಕ್ಕಣ್ಣಗೌಡರ ಮಗ ಕಿರಣ್ ಕುಮಾರ್ ರವರು, ಕಾರ್ಯದರ್ಶಿಯವರು, ನಿರ್ದೇಶಕರುಗಳು, ಸಂಸ್ಥೆಯ ಸದಸ್ಯರುಗಳು ಹಾಗೂ ಸಂಸ್ಥೆಯ ಎಲ್ಲಾ ವಿಭಾಗದ ಮುಖ್ಯಸ್ಥರು, ಉಪನ್ಯಾಸಕರು, ಶಿಕ್ಷಕರು ಹಾಗೂ ಸಿಬ್ಬಂದಿ ವರ್ಗದವರನ್ನ ತುಂಬು ಹೃದಯದಿಂದ ಸ್ವಾಗತವನ್ನ ಬಯಸಿದರು. |

| | | |
|---|---|---|
| 3. | ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಆಹ್ವಾನ ಪತ್ರಿಕೆಯನ್ನ ಓದಿ ರೆಕಾರ್ಡ್ ಮಾಡುವ ವಿಚಾರ. | ಸರ್ವಸದಸ್ಯರ ವಾರ್ಷಿಕ ಮಹಾಸಭೆಯ 2020–21 ನೇ ಸಾಲಿನ ಆಹ್ವಾನ ಪತ್ರಿಕೆಯನ್ನು ಸಂಸ್ಥೆಯ ಎಸ್.ಎಂ.ಲಿಂಗಪ್ಪ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಬಿ.ಎಸ್.ರಘುಪತಿಯವರು ಆಹ್ವಾನಪತ್ರಿಕೆಯನ್ನು ಓದಿದ್ದನ್ನ ಸರ್ವಾನುಮತದಿಂದ ಒಪ್ಪಿ ರೆಕಾರ್ಡ ಮಾಡತಕ್ಕದ್ದೆಂದು ಸಭೆಯು ತೀರ್ಮಾನಿಸಿತು. |
| 4. | ಹಿಂದಿನ ವಾರ್ಷಿಕ ಮಹಾಸಭೆಯ ನಡಾವಳಿಯನ್ನ ಓದಿ ರೆಕಾರ್ಡ್ ಮಾಡುವ ವಿಷಯ. | ಹಿಂದಿನ ಸರ್ವಸದಸ್ಯರ ವಾರ್ಷಿಕ ಮಹಾಸಭೆಯ ನಡಾವಳಿಗಳನ್ನ ಗ್ರಾಮಭಾರತಿ ಪ್ರೌಢಶಾಲೆಯ ಮುಖ್ಯ ಶಿಕ್ಷಕರಾದ ಹೆಚ್.ಎಸ್.ಕೃಷ್ಣರವರು ಓದಿದ್ದನ್ನ ಸಭೆಯು ಸರ್ವಾನುಮತದಿಂದ ಒಪ್ಪಿ ರೆಕಾರ್ಡ್ ಮಾಡತಕ್ಕದ್ದೆಂದು ತೀರ್ಮಾನಿಸಿತು. |
| 5. | ಸಂಸ್ಥೆಯ 2020–21 ನೇ ಸಾಲಿನ ವರದಿಯನ್ನು ಮಂಡಿಸವ ವಿಚಾರ. | ಗ್ರಾಮಭಾರತಿ ವಿದ್ಯಾಸಂಸ್ಥೆಯ 2020–21 ನೇ ಸಾಲಿನಲ್ಲಿ ಸಂಸ್ಥೆಯಲ್ಲಿ ನಡೆದಿರುವ ಕಾರ್ಯಕ್ರಮಗಳ ಸಂಪೂರ್ಣ ವರದಿಯನ್ನ ಸಂಸ್ಥೆಯ ಪ್ರೌಢಶಾಲಾ ವಿಭಾಗದ ಹೆಚ್.ಎನ್.ವಜ್ರಪ್ರಸಾದ್ ರವರು ವಿವರಿಸಿದರು. ಇದನ್ನ ಸಭೆಯು ಸರ್ವಾನುಮತದಿಂದ ಒಪ್ಪಿ ಅಂಗೀಕರಿಸತಕ್ಕ ದ್ದೆಂದು ತೀರ್ಮಾನಿಸಿತು. |
| 6. | 2020–21ನೇ ಸಾಲಿನ ಲೆಕ್ಕ ಪರಿಶೋಧಕರ ವರದಿಯನ್ನು ಪರಿಶೀಲಿಸಿ ಅಂಗೀಕರಿಸು ವುದು. | 2020–21 ನೇ ಸಾಲಿನ ಸಂಸ್ಥೆಯ ಲೆಕ್ಕ ಪತ್ರಗಳನ್ನ ಆಡಿಟ್ ರಿಂದ ಪರಿಶೀಲಿಸಿ ಇದರ ವರದಿಯನ್ನ ಹೆಚ್.ಎಸ್.ಕೃಷ್ಣರವರು ಮಂಡಿಸಿದರು. ಲೆಕ್ಕಪರಿಶೋಧಕ ರಿಂದ ಪರಿಶೋದಿಸಲ್ಪಟ್ಟ ವರದಿಯನ್ನ ಸಭೆಯು ಚರ್ಚಿಸಿ, ಪರಿಶೀಲಿಸಿ ಅಂಗೀಕರಿಸತಕ್ಕದ್ದೆಂದು ಸರ್ವಾನುಮತದಿಂದ ತೀರ್ಮಾನಿಸಿತು. |
| 7. | 2021–22 ನೇ ಸಾಲಿನ ಬಡ್ಜೆಟ್ ಮಂಜೂರು ಮಾಡುವುದು. | 2021–22ನೇ ಸಾಲಿನ ಬಡ್ಜೆಟ್ ನ್ನ ವಿದ್ಯಾಸಂಸ್ಥೆಯ ಕಾರ್ಯದರ್ಶಿಯವರಾದ ಶ್ರೀ ಕೆ.ಜಿ.ಹುಚ್ಚೇಗೌಡರ |

| | | |
|---|---|---|
| | | ಪರವಾಗಿ ಶ್ರೀ ಹೆಚ್.ಎಸ್.ಕೃಷ್ಣರವರು ಕೆಳಕಂಡಂತೆ ಮಂಡಿಸಿದರು. |

**2020–2021ನೇ ಸಾಲಿನ ಬಡ್ಜೆಟ್ ಮಂಜುರಾತಿ ವಿವರ.**

| ಕ್ರ.ಸಂ. | ವಿವರ | 2019–20ನೇ ಸಾಲಿಗೆ ಮಂಜೂರಾಗಿರುವುದು | 2019–20ನೇ ಸಾಲಿಗೆ ಖರ್ಚಾಗಿರುವುದು | 2020–21ನೇ ಸಾಲಿಗೆ ಮಂಜೂರಾತಿ ಕೋರಿರುವುದು. |
|---|---|---|---|---|
| 1 | ಸಂಸ್ಥೆಯ ನೌಕರರ ಸಂಬಳ | 55,00,000–00 | 19,91,000–00 | 50,00,000–00 |
| 2 | ವಾರ್ಷಿಕ ವಿದ್ಯುಚ್ಛಕ್ತಿ | 1,25,000–00 | 47,993–00 | 1,25,000–00 |
| 3 | ವಾರ್ಷಿಕ ಮಹಾಸಭೆಯ ಖರ್ಚು | 50,000–00 | 29,795–00 | 50,000–00 |
| 4 | ಪುಸ್ತಕ ಮತ್ತು ವಿಜ್ಞಾನ ಉಪಕರಣಗಳು | 50,000–00 | 40,000–00 | 50,000–00 |
| 5 | ಪ್ರಯಾಣ ಭತ್ಯೆ | 25,000–00 | ---- | 25,000–00 |
| 6 | ಅತಿಥಿ ಸತ್ಕಾರ ಮತ್ತು ಗೌರವ ಧನ | 2,00,000–00 | 24,405–00 | 2,00,000–00 |
| 7 | ಅಂಚೆ ವೆಚ್ಚ | 5,000–00 | 6,000–00 | 5,000–00 |
| 8 | ಅನಿರೀಕ್ಷಿತ ವೆಚ್ಚ | 1,50,000–00 | 19,011–00 | 1,50,000–00 |
| 9 | ಜಾಹಿರಾತು ವೆಚ್ಚ | 25,000–00 | ---- | 25,000–00 |
| 10 | ಫರ್ನಿಚರ್ ವೆಚ್ಚ | 2,00,000–00 | ---- | 2,00,000–00 |
| 11 | ಸಾದಿಲ್ವಾರ್ ವೆಚ್ಚ ಮತ್ತು ಲೇಖನ ಸಾಮಾಗ್ರಿಗಳು | 2,00,000–00 | 1,95,488–00 | 3,00,000–00 |
| 12 | ವಿದ್ಯಾಸಂಸ್ಥೆ ಕಟ್ಟಡ ಹಾಗೂ ಆಸ್ತಿ ನಿರ್ವಹಣ ವೆಚ್ಚ | 20,00,000–00 | 62,000–00 | 10,00,000–00 |
| 13 | ಮುಂಗಡ ಹಣ ಮತ್ತು ಸಾಲಗಳ ಮರುಪಾವತಿ ವೆಚ್ಚ | 1,60,000–00 | ---- | 1,60,000–00 |
| 14 | ಸ್ಥಿರ ನಿಧಿಗಾಗಿ | 10,00,000–00 | 10,00,000–00 | 10,00,000–00 |
| 15 | ಬಿ.ಇಡಿ., ಪಿ.ಯು.ಸಿ. ನವೀಕರಣ ಶುಲ್ಕ ಪಾವತಿಸಲು | 3,00,000–00 | 1,77,771–00 | 3,00,000–00 |
| | **ಒಟ್ಟು** | **99,90,000–00** | **35,93,463–00** | **85,90,000–00** |

ಮೇಲ್ಕಂಡಂತೆ ಮಂಡಿಸಿದ ಬಡ್ಜೆಟ್ ನ್ನ ಮಂಜೂರು ಮಾಡತಕ್ಕದ್ದೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

| | | |
|---|---|---|
| 8. | 2021–22 ನೇ ಸಾಲಿನ ಆಡಳಿತ ಮಂಡಳಿ ರಚನೆ. | 2021–22 ನೇ ಸಾಲಿನ ಆಡಳಿತ ಮಂಡಳಿಯ ಸದಸ್ಯರು ಮತ್ತು ಪದನಾಮಗಳನ್ನ ಕಾರ್ಯದರ್ಶಿಯವರಾದ ಶ್ರೀ ಕೆ.ಜಿ.ಹುಚ್ಚೇಗೌಡರ ಪರವಾಗಿ ಶ್ರೀಮತಿ ಜಯಶ್ರೀ ರವರು ಕೆಳಕಂಡಂತೆ ಮಂಡಿಸಿದರು. |

| ಹೆಸರು | ಪದನಾಮ |
|---|---|
| 1. ಶ್ರೀ ಎಸ್.ಸಿ.ಕಿರಣ್ ಕುಮಾರ್ ರವರು | ಅಧ್ಯಕ್ಷರು |

2. ಶ್ರೀ ಕೆ.ಜಿ.ಹುಚ್ಚೇಗೌಡರು — ಕಾರ್ಯದರ್ಶಿ

3. ಶ್ರೀ ಎ.ಎಂ.ನಂಜುಂಡೇಗೌಡರು — ನಿರ್ದೇಶಕರು

4. ಶ್ರೀ ಎಸ್.ಎಸ್.ಶಾಂತಹೃದಯರವರು — ನಿರ್ದೇಶಕರು

5. ಶ್ರೀ ಎಸ್.ಸಿ.ರಾಮಲಿಂಗೇಗೌಡರು — ನಿರ್ದೇಶಕರು

6. ಶ್ರೀಮತಿ ಕೆ.ಎಂ.ಪುಟ್ಟಲಕ್ಷ್ಮಮ್ಮನವರು — ನಿರ್ದೇಶಕರು

7. ಶ್ರೀ ಬಿ.ಎಸ್.ಚಂದ್ರಶೇಖರ್ ರವರು — ನಿರ್ದೇಶಕರು

8. ಶ್ರೀ ಎಲ್.ಎನ್.ಯಶ್ವಂತ್ ಕುಮಾರ್ ರವರು — ನಿರ್ದೇಶಕರು

9. ಶ್ರೀ ಎಂ.ಜಿ.ಪರಮೇಶ್ ರವರು — ನಿರ್ದೇಶಕರು

ಈ ಆಡಳಿತ ಮಂಡಳಿಗೆ ಸಭೆಯು ಸರ್ವಾನುಮತದಿಂದ ಒಪ್ಪಿ ಅಂಗೀಕರಿಸತಕ್ಕದ್ದೆಂದು ತೀರ್ಮಾನಿಸಿತು.

| | | |
|---|---|---|
| 9. | ಸಂಸ್ಥೆಯ ಸದಸ್ಯರುಗಳಿಗೆ ಸಲಹೆಗಳನ್ನ ನೀಡಲು ಅವಕಾಶದ ವಿಚಾರ. | ಮೊದಲಿಗೆ ಸಂಸ್ಥೆಯ ಹಿರಿಯ ಸದಸ್ಯರಾದ ಮಂಡ್ಯ ಜಿಲ್ಲಾ ಪಂಚಾಯತ್ ನ ಮಾಜಿ ಉಪಾಧ್ಯಕ್ಷರಾದ ಬೇಲದಕೇರಿ ಪಾಪೇಗೌಡರು ಈ ಕೆಳಕಂಡಂತೆ ಮಾತನಾಡಿದರು. ಗ್ರಾಮಭಾರತಿ ವಿದ್ಯಾಸಂಸ್ಥೆಯು 1973–74 ರಲ್ಲಿ ಪ್ರಾರಂಭವಾಗಿ ಅಲ್ಲಿಂದ ಇಲ್ಲಿಯ ವರೆಗೂ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣವನ್ನು ನೀಡುತ್ತಾ ಬಂದಿದೆ. ಇದರ ಸಂಸ್ಥಾಪಕರಾದ ದಿವಂಗತ ಎಸ್.ಎಂ.ಲಿಂಗಪ್ಪನವರು ನನ್ನ ಗುರುಗಳು ನನ್ನನ್ನು ಸಹಕಾರ ಕ್ಷೇತ್ರದಿಂದ ರಾಜಕೀಯ ಕ್ಷೇತ್ರಕ್ಕೆ ಪರಿಚಯಿಸಿದರು. ಅವರ ಆಶೀರ್ವಾದ ಹಾಗೂ ಮಾರ್ಗದರ್ಶನದಿಂದ ಸಮಾಜದಲ್ಲಿ ಉನ್ನತ ಹುದ್ದೆಗಳನ್ನು ನಿಭಾಯಿಸಿದ್ದೇನೆ. ಅವರು ಕಟ್ಟಿದ ಈ ಸಂಸ್ಥೆಯು ಇನ್ನೂ ಉತ್ತಮವಾಗಿ ಸ್ಪರ್ಧಾತ್ಮಕವಾಗಿ ಬೇರೆಯ ಇತರೆ ಸಂಸ್ಥೆಗಳಿಗಿಂತ ಮುಂಚೂಣಿಗೆ ಕೊಂಡೊಯ್ಯಬೇಕು ಎನ್ನುವುದು |

| | | |
|---|---|---|
| | | ಅಭಿಲಾಷೆಯಾಗಿದೆ. ಇಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರರುಗಳಿಗೆ ಸಂಬಳವನ್ನು ಹೆಚ್ಚು ಮಾಡಿಕೊಡಬೇಕು ಹಾಗೂ ಬಡ ವಿದ್ಯಾರ್ಥಿಗಳಿಗೆ ಶುಲ್ಕದಲ್ಲಿ ರಿಯಾಯಿತಿ ಯನ್ನು ನೀಡಬೇಕೆಂದು ಅಧ್ಯಕ್ಷರಿಗೆ ಸಲಹೆಯನ್ನು ನೀಡುತ್ತಾ ತಮ್ಮ ಮಾತನ್ನು ಮುಕ್ತಾಯಗೊಳಿಸಿದರು.<br>ಎರಡನೆಯದಾಗಿ ಸಂಸ್ಥೆಯ ಮತ್ತೊಬ್ಬ ಹಿರಿಯ ಸದಸ್ಯರಾದ ಬಿ.ನಂಜಪ್ಪನವರು ತಮ್ಮ ಮಗನನ್ನ ಸೇರಿಸಲು ಬಂದಾಗ ಒಂದು ಸಾವಿರ ರೂಪಾಯಿಗಳನ್ನ ಪಡೆದು ಲಿಂಗಪ್ಪನವರು ಅಜೀವ ಸದಸ್ಯತ್ವವನ್ನು ನೀಡಲು ಕಾರ್ಯದರ್ಶಿಯವರಿಗೆ ತಿಳಿಸಿದರು. ಆಗ ನಾನು ರಾಜಕೀಯವಾಗಿ ಎಸ್.ಎಂ.ಲಿಂಗಪ್ಪನವರ ವಿರೋಧ ಪಕ್ಷದಲ್ಲಿ ಗುರುತಿಸಿಕೊಂಡಿದ್ದರಿಂದ ಅವರನ್ನ ತೆಗೆದುಕೊಳ್ಳುವುದನ್ನ ಬೇಡವೆಂದು ಸೂಕ್ಷ್ಮವಾಗಿ ತಿಳಿಸಿದರು ನನ್ನನ್ನ ಅಜೀವ ಸದಸ್ಯತ್ವವನ್ನು ನೀಡಿದರು. ಹೀಗೆ ರಾಜಕೀಯದಿಂದ ಹೊರತಾಗಿ ಸಂಸ್ಥೆಯನ್ನ ಕಟ್ಟಿ ಬೆಳೆಸಿದ್ದಾರೆ. ಇಂತಹ ಸಂಸ್ಥೆಗೆ ಎಸ್.ಸಿ.ಚಿಕ್ಕಣ್ಣಗೌಡರು (ರಾಜಣ್ಣ) ಅಧ್ಯಕ್ಷರಾಗಿ ಮುಂದುವರೆಸಿಕೊಂಡು ಬಂದು ಈಗ ಶ್ರೀ ಎಸ್.ಸಿ.ಕಿರಣ್ ಕುಮಾರ್ ರವರು ಈಗ ಮುನ್ನಡೆಸಿಕೊಂಡು ಹೋಗುತ್ತಿದ್ದಾರೆ. ಇವರ ಆಡಳಿತ ದಲ್ಲಿ ಸಂಸ್ಥೆಯನ್ನು ಪಾರದರ್ಶಕವಾಗಿ ಇಂದಿನ ಸ್ಪರ್ಧಾ ಯುಗದಲ್ಲಿ ಬೇಕಾದಂತಹ ಎಲ್ಲ ವ್ಯವಸ್ಥೆಗಳನ್ನ ಮಾಡಿರುತ್ತಾರೆ. ಸಂಸ್ಥೆಯು ಉನ್ನತವಾಗಿ ಬೆಳೆಯುವುದ ರಲ್ಲಿ ಯಾವುದೇ ಸಂಶಯವಿಲ್ಲ. ಹೀಗೆ ಸಂಸ್ಥೆಯನ್ನ ಉನ್ನತವಾಗಿ ಬೆಳೆಸಿಕೊಂಡು ಹೋಗಲು ಅವರಿಗೆ ಆಯುರಾರೋಗ್ಯ, ಐಶ್ವರ್ಯವನ್ನು ದೇವರು ನೀಡಲಿ |

| | | |
|---|---|---|
| | | ಎಂದು ಆಶಿಸುತ್ತಾ ತಮ್ಮ ಮನದಾಳದ ಮಾತುಗಳನ್ನ ಮುಕ್ತಾಯಗೊಳಿಸಿದರು.<br>ಮೂರನೆಯವರಾಗಿ ಸಂಸ್ಥೆಯ ಇನ್ನೊರ್ವ ಹಿರಿಯ ಸದಸ್ಯರಾದ ಶ್ರೀ ಎಸ್.ಸಿ.ವಿಜಯಕುಮಾರ್ ರವರು ಆಕಸ್ಮಿಕವಾಗಿ ಈ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಗೆ ನಾನು ಬಂದಿದ್ದು ಇಲ್ಲಿನ ವಾತಾವರಣ ನೋಡಿದ್ದು ನನಗೆ ಬಹಳ ಸಂತೋಷವಾಗುತ್ತಿದೆ. ಸಂಸ್ಥೆಯು ಬಹಳಷ್ಟು ಅಭಿವೃದ್ಧಿಹೊಂದಿದ್ದು, ಅದರ ಹಿಂದೆ ಸಂಸ್ಥೆಯ ನೌಕರರು ಹಾಗೂ ಆಡಳಿತ ಮಂಡಳಿಯ ಪರಿಶ್ರಮ ಎದ್ದು ಕಾಣುತ್ತಿದೆ. ಹಾಗೆಯೇ ಇನ್ನು ಮುಂದೆ ಬೃಹದಾಕಾರವಾಗಿ ಸಂಸ್ಥೆಯು ಕಿರಣ್ ಕುಮಾರ್ ರವರ ನೇತೃತ್ವದಲ್ಲಿ ಬೆಳೆಯಲಿ ಎಂದು ಆಶಿಸುತ್ತೇನೆ. ಎಂದು ತಿಳಿಸಿ ತಮ್ಮ ಮಾತನ್ನು ಮುಗಿಸಿದರು. |
| 10. | ಅಧ್ಯಕ್ಷರ ಭಾಷಣ | ಗ್ರಾಮ ಭಾರತಿ ವಿದ್ಯಾಸಂಸ್ಥೆಯ 2021–22 ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ವೇದಿಕೆಯಲ್ಲಿ ದ್ದವರಿಗೆ ಹಾಗೂ ಸರ್ವರಿಗೂ ನಮಸ್ಕರಿಸುತ್ತಾ,<br>ಕಳೆದ ಸಾಲಿನಲ್ಲಿ ಕರೋನ ಹೆಮ್ಮಾರಿಯ ಆರ್ಭಟದಿಂದ ಸರ್ಕಾರದ ಲಾಕ್ ಡೌನ್ ನಿಯಮದಿಂದಾಗಿ ಸಂಸ್ಥೆಯಲ್ಲಿ ಶೈಕ್ಷಣಿಕ ಚಟುವಟಿಕೆಗಳಿಗೆ ತಡೆಯುಂಟಾಯಿತು. ಅಲ್ಲದೆ ಆರ್ಥಿಕವಾಗಿಯೂ ಬಹಳ ನಷ್ಟ ಉಂಟಾಯಿತು. ಆದರೂ ಸಹ ಸಂಸ್ಥೆಯ ಎಲ್ಲಾ ಸಿಬ್ಬಂದಿ ವರ್ಗದವರಿಗೆ ಜೂನ್ – 2020 ರಿಂದ ಡಿಸೆಂಬರ್ – 2020 ರ ಮಾಹೆಯವರೆಗೆ ಶೇಕಡ 50ರಷ್ಟು ವೇತನವನ್ನು ನೀಡಲಾಗಿದೆ. ಅಲ್ಲದೆ ಜನವರಿ – 2021 ರಿಂದ ಪೂರ್ಣ ವೇತನವನ್ನು ನೀಡಲಾಗಿದೆ. ಅಲ್ಲದೆ ಮಕ್ಕಳ ವಿದ್ಯಾರ್ಥಿಗಳ ಬೋಧನಾ ಶುಲ್ಕದಲ್ಲಿ ಶೇಕಡ 50ರಷ್ಟು ರಿಯಾಯಿತಿಯನ್ನು ನೀಡಲಾಗಿದೆ. ಇದೇ ರೀತಿ ಮುಂದುವರೆದರೆ ಮುಂದಿನ ದಿನಗಳಲ್ಲಿ ಸಂಸ್ಥೆಯು ಆರ್ಥಿಕ ಹಿನ್ನಡೆ ಅನುಭವಿಸುವುದು. ಇಷ್ಟಾಗಿಯೂ ಕಳೆದ ವರ್ಷ 15 ಲಕ್ಷ ಠೇವಣಿ |

| | | |
|---|---|---|
| | | ಇಡುವುದರೊಂದಿಗೆ ಪ್ರಾರಂಭಿಸಿದ್ದ ಆಪತ್ ನಿಧಿಗೆ ಈ ಸಾಲಿನಲ್ಲಿಯೂ ಸಹ 10 ಲಕ್ಷ ರೂಪಾಯಿಗಳನ್ನ ಠೇವಣಿ ಇರಿಸಲಾಗಿದೆ. ಆದಷ್ಟು ಬೇಗ ಈ ಕರೋನಾ ಹೆಮ್ಮಾರಿಯೂ ದೂರವಾಗಿ ಶೈಕ್ಷಣಿಕ ಚಟುವಟಿಕೆಗಳು ಪ್ರಾರಂಭವಾಗಲೆಂದು ಆಶಿಸುತ್ತೇನೆ ಎಂದರು.<br>ಮುಂದಿನ ಸಾಲಿನಿಂದ ಸಂಸ್ಥೆಯ ಆರ್ಥಿಕ ಪರಿಸ್ಥಿತಿಯನ್ನ ಗಮನಿಸಿ ಐದು ವರ್ಷ ಪೂರೈಸಿದ ಸಿಬ್ಬಂದಿ ವರ್ಗದವರಿಗೆ ಏಪ್ರಿಲ್ ಮತ್ತು ಮೇ ಮಾಹೆಯಲ್ಲಿಯೂ ವೇತನವನ್ನು ನೀಡಲು ಸೂಕ್ತ ಕ್ರಮ ವಹಿಸುವ ಭರವಸೆಯೊಂದಿಗೆ ತಮ್ಮ ಅಧ್ಯಕ್ಷರ ಭಾಷಣವನ್ನು ಮುಕ್ತಾಯಗೊಳಿಸಿದರು. |
| 11. | ವಂದನಾರ್ಪಣೆ | ಸಂಸ್ಥೆಯ ಬಿ.ಇಡಿ. ವಿಭಾಗದ ಸಹಪ್ರಾಧ್ಯಾಪಕರಾದ ಶ್ರೀಕಾಂತ್ ರವರು ಸಭೆಯಲ್ಲಿದ್ದ ಅಧ್ಯಕ್ಷರು, ಕಾರ್ಯದರ್ಶಿಯವರು, ಆಡಳಿತ ಮಂಡಳಿಯ ನಿರ್ದೇಶಕರು ಹಾಗೂ ಸದಸ್ಯರು ಮತ್ತು ಎಲ್ಲಾ ಸಿಬ್ಬಂದಿ ವರ್ಗದವರಿಗೆ ವಂದನೆಗಳನ್ನ ತಿಳಿಸಿದರು. |
| 12. | ರಾಷ್ಟ್ರಗೀತೆ | ವಾರ್ಷಿಕ ಮಹಾಸಭೆಯಲ್ಲಿ ಹಾಜರಿದ್ದ ಎಲ್ಲರೂ ಎದ್ದು ನಿಂತು ಗೌರವಯುತವಾಗಿ ರಾಷ್ಟ್ರಗೀತೆಯನ್ನ ಹಾಡುವುದರ ಮೂಲಕ ಸಭೆಯನ್ನು ಮುಕ್ತಾಯಗೊಳಿಸಲಾಯಿತು. |

ಸ್ಥಳ: ಕೆ.ಆರ್.ಪೇಟೆ.

ತಾರೀಖು: 31.07.2021

-ಸಹಿ-

(ಎಸ್.ಸಿ.ಕಿರಣ್ ಕುಮಾರ್)31/07/2021

ಸಭಾಧ್ಯಕ್ಷರು

# ಮಹಾಸಭೆ: 34

# 2021–22 ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ

# ದಿನಾಂಕ 31–07–2022

ಗ್ರಾಮಭಾರತಿ ವಿದ್ಯಾಸಂಸ್ಥೆ (ರಿ) ಈ ವಿದ್ಯಾಸಂಸ್ಥೆಯ 2021–22ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯು ದಿನಾಂಕ 31–07–2022ನೇ ಭಾನುವಾರ ಬೆಳಗ್ಗೆ 10.30 ಘಂಟೆಗೆ ಸರಿಯಾಗಿ ವಿದ್ಯಾಸಂಸ್ಥೆಯ ಆವರಣದಲ್ಲಿ ಸಂಸ್ಥೆಯ ಅಧ್ಯಕ್ಷರಾದ ಶ್ರೀಮಾನ್ ಎಸ್.ಸಿ.ಕಿರಣ್‌ಕುಮಾರ್ ರವರ ಘನ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಈ ಮಹಾಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳು ಹಾಜರಿ ಹಾಜರಾದ ಸದಸ್ಯರುಗಳ ಹಾಜರಿಯನ್ನು ಅಲಾಯಿದವಾಗಿ ಪಡೆಯಲಾಗಿದೆ.

| | ವಿಷಯ | ತೀರ್ಮಾನ |
|---|---|---|
| 1 | ದೇವತಾ ಪ್ರಾರ್ಥನೆ | ಸಂಸ್ಥೆಯ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕಿಯರುಗಳಾದ ಶ್ರೀಮತಿ ಜಯಶ್ರೀ, ಶ್ರೀಮತಿ ಲೀಲಾವತಿ ಹಾಗೂ ಶ್ರೀಮತಿ ವೀಣಾರವರು ಸುಮಧುರವಾದ ದೇವರ ಹಾಡನ್ನು ಹಾಡಿ ಪ್ರಾರ್ಥನೆಯನ್ನು ನಡೆಸಿಕೊಟ್ಟರು. |
| 2 | ಸ್ವಾಗತ ಭಾಷಣ | ಗ್ರಾಮಭಾರತಿ ವಿದ್ಯಾಸಂಸ್ಥೆಯ ಎಸ್.ಎಂ.ಲಿಂಗಪ್ಪ ಶಿಕ್ಷಣ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಶ್ರೀ.ಪಿ.ಸುರೇಶ್ ರವರು ಸಂಸ್ಥೆಯ ಅಧ್ಯಕ್ಷರಾದ ಶ್ರೀ.ಎಸ್.ಸಿ ಕಿರಣ್‌ಕುಮಾರ್‌ರವರಿಗೆ ಕಾರ್ಯದರ್ಶಿ ಶ್ರೀ.ಕೆ.ಜಿ ಹುಚ್ಚೇಗೌಡರಿಗೆ ಆಡಳಿತ ಮಂಡಳಿಯ ನಿರ್ದೇಶಕರುಗಳಿಗೆ ಎಲ್ಲಾ ಸದಸ್ಯರುಗಳಿಗೆ ಹಾಗೂ ಎಲ್ಲಾ ವಿಭಾಗದ ಮುಖ್ಯಸ್ಥರು, ಉಪನ್ಯಾಸಕರು, ಶಿಕ್ಷಕರು ಹಾಗೂ ಎಲ್ಲಾ ಸಿಬ್ಬಂದಿ ವರ್ಗದವರನ್ನು ತುಂಬು ಹೃದಯದಿಂದ ಸ್ವಾಗತವನ್ನು ಬಯಸಿದರು. |
| 3 | ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆ ಓದಿ ರೆಕಾರ್ಡ್ ಮಾಡುವುದು. | ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ 2021–2022ನೇ ಸಾಲಿನ ಆಹ್ವಾನ ಪತ್ರಿಕೆಯನ್ನು ಸಂಸ್ಥೆಯ ಎಸ್.ಎಂ. ಲಿಂಗಪ್ಪ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾರಾದ ಶ್ರೀಬಿ.ಎಸ್.ರಘುಪತಿಯವರು ಓದಿದದರು. ಇದನ್ನು ಸಭೆಯು ಸರ್ವನುಮತದಿಂದ ಒಪ್ಪಿ ರೆಕಾರ್ಡ್ ಮಾಡತಕ್ಕದ್ದೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು. |

| | | |
|---|---|---|
| 4 | ಹಿಂದಿನ ವಾರ್ಷಿಕ ಮಹಾಸಭೆಯ ನಡಾವಳಿಯನ್ನು ಓದಿ ರೆಕಾರ್ಡ್ ಮಾಡುವ ವಿಚಾರ. | ಹಿಂದಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ನಡಾವಳಿಗಳನ್ನು ಗ್ರಾಮಭಾರತಿ ಪ್ರೌಢಶಾಲೆಯ ಮುಖ್ಯ ಶಿಕ್ಷಕರಾದ ಶ್ರೀ ಹೆಚ್.ಎಸ್.ಕೃಷ್ಣರವರು ಓದಿದ್ದನ್ನು ಸಭೆಯು ಸರ್ವಾನುಮತದಿಂದ ಒಪ್ಪಿ ರೆಕಾರ್ಡ್ ಮಾಡತಕ್ಕದ್ದೆಂದು ತೀರ್ಮಾನಿಸಿತು. |
| 5 | ಸಂಸ್ಥೆಯ 2021–2022ನೇ ಸಾಲಿನ ವರದಿಯನ್ನು ಮಂಡಿಸುವ ವಿಚಾರ. | ಸಂಸ್ಥೆಯ 2021–2022ನೇ ಸಾಲಿನಲ್ಲಿ ಸಂಸ್ಥೆಯಲ್ಲಿ ನಡೆದಿರುವ ಕಾರ್ಯಕ್ರಮಗಳು ಸಂಪೂರ್ಣ ವರದಿಯನ್ನು ಪ್ರೌಢಶಾಲಾ ವಿಭಾಗದ ಶ್ರೀ ಹೆಚ್.ಎನ್.ವಜ್ರಪ್ರಸಾದ್ ರವರು ವಿವರಿಸಿದರು. ಸಭೆಯು ಸರ್ವಾನುಮತದಿಂದ ಒಪ್ಪಿ ರೆಕಾರ್ಡ್ ಮಾಡತಕ್ಕದ್ದೆಂದು ತೀರ್ಮಾನಿಸಿತು. |
| 6 | 2021–2022ನೇ ಸಾಲಿನ ಲೆಕ್ಕ ಪರೀಶೋಧಕರ ವರದಿಯನ್ನು ಪರೀಶೀಲಿಸಿ | 2021–2022ನೇ ಸಾಲಿನ ಸಂಸ್ಥೆಯ ಲೆಕ್ಕ ಪತ್ರಗಳನ್ನು ಆಡಿಟ್‌ರಿಂದ ಪರೀಶೀಲಿಸಿ ಇದರ ವರದಿಯನ್ನು ಶ್ರೀ ಹೆಚ್.ಎಸ್.ಕೃಷ್ಣರವರು ಮಂಡಿಸಿದರು. ಇದನ್ನ ಸಭೆಯಲ್ಲಿ ಚರ್ಚಿಸಿ ಪರೀಶೀಲಿಸಿ ಅಂಗೀಕರಿಸತಕ್ಕದೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು. |
| 7 | 2022–2023ನೇ ಸಾಲಿನ ಬಡ್ಜೆಟನ್ನು ಮಂಜೂರು ಮಾಡುವ ವಿಚಾರ. | 2022–2023ನೇ ಸಾಲಿಗೆ ಸಂಸ್ಥೆಯ ಬಡ್ಜೆಟ್‌ನ್ನು ವಿದ್ಯಾಸಂಸ್ಥೆಯವರಿಂದ ಶ್ರೀ ಕೆ.ಜಿ.ಹುಚ್ಚೇಗೌಡರ ಪರವಾಗಿ ಶ್ರೀ.ಹೆಚ್.ಎಸ್.ಕೃಷ್ಣರವರು ಈ ಕೆಳಕಂಡಂತೆ ವಿವರಿಸಿದರು. |

**2022–23ನೇ ಸಾಲಿನ ಬಡ್ಜೆಟ್ ಮಂಜೂರಾತಿಗಾಗಿ ಸಿದ್ಧಪಡಿಸಿರುವ ಬಡ್ಜೆಟ್ ವಿವರ.**

| ಕ್ರ.ಸಂ. | ವಿವರ | 2021–22ನೇ ಸಾಲಿಗೆ ಮಂಜೂರಾಗಿರುವುದು (ರೂ.ಗಳಲ್ಲಿ) | 2021–22ನೇ ಸಾಲಿಗೆ ಖರ್ಚಾಗಿರುವುದು (ರೂ.ಗಳಲ್ಲಿ) | 2022–23ನೇ ಸಾಲಿಗೆ ಮಂಜೂರಾತಿ ಕೋರಿರುವುದು. (ರೂ.ಗಳಲ್ಲಿ) |
|---|---|---|---|---|
| 1 | ಸಂಸ್ಥೆಯ ನೌಕರರ ಸಂಬಳ | 50,00,000–00 | 38,09,653–00 | 75,00,000–00 |
| 2 | ವಿದ್ಯುಚ್ಛಕ್ತಿ ಶುಲ್ಕ | 1,25,000–00 | 53,803–00 | 1,50,000–00 |
| 3 | ವಾರ್ಷಿಕ ಮಹಾಸಭೆಯ ಖರ್ಚು | 50,000–00 | 10,000–00 | 50,000–00 |
| 4 | ಪುಸ್ತಕ, ವಿಜ್ಞಾನ ಉಪಕರಣಗಳು, ರಾಷ್ಟ್ರೀಯ ಹಬ್ಬಗಳು | 50,000–00 | 40516–50 | 2,00,000–00 |
| 5 | ಪ್ರಯಾಣ ಭತ್ಯೆ | 25,000–00 | 3,000–00 | 25,000–00 |
| 6 | ಅತಿಥಿ ಸತ್ಕಾರ ಮತ್ತು ಗೌರವ ಧನ | 2,00,000–00 | – | 2,00,000–00 |
| 7 | ಅಂಚೆ ವೆಚ್ಚ | 5,000–00 | 740–00 | 5,000–00 |
| 8 | ಆಡಿಟ್ ಫೀ ಮತ್ತು ಅನಿರೀಕ್ಷಿತ ವೆಚ್ಚ | 1,50,000–00 | 44,080–00 | 1,50,000–00 |
| 9 | ಜಾಹಿರಾತು ವೆಚ್ಚ | 25,000–00 | – | 25,000–00 |
| 10 | ಫರ್ನೀಚರ್ ವೆಚ್ಚ | 2,00,000–00 | – | 2,00,000–00 |

| | | | | |
|---|---|---|---|---|
| 11 | ಸಾದಿಲ್ವಾರ್ ವೆಚ್ಚ ಮತ್ತು ಲೇಖನ ಸಾಮಾಗ್ರಿಗಳು ಮತ್ತು ಪರೀಕ್ಷಾ ವೆಚ್ಚಗಳು. | 3,00,000–00 | 2,81,122–00 | 3,00,000–00 |
| 12 | ವಿದ್ಯಾಸಂಸ್ಥೆ ಕಟ್ಟಡ ನಿರ್ಮಾಣ ಹಾಗೂ ಆಸ್ತಿ ನಿರ್ವಹಣ ವೆಚ್ಚ | 10,00,000–00 | – | 50,00,000–00 |
| 13 | ಮುಂಗಡ ಹಣ ಮತ್ತು ಸಾಲಗಳ ಮರುಪಾವತಿ ವೆಚ್ಚ | 1,60,000–00 | – | 1,60,000–00 |
| 14 | ಸ್ಥಿರ ನಿಧಿಗಾಗಿ | 10,00,000–00 | 30,00,000–00 | 10,00,000–00 |
| 15 | ಸಂಸ್ಥೆ, ಬಿ.ಇಡಿ. ಹಾಗೂ ಪಿ.ಯು. ಕಾಲೇಜು ನವೀಕರಣ ಶುಲ್ಕ ಪಾವತಿಸಲು. | 3,00,000–00 | 21,270–00 | 3,00,000–00 |
| | **ಒಟ್ಟು ಮೊತ್ತ** | **85,90,000–00** | **72,64,184–50** | **1,52,65,000–00** |

| | | |
|---|---|---|
| 8 | ಸಂಸ್ಥೆಯ ಕಾರ್ಯ ನಿರ್ವಾಹಕ ಮಂಡಳಿಯ ಚುನಾವಣೆ ಫಲಿತಾಂಶ ಪ್ರಕಟಣೆ. | ಸಂಸ್ಥೆಯ ಕಾರ್ಯನಿರ್ವಾಹಕ ಮಂಡಳಿಯ ಚುನಾವಣೆ ನಡೆಸಲು ವ್ಯವಸ್ಥೆ ಮಾಡಿದ್ದು 2022–2023 ರಿಂದ 2026–2027ನೇ ಸಾಲಿಗೆ ನಡೆಯಬೇಕಾಗಿದ್ದ ಚುನಾವಣೆಗೆ ಕೆಳಕಂಡವರು ಉಮೇದುವಾರಿಕೆ ಅರ್ಜಿಯನ್ನು ಹಾಕಿದ್ದರು. ಅವರುಗಳೇ ಅವಿರೋಧವಾಗಿ ಆಯ್ಕೆಯಾಗಿರುತ್ತಾರೆಂದು ಗ್ರಾಮಭಾರತಿ ವಿದ್ಯಾಸಂಸ್ಥೆಯ ಚುನಾವಣಾಧಿಕಾರಿ ಗಳಾದ ಶ್ರೀ.ಕೆ.ಎನ್.ಚಂದ್ರಮೋಹನ್ ರವರು ಫಲಿತಾಂಶವನ್ನ ಘೋಷಣೆ ಮಾಡಿದ್ದನ್ನು ಸಭೆಯು ಸರ್ವಾನುಮತದಿಂದ ಒಪ್ಪಿ ಅಂಗೀಕಾರ ಮಾಡತಕ್ಕದೆಂದು ತೀರ್ಮಾನಿಸಿತು. |
| **ಕ್ರಮ ಸಂಖ್ಯೆ** | **ಖಾಯಂ ಸದಸ್ಯರ ಹೆಸರು ಮತ್ತು ವಿಳಾಸ** | **ಸದಸ್ಯತ್ವದ ಸಂಖ್ಯೆ** |
| 1 | ಶ್ರೀ. ಎಸ್ ಸಿ ಕಿರಣ್ ಕುಮಾರ್ ಬಿನ್ ಎಸ್ ಸಿ ಚಿಕ್ಕಣ್ಣಗೌಡ ಮನೆ ನಂ.1166, ಶ್ರೀ ಮಂಜುನಾಥನಿಲಯ, ಹಳೇ ವಿಜಯಾ ಬ್ಯಾಂಕ್ ರಸ್ತೆ, ಕೃಷ್ಣರಾಜಪೇಟೆ. | 3/3 |
| **ಕ್ರಮ ಸಂಖ್ಯೆ** | **ಉಮೇದುವಾರರ ಹೆಸರು ಮತ್ತು ವಿಳಾಸ** | **ಸದಸ್ಯತ್ವದ ಸಂಖ್ಯೆ** |
| 1. | ಶ್ರೀಮತಿ ಕೆ.ಎಂ.ಪುಟ್ಟಲಕ್ಷ್ಮಮ್ಮ ಕೋಂ. ಲೇ.ಎಸ್.ಸಿ.ಚಿಕ್ಕಣ್ಣಗೌಡ ಮನೆ ನಂ.1166, ಶ್ರೀ ಮಂಜುನಾಥನಿಲಯ, ಹಳೇ ವಿಜಯಾ ಬ್ಯಾಂಕ್ ರಸ್ತೆ, ಕೃಷ್ಣರಾಜಪೇಟೆ. | 3/9 |
| 2. | ಶ್ರೀಮತಿ ಎನ್.ಕೌಸಲ್ಯ ಕೋಂ.ಎಸ್.ಸಿ.ರಾಮಲಿಂಗೇಗೌಡ | 3/98 |

| | | |
|---|---|---|
| | ಮನೆ ನಂ.2915/1, 12ನೇ ಅಡ್ಡರಸ್ತೆ, 5ನೇ ಮುಖ್ಯರಸ್ತೆ, ವಿ.ವಿ.ಮೊಹಲ್ಲ, ಮೈಸೂರು. | |
| 3. | ಶ್ರೀ ಬಿ.ಎಸ್.ಚಂದ್ರಶೇಖರ್ ಬಿನ್ ಲೇ. ಶಿವಲಿಂಗೇಗೌಡ ಬೋಳಮಾರನಹಳ್ಳಿ, ಕಿಕ್ಕೇರಿ ಹೋ. ಕೃಷ್ಣರಾಜಪೇಟೆ ತಾಲ್ಲೂಕು. | 3/10 |
| 4. | ಶ್ರೀ ಎಸ್.ಟಿ.ಶ್ರೀನಿವಾಸ ಬಿನ್ ಲೇ. ತಿಮ್ಮೇಗೌಡ ಸಾಕ್ಷೀಬೀಡು, ಅಕ್ಕಿಹೆಬ್ಬಾಳ್ ಹೋ. ಕೃಷ್ಣರಾಜಪೇಟೆ ತಾಲ್ಲೂಕು. | 3/159 |
| 5. | ಶ್ರೀ ಬಾಲಚಂದ್ರ ಎ.ಎನ್. ಬಿನ್ ಎ.ಎಂ.ನಂಜುಡೇಗೌಡ ಮಾಲೀಕರು, ಶ್ರೀ ಶಂಭುಲಿಂಗೇಶ್ವರ ಸಾಮಿಲ್, ಹರಿಯಾಲದಮ್ಮ ಗುಡಿ, ಕೃಷ್ಣರಾಜಪೇಟೆ ತಾಲ್ಲೂಕು. | 3/156 |
| 6. | ಶ್ರೀ ಎಲ್.ವಿ.ನಾಗೇಶ ಬಿನ್ ಲೇ. ವೆಂಕಟರಾಮು ಲೋಕನಹಳ್ಳಿ, ಸಂತೇಬಾಚಹಳ್ಳಿ ಹೋ. ಕೃಷ್ಣರಾಜಪೇಟೆ ತಾಲ್ಲೂಕು. | 3/42 |
| 9. | ಸಂಸ್ಥೆಯ ಸದರ್ಯರುಗಳಿಗೆ ಸಲಹೆಗಳನ್ನು ನೀಡಲು ಅವಕಾಶ. | ಸಂಸ್ಥೆಯ ಸದಸ್ಯರುಗಳಿಗೆ ಸಲಹೆಗಳನ್ನು ನೀಡಲು ಅವಕಾಶದ ವಿಚಾರ ಬಂದಾಗ ಸಂಸ್ಥೆಯ ಅಧ್ಯಕ್ಷರು ಸಭೆಯಲ್ಲಿದ್ದ ಸದಸ್ಯರ ಅನುಮತಿಯೊಂದಿಗೆ ಸಂಸ್ಥೆಯಲ್ಲಿ ದೀರ್ಘಕಾಲ ಸೇವೆ ಸಲ್ಲಿಸಿ ನಿವೃತ್ತಿ ಹೊಂದುತ್ತಿರುವ ಶ್ರೀಯುತ ಕೆ.ಜಿ.ಹುಚ್ಚೇಗೌಡರು ಶ್ರೀಯುತ ಎ.ಎಂ. ನಂಜುಂಡೇಗೌಡರು ಹಾಗೂ ಶ್ರೀಯುತ ಎಸ್.ಸಿ ರಾಮಲಿಂಗೇಗೌಡರು ಸನ್ಮಾನಿಸಿ ಬೀಳ್ಕೊಡುಗೆ ಕೊಡಲಾಯಿತು. ಮುಂದುವರೆದು ಸಂಸ್ಥೆಯ ಬಿ.ಇಡಿ ಪ್ರಾಚಾರ್ಯರು ಪಿ. ಸುರೇಶ್‌ರವರು ನಂಜುಂಡೇಗೌಡರ ಬಗ್ಗೆ ಹೇಳುತ್ತಾ ಅವರ ಪ್ರಮಾಣಿಕತೆ ಹಾಗೂ ನಿಸ್ವಾರ್ಥ ಸೇವೆ ಬಗ್ಗೆ ಹೇಳುತ್ತಾ ಈ ಕೆಳಗಿನ ನಿದರ್ಶನವನ್ನು ತಿಳಿಸಿದರು. ನಿರ್ದೇಶಕರುಗಳಿಗೆ ಪ್ರಯಾಣ ಭತ್ಯೆ ನೀಡಲು ಅಧ್ಯಕ್ಷರು ತಿಳಿಸಿದರು. ಅದರಂತೆ ನಾವು ಪ್ರಯಾಣ ಭತ್ಯೆ ನೀಡಲು ಹೋದಾಗ ಅವರು ಅದನ್ನು ಸ್ವೀಕರಿಸದೆ ಇದ್ದದ್ದು ಅವರು ಯಾವುದೇ ರೀತಿಯ ಪ್ರತಿಫಲಾಪೇಕ್ಷೆಯನ್ನು ಪಡೆಯದೇ ಇದ್ದದ್ದು ನಮಗೆ ದಾರಿದೀಪವಾಗಿರುತ್ತದೆ ಎಂದು ಹೇಳಿದರು. ಮಂದುವರೆದಂತೆ ಶ್ರೀ.ಕೆ.ಜಿ ಹುಚ್ಚೇಗೌಡರನ್ನು ಕುರಿತು ಮಾತನಾಡುವಾಗ ಇವರು |

| | | |
|---|---|---|
| | | ನಮ್ಮ ಸಂಸ್ಥೆಯ ಯಾವುದೇ ಕೆಲಸಗಳಿಗೆ ಇವರ ಅವಶ್ಯಕತೆ ಇದ್ದಾಗ ತಕ್ಷಣ ಬಂದು ಬ್ಯಾಂಕಿನ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಕಾಲೇಜು ಆಡಳಿತಾತ್ಮಕವಾಗಿಸಂಬಂಧಪಟ್ಟಂತೆ ಅವರು ಬಂದು ತಮ್ಮ ಸಹಿಗಳನ್ನು ಹಾಕುತ್ತಿದ್ದರು. ಜೊತೆಗೆ ಕಾನೂನಾತ್ಮಕವಾಗಿ ಕರ್ತವ್ಯ ನಿರ್ವಹಿಸುತ್ತಿದ್ದು ಅವರಿಂದ ಸಂಸ್ಥೆಗೆ ಸಂಬಂಧಪಟ್ಟಂತೆ ಯಾವುದೇ ರೀತಿಯ ತೊಂದರೆಗಳಾಗದಂತೆ ಕರ್ತವ್ಯ ನಿರ್ವಹಿಸುತ್ತಿದ್ದಾರೆಂದು ತಿಳಿಸಿದರು. ರಾಮಲಿಂಗೇಗೌಡರು ಕಲ್ಮಶ ಇಲ್ಲದ ವ್ಯಕ್ತಿಯಾಗಿದ್ದು ಅವರನ್ನು ಹಿಂದಿನ ಅಧ್ಯಕ್ಷರಾದ ಅಂದರೆ ನನ್ನ ತಮ್ಮ ರಾಜಣ್ಣ ನನ್ನನ್ನ ನಿರ್ದೇಶಕರಾಗಿ ಮಾಡಿದ್ದಾರೆ ಅವರ ಆಸೆಯನ್ನು ಪೂರೈಸಲು ಪ್ರಿನ್ಸಿಪಾಲರಾದ ತಾವುಗಳು ಎಲ್ಲರೂ ಜೊತೆಗೂಡಿ ಸಂಸ್ಥೆಯನ್ನು ಉತ್ತಮವಾಗಿ ನಡೆಸಿಕೊಂಡು ಹೇಳಿದ್ದನ್ನು ಸ್ಮರಿಸಿದರು. ಪ್ರೌಢಶಾಲಾ ಮುಖ್ಯ ಶಿಕ್ಷಕರಾದ ಎಚ್.ಎಸ್.ಕೃಷ್ಣರವರು ನಂಜುಂಡೇಗೌಡರಿಂದ ಶಿಸ್ತನ್ನು ಹುಚ್ಚೇಗೌಡರಿಂದ ತಾಳ್ಮೆಯನ್ನು ಮತ್ತು ಶ್ರೀ ರಾಮಲಿಂಗೇಗೌರಿಂದ ವಿಶಾಲ ಮನೋಭಾವನೆಯನ್ನು ನಾವು ಕಂಡಿಕೊಂಡಿದ್ದೇವು ಎಂದು ತಿಳಿಸಿದರು. ನಂತರ ವಕೀಲರು ಕರ್ನಾಟಕ ರಾಜ್ಯ ಉಚ್ಚನ್ಯಾಯಲಯ ಆದ ಗೀತಾದೇವಿಯವರು ಸಂಸ್ಥೆ ಮತ್ತು ಆಡಳಿತ ಮಂಡಳಿಯನ್ನು ಕುರಿತು ನಾನು ಈ ಸಂಸ್ಥೆಯ ಮಹಾಸಭೆಗೆ ಮೊದಲ ಬಾರಿ ಬಂದಿದ್ದು ಈ ಸಂಸ್ಥೆಯು ಇಷ್ಟು ಉತ್ತಮವಾಗಿ ಒಳ್ಳೆಯ ವಾತವರಣದಲ್ಲಿದ್ದು ಇಷ್ಟು ಶಿಸ್ತುಬದ್ಧವಾಗಿರುವುದು ನನಗೆ ಹೆಮ್ಮೆ ಎನಿಸುತ್ತದೆ ಎಂದು ಹೇಳುತ್ತಾ ಕಿರಣ್ ಕುಮಾರ್‌ರವರ ಬಗ್ಗೆ ಒಂದು ಮಾತನ್ನು ಹೇಳಬೇಕು ಎಂದು ಕಿರಣ್‌ಕುಮಾರ್‌ರವರ ಅವರ ದೂರದರ್ಶಿತ್ವ (vision) ಮತ್ತು ಅದನ್ನು ಸಾಧಿಸುವಲ್ಲಿ ಅವರ ಸಮರ್ಪಣ ಮನೋಭಾವವನ್ನು ನಾನು ಇಲ್ಲಿ ಬಂದು ನೋಡಿದಾಗ ಕಂಡಿದ್ದೇನೆ ಎಂದು ಹೇಳಿದರು ಜೊತೆಗೆ 2006ರಲ್ಲಿ ವಕೀಲ ವೃತ್ತಿಯನ್ನು ಮಾಡಲು ಬಂದಾಗ ಯುವ ಉತ್ಸಾಹಿಗಳಾಗಿದ್ದರು. ನಂತರ ನನ್ನ ಮಾವನವರು ತೀರಿದಾಗ ಅವರು ಇಲ್ಲೇ ಬಂದಿದ್ದರು ಅಲ್ಲೇ ಇದ್ದಿದ್ದರೆ ಇವರು ಉತ್ತಮ ವಕೀಲ ವೃತ್ತಿ ಮಾಡಿ ಉನ್ನತ ನ್ಯಾಯದೀಶರಾಗುತ್ತಿದ್ದರು. ನಂತರ ಇಲ್ಲಿ ಬಂದು ಮೈಸೂರಿನಲ್ಲಿದ್ದು ವಕೀಲ ವೃತ್ತಿ ಮಾಡಿಕೊಂಡು ಸಂಸ್ಥೆಯನ್ನು ನಡೆಸಿಕೊಂಡು ಹೋಗು ಎಂದು ಹೇಳಿದೆ |

| | | |
|---|---|---|
| | | ಆದರೆ ಅವರು ನಾನು ಎರಡು ಕಡೆ ಕರ್ತವ್ಯ ನಿರ್ವಹಿಸಲು ಸರಿಯಾಗುವುದಿಲ್ಲವೆಂದು ಹೇಳಿ ಕಿರಣ್‌ಕುಮಾರ್‌ರವರು ನಾನು ಸಂಸ್ಥೆಯನ್ನು ಮುನ್ನಡೆಸಿಕೊಂಡು ಹೋಗುತ್ತೇನೆ ಎಂದು ಹೇಳಿ ಈಗ ತನ್ನ ಪೂರ್ಣ ವೃತ್ತಿಯನ್ನು ಈ ಸಂಸ್ಥೆಗೆ ಸಮರ್ಪಿಸಿಕೊಂಡಿರುವುದು ನನಗೆ ತುಂಬಾ ಹೆಮ್ಮೆ ಎನಿಸುತ್ತಿದೆ ಎಂದು ಹೇಳಿದರು. |
| 10 | ಅಧ್ಯಕ್ಷರ ಭಾಷಣ. | ಸಂಸ್ಥೆಯ ಹಾಗೂ ಈ ಮಹಾಸಭೆಯ ಅಧ್ಯಕ್ಷರಾದ ಶ್ರೀಯುತ ಎಸ್.ಸಿ.ಕಿರಣ್‌ಕುಮಾರ್ ರವರು ಸಂಸ್ಥೆಯ ಕಾರ್ಯದರ್ಶಿಯವರು, ಆಡಳಿತ ಮಂಡಳಿಯ ಸದಸ್ಯರು, ಸರ್ವ ಸದಸ್ಯರು, ಹಾಗೂ ಎಲ್ಲಾ ಬೋಧಕ, ಬೋಧಕೇತರರಿಗೂ ಎಲ್ಲಾರಿಗೂ ಶುಭಾಷಯಗಳನ್ನು ತಿಳಿಸುತ್ತಾ ಇಂದಿನ ಸಭೆ ನಮಗೆಲ್ಲಾ ಬಹಳ ವಿಶೇಷವಾಗಿದೆ. ಕಾರಣ ನಮ್ಮ ಸಂಸ್ಥೆಯ ಮೂವರು ಹಿರಿಯ ಸದಸ್ಯರುಗಳು ನಿವೃತ್ತಿಯನ್ನು ಬಯಸಿ ಇಂದು ಅವರಿಗೆ ನಾವು ಬೀಳ್ಕೋಡಿಗೆಯನ್ನು ನೀಡುತ್ತಿದ್ದೇವೆ ಅವರಲ್ಲಿ ಮೊದಲಿಗೆ ಎ.ಎಂ.ನಂಜುಂಡೇಗೌಡರು ನನಗೆ ಕಷ್ಟಕಾಲದಲ್ಲಿ ಅಂದರೆ ಸಂಸ್ಥೆಯ ಕಾರ್ಯದರ್ಶಿ ಯವರಾದ ಎಂ.ಜಿ.ಗಿರೀಗೌಡರು ರಾಜೀನಾಮೆ ನೀಡಿದ ಸಂದರ್ಭದಲ್ಲಿ ಅವರು ಕಾರ್ಯದರ್ಶಿ ಸ್ಥಾನವನ್ನು ವಹಿಸಿಕೊಂಡು ನನ್ನ ಜೊತೆಯಲ್ಲಿ ಸಹಕರಿಸಿದರು. ಬೇರೆಲ್ಲಾ ಸದಸ್ಯರು ಒಪ್ಪಿದಿದ್ದಾಗ ನಂಜುಂಡೇಗೌಡರು ಮಾತ್ರ ನಾವೆಲ್ಲಾ ನಿಮ್ಮ ಜೊತೆಗೆ ಇದ್ದೇವೆ ಎಂದು ಹೇಳಿ ಈಗ ನಮಗೆ ಆಗುವುದಿಲ್ಲವೆಂದು ಹೇಳುವುದು ಸರಿಯಲ್ಲ ನಮಗೆ ಕಷ್ಟವಾದರೂ ಪರವಾಗಿಲ್ಲ ನಾವು ಕಾರ್ಯದರ್ಶಿಯಾಗಿ ನಿಮ್ಮ ಜೊತೆಯಲ್ಲಿ ಇರುತ್ತೇವೆ ಎಂದು ಹೇಳಿ ನನಗೆ ಆತ್ಮವಿಶ್ವಾಸವನ್ನು ತುಂಬಿದರು ಹಾಗೂ ಹೆಚ್ಚಿಸಿದರು. ಹಾಗೆಯೇ ಕೆ.ಜಿ.ಹುಚ್ಚೇಗೌಡರು ಅವರ ನಂತರ ಕಾರ್ಯದರ್ಶಿ ಸ್ಥಾನವನ್ನು ಅಲಂಕರಿಸಿ ಇಲ್ಲಿಯವೆವಿಗೆ ನನ್ನೊಂದಿಗೆ ಸಹಕರಿಸಿದ್ದಾರೆ ಜೊತೆಗೆ ಎಸ್.ಸಿ. ರಾಮಲಿಂಗೇಗೌಡರು ಸಹ ನಮ್ಮ ತಂದೆಯ ನಿಧನದ ನಂತರ ಈ ಸಂಸ್ಥೆಯನ್ನು ಮುನ್ನಡೆಸಲು ಸಂಪೂರ್ಣ ಮಾರ್ಗದರ್ಶನ ಹಾಗೂ ಸಹಕಾರವನ್ನು ನೀಡಿದ್ದಾರೆ ಈ ಮೂರು ಜನರ ನಿಸ್ವಾರ್ಥ ಸೇವೆಯನ್ನು ಸಂಸ್ಥೆಯು ಹಾಗೂ ವೈಯಕ್ತಿಕವಾಗಿ ನನ್ನ ಕೊನೆಯ ಉಸಿರಿರುವರೆಗೂ ಸ್ಮರಿಸುತ್ತೇನೆ. ಇನ್ನೂ ಮುಂದೆಯೂ ಸಹ ನಮ್ಮ ಹಾಗೂ ನಮ್ಮ ಸಂಸ್ಥೆಯ ಮೇಲೆ ನಿಮ್ಮಗಳ ಆಶೀರ್ವಾದ ಇರಬೇಕೆಂದು ಕೋರುತ್ತೇನೆ. ಹಾಗೂ ಅವರ ಮಂದಿನ ಜೀವನ ಸುಖ, ಶಾಂತಿ ಮತ್ತು ಆರೋಗ್ಯ, ನೆಮ್ಮದಿ ಇರಲಿ ಎಂದು ಆ ಭಗವಂತನ್ನು ಪ್ರಾರ್ಥಿಸುತ್ತೇನೆ ಎಂದು ನುಡಿದರು. ಮುಂದುವರೆದು ಕಳೆದ ಸಾಳಿನಲ್ಲಿ ಹೇಳಿದಂತೆ ಜೂನ್ ಮಾಹೆ 2022ರಿಂದ ನೌಕರ ವರ್ಗದವರ ಸಂಬಳ ಹೆಚ್ಚಿಸುವ ಕ್ರಮ |

| | | |
|---|---|---|
| | | ಕೈಗೊಳ್ಳಲು ಈ ಸಾಲಿನಲ್ಲಿ ಚುನಾವಣೆ ಇದ್ದುದ್ದರಿಂದ ಆಗಿರಲಿಲ್ಲ ಅದನ್ನು ಮುಂದಿನ ಆಡಳಿತ ಮಂಡಳಿಯವರ ಸಹಕಾರದೊಂದಿಗೆ ನೆರವೇರಿಸಲು ಬದ್ಧನಾಗಿರುತ್ತೇನೆ ನಂತರ ಶ್ರೀಮತಿ ಎಂ ಪಿ ಗೀತಾದೇವಿಸಂಸ್ಥೆಯ ಕಾನೂನು ಸಲಹಗಾರ್ತಿ ಇವರು ನಮ್ಮ ಗುರುಗಳು ಇದೇ ಮೊದಲ ಬಾರಿಗೆ ಸಂಸ್ಥೆಯ ಸರ್ವಸದಸ್ಯರ ಮಹಾಸಭೆಗೆ ಆಗಮಿಸಿ ಶುಭ ಕೋರಿದ್ದಾರೆ ಅಲ್ಲದೇ ಸಂಸ್ಥೆಗೆ ಕಾಲಕಾಲಕ್ಕೆ ಕಾನೂನು ಮಾರ್ಪಾಡು ಮಾಡಲು ಅವಶ್ಯಕ ಸಲಹೆಗಳನ್ನು ನೀಡಿದ್ದಾರೆ. ಇಲ್ಲಿಯವರೆವಿಗೂ ಅವರು ನೀಡಿರುವಂತಹ ಸೇವೆಗೆ ಯಾವುದೇ ಶುಲ್ಕವನ್ನು ಪಡೆದಿರುವುದಲ್ಲ ಮುಂದೆಯು ಸಹ ಇವರ ಸೇವೆಯನ್ನು ಸಂಸ್ಥೆಯು ಸದಾ ಬಯಸುತ್ತದೆ ಅವರ ಸೇವೆಗೆ ಅಭಿನಂದನೆಗಳನ್ನು ತಿಳಿಸಿದರು ಮತ್ತು ಎಲ್ಲರಿಗೂ ಶುಭ ಕೋರಿ ತಮ್ಮ ಅಧ್ಯಕ್ಷತೆ ನುಡಿಗಳನ್ನು ಮುಕ್ತಾಯಗೊಳಿಸಿದರು. |
| 11 | ವಂದನಾರ್ಪಣೆ | ಸಂಸ್ಥೆಯ ಅಧ್ಯಕ್ಷರು, ಕಾರ್ಯದರ್ಶಿಯವರು, ಎಲ್ಲಾ ಸದಸ್ಯರುಗಳು ಹಾಗೂ ಬೋಧಕ ಹಾಗೂ ಬೋಧಕೇತರ ವರ್ಗದವರಿಗೆ ಎಸ್.ಎಸ್.ಕೆ.ಸಿ. ಪಿಯು ಕಾಲೇಜಿನ ಪ್ರಾಂಶುಪಾಲರಾದ ಶ್ರೀ.ಎಸ್.ಎಂ.ಕುಮಾರ್ ರವರು ವಂದನಾರ್ಪಣೆ ಮಾಡಿದರು. |
| 12 | ರಾಷ್ಟ್ರಗೀತೆ | ಈ ವಾರ್ಷಿಕ ಮಹಾಸಭೆಯಲ್ಲಿ ಹಾಜರಿದ್ದ ಎಲ್ಲರೂ ಎದ್ದು ನಿಂತು ಗೌರವಯುತವಾಗಿ ರಾಷ್ಟ್ರಗೀತೆಯನ್ನು ಹಾಡುವುದರ ಮೂಲಕ ಸಭೆಯನ್ನು ಮುಕ್ತಾಯಗೊಳಿಸಲಾಯಿತು. |

ದಿನಾಂಕ : 31–07–2022 –ಸಹಿ–

ಸ್ಥಳ : ಕೆ.ಆರ್.ಪೇಟೆ (ಎಸ್.ಸಿ.ಕಿರಣ್ ಕುಮಾರ್)31/07/2022

**ಮಹಾಸಭೆ: 35**

**2022 – 2023ನೇ ಸಾಲಿನ ಸರ್ವಸದಸ್ಯರ ವಾರ್ಷಿಕ ಮಹಾಸಭೆ.**

**ದಿನಾಂಕ: 30–07–2023**

ಗ್ರಾಮಭಾರತಿ ವಿದ್ಯಾಸಂಸ್ಥೆ(ರಿ)., ಕೆ.ಆರ್.ಪೇಟೆ. ಈ ವಿದ್ಯಾಸಂಸ್ಥೆಯ 2022–2023ನೇ ಸಾಲಿನ ಸರ್ವಸದಸ್ಯರ ವಾರ್ಷಿಕ ಮಹಾಸಭೆಯು ದಿನಾಂಕ 30–07–2023ನೇ ಭಾನುವಾರ ಬೆಳಿಗ್ಗೆ 11.00 ಗಂಟೆಗೆ ಸರಿಯಾಗಿ ವಿದ್ಯಾಸಂಸ್ಥೆಯ ಶ್ರೀಮಾನ್ ಎಸ್.ಸಿ ಚಿಕ್ಕಣ್ಣಗೌಡರ ಸಭಾಗೃಹದಲ್ಲಿ ಸಂಸ್ಥೆಯ ಅಧ್ಯಕ್ಷರಾದ ಶ್ರೀಮಾನ್ ಎಸ್.ಸಿ.ಕಿರಣ್‌ಕುಮಾರ್‌ರವರ ಘನ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಈ ಮಹಾಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳು.

**ಹಾಜರಿ :** ಹಾಜರಾದ ಸದಸ್ಯರುಗಳ ಹಾಜರಾತಿಯನ್ನು ಅಲಾಯಿದವಾಗಿ ಪಡೆಯಲಾಗಿದೆ.

| **ಕ್ರ.ಸಂ** | **ವಿಷಯ** | **ತೀರ್ಮಾನ** |
|---|---|---|
| 1. | ದೇವತಾ ಪ್ರಾರ್ಥನೆ. | ಸಂಸ್ಥೆಯ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯಶಿಕ್ಷಕಿಯಾದ ಶ್ರೀಮತಿ ಜಯಶ್ರೀ, ಲೀಲಾವತಿ ಮತ್ತು ಶ್ರೀಮತಿ ವೀಣಾ ಇವರಿಂದ ದೇವತಾ ಪ್ರಾರ್ಥನೆಯನ್ನು ಸುಮಧುರವಾಗಿ ನಡೆಸಿಕೊಟ್ಟರು. |
| 2. | ಸ್ವಾಗತ ಭಾಷಣ. | ಗ್ರಾಮಭಾರತಿ ವಿದ್ಯಾಸಂಸ್ಥೆಯ ಎಸ್.ಎಂ.ಲಿಂಗಪ್ಪ ಶಿಕ್ಷಣ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಶ್ರೀ ಪಿ.ಸುರೇಶರವರು ಸಂಸ್ಥೆಯ ಗೌರವಾನ್ವಿತ ಅಧ್ಯಕ್ಷರಾದ ಶ್ರೀ ಎಸ್.ಸಿ.ಕಿರಣ್ ಕುಮಾರ್‌ರವರಿಗೆ ಕಾರ್ಯದರ್ಶಿಯವರಾದ ಕೆ.ಎಂ.ಪುಟ್ಟಲಕ್ಷ್ಮಮ್ಮನವರಿಗೆ ಆಡಳಿತ ಮಂಡಳಿಯ ನಿರ್ದೇಶಕರುಗಳಿಗೆ, ಎಲ್ಲಾ ಸದಸ್ಯರುಗಳಿಗೆ, ಎಲ್ಲಾ ವಿಭಾಗದ ಮುಖ್ಯಸ್ಥರು, ಉಪನ್ಯಾಸಕರು, ಸಹಶಿಕ್ಷಕರು ಹಾಗೂ ಎಲ್ಲಾ ಸಿಬ್ಬಂದಿ ವರ್ಗದವರನ್ನು ತುಂಬು ಹೃದಯದಿಂದ ಸ್ವಾಗತವನ್ನು ಬಯಸಿದರು. |
| 3. | ಸರ್ವ ಸದಸ್ಯರ ವಾರ್ಷಿಕ ಮಹಾ ಸಭೆಯ ಆಹ್ವಾನ ಪತ್ರಿಕೆಯನ್ನು ಓದಿ ರೆಕಾರ್ಡ್ ಮಾಡುವ ವಿಚಾರ. | ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ 2022–23ನೇ ಸಾಲಿನ ಆಹ್ವಾನ ಪತ್ರಿಕೆಯನ್ನು ಸಂಸ್ಥೆಯ ಎಸ್.ಎಂ.ಲಿಂಗಪ್ಪ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಶ್ರೀ. ಬಿ.ಎಸ್. ರಘುಪತಿಯವರು ಓದಿದರು. ಇದನ್ನ ಸಭೆಯು ಸರ್ವಾನು ಮತದಿಂದ |

| | | |
|---|---|---|
| | | ಒಪ್ಪಿ ರೆಕಾರ್ಡ್ ಮಾಡತಕ್ಕದ್ದೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು. |
| 4. | ಹಿಂದಿನ ವಾರ್ಷಿಕ ಮಹಾಸಭೆಯ ನಡಾವಳಿಗಳನ್ನು ಓದಿ ರೆಕಾರ್ಡ್ ಮಾಡುವ ವಿಚಾರ. | ಹಿಂದಿನ ವಾರ್ಷಿಕ ಮಹಾಸಭೆಯ ನಡಾವಳಿಗಳನ್ನು ಪ್ರೌಢಶಾಲೆಯ ಮುಖ್ಯ ಶಿಕ್ಷಕರಾದ ಶ್ರೀ ಹೆಚ್.ಎಸ್.ಕೃಷ್ಣರವರು ಓದಿದ್ದನ್ನು ಸಭೆಯು ಸರ್ವಾನು ಮತದಿಂದ ಒಪ್ಪಿ ರೆಕಾರ್ಡ್ ಮಾಡತಕ್ಕದ್ದೆಂದು ತೀರ್ಮಾನಿಸಿತು. |
| 5. | ಸಂಸ್ಥೆಯ 2022–2023ನೇ ಸಾಲಿನ ವಾರ್ಷಿಕ ವರದಿಯನ್ನು ಮಂಡಿಸುವ ವಿಚಾರ. | ಸಂಸ್ಥೆಯ 2022–2023ನೇ ಸಾಲಿನಲ್ಲಿ ಸಂಸ್ಥೆಯಲ್ಲಿ ನಡೆದಿರುವ ಕಾರ್ಯಕ್ರಮಗಳ ಸಂಪೂರ್ಣ ವರದಿಯನ್ನು ಸಂಸ್ಥೆಯ ಪ್ರೌಢಶಾಲಾ ವಿಭಾಗದ ಹೆಚ್.ಎನ್.ವಜ್ರಪ್ರಸಾದ್ ರವರು ವಿವರಿಸಿದರು. ಇದನ್ನು ಸಭೆಯು ಸರ್ವಾನುಮತದಿಂದ ಒಪ್ಪಿ ರೆಕಾರ್ಡ್ ಮಾಡತಕ್ಕದೆಂದು ತೀರ್ಮಾನಿಸಿತು. |
| 6. | 2022–2023 ನೇ ಸಾಲಿನ ಲೆಕ್ಕ ಪರಿಶೋಧಕರ ವರದಿಯನ್ನು ಪರಿ ಶೀಲಿಸಿ ಅಂಗೀಕಾರ ಮಾಡುವ ವಿಚಾರ. | ಸಂಸ್ಥೆಯ 2022–23 ನೇ ಸಾಲಿನ ಲೆಕ್ಕ ಪತ್ರಗಳನ್ನು ಆಡಿಟ್‌ರವರಿಂದ ಪರಿಶೀಲಿಸಿ ಇದರ ವರದಿಯನ್ನು ಕಾರ್ಯದರ್ಶಿಯವರಾದ ಶ್ರೀಮತಿ ಕೆ.ಎಂ. ಪುಟ್ಟಲಕ್ಷ್ಮಮ್ಮನವರ ಪರವಾಗಿ ಪ್ರೌಢಶಾಲಾ ವಿಭಾಗದ ಸಹಶಿಕ್ಷಕರಾದ ಸಿ.ಆರ್. ಹರೀಶ್‌ರವರು ಮಂಡಿಸಿದರು ಇದನ್ನು ಸಭೆಯಲ್ಲಿ ಪರಿಶೀಲಿಸಿ, ಚರ್ಚಿಸಿ ಅಂಗೀಕರಿತಕ್ಕದ್ದೆಂದು ಸಭೆಯು ಸರ್ವನುಮತದಿಂದ ತೀರ್ಮಾನಿಸಿತು. |
| 7. | 2023–2024ನೇಸಾಲಿಗೆ ಬಡ್ಜೆಟ್‌ನ್ನು ಮಂಜೂರು ಮಾಡುವ ವಿಚಾರ. | 2023–24ನೇ ಸಾಲಿನ ಸಂಸ್ಥೆಯ ಬಡ್ಜೆಟ್‌ನ್ನು ವಿದ್ಯಾಸಂಸ್ಥೆಯ ಕಾರ್ಯದರ್ಶಿಯವರಾದ ಶ್ರೀಮತಿ ಕೆ.ಎಂ.ಪುಟ್ಟಲಕ್ಷ್ಮಮ್ಮನವರ ಪರವಾಗಿ ಸಂಸ್ಥೆಯ ಎಸ್.ಎಂ.ಲಿಂಗಪ್ಪ ಪಿ.ಯು. ಕಾಲೇಜಿನ ಉಪನ್ಯಾಸಕರಾದ ಬಿ.ಎಲ್.ಅನಿತ್‌ಕುಮಾರ್ ರವರು ಈ ಕೆಳಗಿನಂತೆ ವಿವರಿಸಿದರು. |

**2023–24ನೇ ಸಾಲಿನ ಬಡ್ಜೆಟ್ ಮಂಜೂರಾತಿಗಾಗಿ ಸಿದ್ಧಪಡಿಸಿರುವ ಬಡ್ಜೆಟ್ ವಿವರ.**

| ಕ್ರ.ಸಂ. | ವಿವರ | 2022–23ನೇ ಸಾಲಿಗೆ ಮಂಜೂರಾಗಿರುವುದು (ರೂ.ಗಳಲ್ಲಿ) | 2022–23ನೇ ಸಾಲಿಗೆ ಖರ್ಚಾಗಿರುವುದು (ರೂ.ಗಳಲ್ಲಿ) | 2023–24ನೇ ಸಾಲಿಗೆ ಮಂಜೂರಾತಿ ಕೋರಿರುವುದು. (ರೂ.ಗಳಲ್ಲಿ) |
|---|---|---|---|---|
| 1 | ಸಂಸ್ಥೆಯ ನೌಕರರ ಸಂಬಳ | 75,00,000.00 | 52,36,254.00 | 85,00,000.00 |

| | | | | |
|---|---|---|---|---|
| 2 | ವಿದ್ಯುಚ್ಛಕ್ತಿ ಶುಲ್ಕ | 1,50,000.00 | 1,00,026.00 | 1,75,000.00 |
| 3 | ವಾರ್ಷಿಕ ಮಹಾಸಭೆಯ ಖರ್ಚು | 50,000.00 | 20,212.00 | 50,000.00 |
| 4 | ಪುಸ್ತಕ ಮತ್ತು ವಿಜ್ಞಾನ ಉಪಕರಣಗಳು | 2,00,000.00 | 1,83,637.50 | 2,00,000.00 |
| 5 | ಪ್ರಯಾಣ ಭತ್ಯೆ | 25,000.00 | | 25,000.00 |
| 6 | ಅತಿಥಿ ಸತ್ಕಾರ ಮತ್ತು ಗೌರವ ಧನ | 2,00,000.00 | 1,69,425.00 | 3,00,000.00 |
| 7 | ಅಂಚೆ ವೆಚ್ಚ | 5,000.00 | 599.50 | 5,000.00 |
| 8 | ಆಡಿಟ್ ಫೀ ಮತ್ತು ಅನಿರೀಕ್ಷಿತ ವೆಚ್ಚ | 1,50,000.00 | 18,800.00 | 1,50,000.00 |
| 9 | ಜಾಹಿರಾತು ವೆಚ್ಚ | 25,000.00 | – | 25,000.00 |
| 10 | ಫರ್ನಿಚರ್ ವೆಚ್ಚ | 2,00,000.00 | – | 2,00,000.00 |
| 11 | ಸಾದಿಲ್ವಾರ್ ವೆಚ್ಚ ಮತ್ತು ಲೇಖನ ಸಾಮಾಗ್ರಿಗಳು ಮತ್ತು ಪರೀಕ್ಷಾ ವೆಚ್ಚಗಳು. | 3,00,000.00 | 3,00,000.00 | 6,00,000.00 |
| 12 | ವಿದ್ಯಾಸಂಸ್ಥೆ ಕಟ್ಟಡ ಹಾಗೂ ಆಸ್ತಿ ನಿರ್ವಹಣ ವೆಚ್ಚ | 50,00,000.00 | 6,35,000.00 | 30,00,000.00 |
| 13 | ಮುಂಗಡ ಹಣ ಮತ್ತು ಸಾಲಗಳ ಮರುಪಾವತಿ ವೆಚ್ಚ | 1,60,000.00 | – | 1,60,000.00 |
| 14 | ಸ್ಥಿರ ನಿಧಿಗಾಗಿ | 10,00,000.00 | 3,50,000.00 | 10,00,000.00 |
| 15 | ಸಂಸ್ಥೆ, ಬಿ.ಇಡಿ. ಹಾಗೂ ಪಿ.ಯು. ಕಾಲೇಜು ನವೀಕರಣ ಶುಲ್ಕ ಪಾವತಿಸಲು. | 3,00,000.00 | 7,730.00 | 4,00,000.00 |
| | **ಒಟ್ಟು** | **1,52,65,000.00** | **70,21,684.00** | **1,47,90,000.00** |

ಮೇಲಿನ ಬಡ್ಜೆಟ್‌ನ್ನು ಸಭೆಯಲ್ಲಿ ಚರ್ಚಿಸಿ ಮಂಜೂರು ಮಾಡತಕ್ಕದ್ದೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

| | | |
|---|---|---|
| 9. | ಸಂಸ್ಥೆಯ ಸದಸ್ಯರುಗಳಿಗೆ ಸಲಹೆಗಳನ್ನು ನೀಡುವ ಅವಕಾಶ. | ಸಂಸ್ಥೆಯ ಸದಸ್ಯರುಗಳಿಗೆ ಸಲಹೆಗಳನ್ನು ನೀಡುವ ಅವಕಾಶ ನೀಡಲು ಬಂದಾಗ ಹಿರಿಯ ಸದಸ್ಯರಾದ ಪಾಪೇಗೌಡರು ಮಾತನಾಡಿ ಸಂಸ್ಥೆಯು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದು, ಅಧ್ಯಕ್ಷರಾದ ಎಸ್.ಸಿ.ಕಿರಣ್‌ಕುಮಾರ್‌ರವರು ಎಲ್ಲಾ ಲೆಕ್ಕಪತ್ರಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸುತ್ತಿದ್ದನ್ನು ನಾವು ಅರಿತಿದ್ದೇವು. ಆದರೆ ಕಾರ್ಯಕಾರಿ ಮಂಡಳಿಗೆ ಹೊಸಬರನ್ನು ಸೇರಿಸಿಕೊಂಡು ಅವರಿಗೂ ಅವಕಾಶ ನೀಡಬೇಕೆಂಬುದು ನಮ್ಮ ಆಶಯ. ಅದಲ್ಲದೆ ಸಂಸ್ಥೆಯಲ್ಲಿ ಕಲಿಯುತ್ತಿರುವ ಎಲ್ಲಾ ಮಕ್ಕಳು ಸಹ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದುವಂತೆ ಮಾಡಬೇಕೆ ಹೊರತು 35% ಪಡೆದು ಪಾಸಾದರೆ ಏನು ಪ್ರಯೋಜನವಿಲ್ಲ ಆದುದರಿಂದ ಸಂಸ್ಥೆಯ ಎಲ್ಲಾ ನೌಕರರು ಆ ನಿಟ್ಟಿನಲ್ಲಿ ಕೆಲಸ ಮಾಡಬೇಕೆಂದು ಹೇಳಿದರು. |

| | | |
|---|---|---|
| | | ಎರಡನೇಯವರಾಗಿ ಬಿ.ನಂಜಪ್ಪನವರು ಮಾತನಾಡಿ ಎಸ್.ಎಂ.ಲಿಂಗಪ್ಪನವರ ಪ್ರತಿಮೆಯನ್ನು ಅವರ 105ನೇ ಜನ್ಮದಿನದೊಳಗೆ ನಿರ್ಮಿಸಬೇಕೆಂದು ಸಲಹೆ ನೀಡಿದರು.<br>ನಂತರ ಕೆ.ಆರ್.ಪುಟ್ಟಸ್ವಾಮಿರವರು ನಂಜಪ್ಪನವರ ಮಾತಿಗೆ ಪೂರಕವಾಗಿ ಎಸ್.ಎಂ.ಲಿಂಗಪ್ಪನವರ ಕೊಡುಗೆ ಕೃಷ್ಣರಾಜಪೇಟೆಗೆ ಅಪಾರವಾಗಿದೆ. ಆದುದರಿಂದ ಅವರ ಪ್ರತಿಮೆಯನ್ನು ಕೃಷ್ಣರಾಜಪೇಟೆಯ ಪ್ರಮುಖ ಸ್ಥಳದಲ್ಲಿಯೇ ನಿರ್ಮಿಸಲು ಸ್ಥಳೀಯ ಸರ್ಕಾರದೊಂದಿಗೆ ಚರ್ಚಿಸಿ ಕ್ರಮ ಕೈಗೊಳ್ಳಬೇಕು ಅದಕ್ಕೆ ನಾವೆಲ್ಲರೂ ನಿಮ್ಮ ಜೊತೆಯಲ್ಲಿರುತ್ತೇವೆ ಎಂದರು. ಮುಂದು ವರೆದು ಸಂಸ್ಥೆಯು ಪಾರದರ್ಶಕವಾಗಿ ಕಾರ್ಯನಿರ್ವಹಿಸು ತ್ತಿರುವುದು ಎಲ್ಲರಿಗೂ ತಿಳಿದಿದೆ ಇಂದಿನ ಸ್ಪರ್ಧಾ ಪ್ರಪಂಚದಲ್ಲಿ ಖಾಸಗಿ ಶಾಲಾ ಕಾಲೇಜುಗಳಲ್ಲಿ ಶಾಲಾ ಬಸ್‌ಗಳನ್ನು ಕೊಂಡು ಗ್ರಾಮೀಣ ಭಾಗಗಳಿಗೆ ಬಿಟ್ಟು ಗ್ರಾಮೀಣ ವಿದ್ಯಾರ್ಥಿಗಳಿಗೆ ಅನುಕೂಲ ಕಲ್ಪಿಸುತ್ತಿರುವುದು ಸರಿಯಷ್ಟೇ, ಹಾಗೆಯೇ ನಮ್ಮ ಸಂಸ್ಥೆಯಲ್ಲಿಯೂ ಬಸ್ಸುಗಳನ್ನು ವ್ಯವಸ್ಥೆ ಮಾಡಿಕೊಂಡು ಗ್ರಾಮೀಣ ವಿದ್ಯಾರ್ಥಿಗಳಿಗೆ ಸಂಸ್ಥೆಯಲ್ಲಿ ವಿದ್ಯಾಭ್ಯಾಸ ಮಾಡಲು ಅನುಕೂಲ ಮಾಡುವುದು ಅವಶ್ಯ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.<br>ನಾಲ್ಕನೇಯವರಾಗಿ ಶ್ರೀಯುತ ಎಸ್.ಎಸ್ ಶಾಂತಹೃದಯ ರವರು ಮಾತನಾಡಿ ನಾನು ಎಸ್.ಎಂ.ಲಿಂಗಪ್ಪನವರ ಅಣ್ಣನ ಮಗ ನನ್ನ ಚಿಕ್ಕಪ್ಪನವರಿಗೆ ಒಂದು ನೂರು ವಿದ್ಯಾರ್ಥಿಗಳಿಗೆ ಉಚಿತ ಊಟದ ವ್ಯವಸ್ಥೆಯನ್ನು ಸೂರ್ಯ ಚಂದ್ರರು ಇರುವವರೆಗೆ ಮಾಡಬೇಕೆಂಬ ಅಭಿಲಾಷೆ ಇತ್ತು. ಆದುದರಿಂದ ಸಂಸ್ಥೆಯ ಅಧ್ಯಕ್ಷರು ಮನಸು ಮಾಡಿ ಅವರ ಅಭಿಲಾಷೆಯನ್ನು ಕಾರ್ಯರೂಪಕ್ಕೆ ತರಬೇಕೆಂದು ಕೋರುತ್ತೇನೆ ಎಂದರು ಸಭೆಯಲ್ಲಿದ್ದ ಇತರೇ ಸದಸ್ಯರುಗಳು ನೂರು ಮಕ್ಕಳಿಗೆ ಹೇಗೆ ಉಚಿತವಾಗಿ ಊಟದ ವವ್ಯಸ್ಥೆಯನ್ನು ನೀಡಲು ಸಾಧ್ಯವೆಂದಾಗ ಶಾಂತಹೃದಯರವರು ನೂರು |

| | | |
|---|---|---|
| | | ಮಕ್ಕಳಿಗಾಗದಿದ್ದರೆ ಒಂದತ್ತು ಮಕ್ಕಳಿಗಾದರೂ ನೀಡಬೇಕೆಂದು ಸಲಹೆ ನೀಡಿದರು. |
| 10 | ಅಧ್ಯಕ್ಷರ ಭಾಷಣ | ಸಂಸ್ಥೆಯ ಹಾಗೂ ಈ ಮಹಾಸಭೆಯ ಅಧ್ಯಕ್ಷರಾದ ಶ್ರೀಯುತ ಎಸ್.ಸಿ.ಕಿರಣ್‌ಕುಮಾರ್ ರವರು ಸಂಸ್ಥೆಯ ಕಾರ್ಯದರ್ಶಿಯವರು ಆಡಳಿತ ಮಂಡಳಿಯ ಸದಸ್ಯರುಗಳು ಹಾಗೂ ಸಂಸ್ಥೆಯ ಸರ್ವ ಸದಸ್ಯರು ಹಾಗೂ ಎಲ್ಲಾ ವಿಭಾಗದ ಮುಖ್ಯಸ್ಥರು, ಬೋದಕ, ಬೋದಕೇತರ ವರ್ಗದವರಿಗೆಲ್ಲ ನಮಸ್ಕರಿಸುತ್ತಾ ಇಂದಿನ ಮಹಾಸಭೆಯು ವಿಶೇಷವಾಗಿದೆ ಏಕೆಂದರೆ ಕಳೆದ ಸಾಲಿನಲ್ಲಿ ಐವರು ಹೊಸ ನಿರ್ದೇಶಕರೊಂದಿಗೆ ಸಂಸ್ಥೆಯನ್ನು ಮುನ್ನಡೆಸಿದ್ದೇನೆ. ಅವರ ಸಹಕಾರವನ್ನು ಪಡೆದು ಸಂಸ್ಥೆಯಲ್ಲಿ ಸುಮಾರು ನಲವತ್ತಾರು ಲಕ್ಷ(46,00,000) ರೂಪಾಯಿಗಳ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿರುವುದು ನನಗೆ ವೈಯಕ್ತಿಕವಾಗಿ ಹರ್ಷವೆನಿಸುತ್ತದೆ.<br>ಮುಂದುವರೆದು ಪಾಪೇಗೌಡರಿಗೆ ಮಾಹಿತಿಯ ಕೊರತೆ ಇದೆ, ಏಕೆಂದರೆ ಅವರ ಸಲಹೆಯು ಅಪ್ರಸ್ತುತವಾಗಿದೆ. ಕಳೆದ ಸಾಲಿನಲ್ಲಿಯೇ 5 ಹೊಸ ನಿರ್ದೇಶಕರು ಕಾರ್ಯಕಾರಿ ಮಂಡಳಿಗೆ ಆಯ್ಕೆಯಾಗಿ ಒಂದು ವರ್ಷವನ್ನು ಪೂರೈಸಿದ್ದಾರೆ. ಸಂಸ್ಥೆಯ ಎಸ್.ಎಸ್.ಎಲ್.ಸಿ ಫಲಿತಾಂಶವು ಉತ್ತಮವಾಗಿದೆ ಪಾಪೇಗೌಡರು ನಮ್ಮ ಫಲಿತಾಂಶವನ್ನು ಸಂಪೂರ್ಣವಾಗಿ ಪರಿಶೀಲಿಸಿಲ್ಲ ಎಂಬುದು ನನ್ನ ಅನಿಸಿಕೆ ಅಲ್ಲದೆ ನಮ್ಮ ಎಲ್ಲಾ ಶಿಕ್ಷಕ ವೃಂದದವರು ಉತ್ತಮ ಫಲಿತಾಂಶಕ್ಕಾಗಿ ಶ್ರಮವಹಿಸುವುದನ್ನು ನಾನು ಕಣ್ಣಾರೆ ಕಂಡಿದ್ದೇನೆ. ಇಂದು ವಿದ್ಯಾರ್ಥಿಗಳನ್ನು ದತ್ತು ಪಡೆದು ವಿಶೇಷ ತರಗತಿಗಳನ್ನು ನಡೆಸಿರುತ್ತಾರೆ. ಮತ್ತು ಸಂಸ್ಥೆಯ ಫಲಿತಾಂಶದಲ್ಲಿ ಪರೀಕ್ಷೆ ತೆಗೆದುಕೊಂಡು ಪಾಸಾದ ವಿದ್ಯಾರ್ಥಿಗಳಲ್ಲಿ ಮೂವರು ದ್ವಿತೀಯ ದರ್ಜೆಯನ್ನ ಹೊರತು ಉಳಿದ ಎಲ್ಲಾ ವಿದ್ಯಾರ್ಥಿಗಳು ಪ್ರಥಮ ಮತ್ತು ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿರುತ್ತಾರೆ. ಎಂದು ತಿಳಿಸಿದರು. |

| | | |
|---|---|---|
| | | ನಂತರ ನಂಜಪ್ಪನವರ ಸಲಹೆಗೆ ಉತ್ತರಿಸುತ್ತಾ ಸಂಸ್ಥೆಯ ಸಂಸ್ಥಾಪಕರಾದ ಎಸ್.ಎಂ.ಲಿಂಗಪ್ಪನವರ ಪ್ರತಿಮೆ ಸ್ಥಾಪಿಸುವುದರ ಬಗ್ಗೆ ಈ ಹಿಂದೆಯು ಚರ್ಚಿಸಲಾಗಿ ಎಲ್ಲಾ ಸದಸ್ಯರುಗಳ ಅಭಿಪ್ರಾಯದಂತೆ ವ್ಯಕ್ತಿಪೂಜೆ, ಮೂರ್ತಿ ಪೂಜೆ, ಮಾಡುವುದರ ಬದಲು ಅವರ ಆದರ್ಶಗಳನ್ನು ಸಂಸ್ಥೆಯು ಅಳವಡಿಸಿಕೊಳ್ಳುವುದು ಸೂಕ್ತವೆಂಬ ಅಭಿಪ್ರಾಯದೊಂದಿಗೆ ತೀರ್ಮಾನಿಸಲಾಗಿತ್ತು. ಅದಲ್ಲದೆ ನಮ್ಮ ಸಂಸ್ಥೆಯು ಯಾವುದೇ ಕಟ್ಟಡಗಳ ಶಂಕು ಸ್ಥಾಪನೆಯಾಗಲಿ ಅಥವಾ ಉದ್ಘಾಟನೆಯಾಗಲಿ ಯಾರಿಂದ ಆಗಿದೆ ಎಂಬುದರ ಶಾಸನವನ್ನ ಬರೆಯುವುದರ ಪದ್ದತಿ ಸಂಸ್ಥೆಯಲ್ಲಿ ಇರುವುದಿಲ್ಲ. ಈ ಪದ್ದತಿಯನ್ನು ಎಸ್.ಎಂ.ಲಿಂಗಪ್ಪನವರು ಮತ್ತು ಎಸ್.ಸಿ. ಚಿಕ್ಕಣ್ಣಗೌಡರು ಸಹ ಪಾಲಿಸಿಕೊಂಡು ಬಂದಿರುವುದಿಲ್ಲ ನಾವು ಅವರ ಆದರ್ಶವನ್ನು ಮೈಗೂಡಿಸಿ ಅವರ ಹಾದಿಯಲ್ಲಿ ಸಾಗುತ್ತಿದ್ದೇವೆ.<br>ಶಾಂತಹೃದಯರವರ ಸಲಹೆಗೆ ಉತ್ತರಿಸುತ್ತಾ ಸರ್ಕಾರದ ವತಿಯಿಂದಲೇ ಸಾಕಷ್ಟು ಉಚಿತ ವಿದ್ಯಾರ್ಥಿನಿಲಯಗಳು ಕರ್ತವ್ಯ ಕಾರ್ಯ ನಿರ್ವಹಿಸುತ್ತಿದ್ದು, ಅವಶ್ಯಕತೆ ಇರುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿನಿಲಯದಲ್ಲಿ ಪ್ರವೇಶವನ್ನು ಕೊಡಿಸಲಾಗುತ್ತಿದೆ. ಅಲ್ಲದೆ ಸಂಸ್ಥೆಯ ವತಿಯಿಂದ ಯಾವುದೇ ವಿದ್ಯಾರ್ಥಿ ನಿಲಯವನ್ನು ನಡೆಸುತ್ತಿರುವುದಿಲ್ಲ ಹಾಗೂ ಪ್ರಾರಂಭಿಸುವ ಉದ್ದೇಶವು ಇಲ್ಲ. ಆದುದರಿಂದ ಉಚಿತವಾಗಿ ವಿದ್ಯಾರ್ಥಿಗಳಿಗೆ ಉಚಿತವಾಗಿ ಊಟದ ವ್ಯವಸ್ಥೆ ಮಾಡಲು ಸಾಧ್ಯವಿಲ್ಲ. ಹಾಗೇನಾದರು ತಾವು ಉಚಿತವಾಗಿ ಊಟ ನೀಡಬೇಕೆಂಬ ಆಸೆ ಇದ್ದರೆ ಎಸ್.ಎಂ.ಲಿಂಗಪ್ಪ ವಿದ್ಯಾರ್ಥಿ ನಿಲಯಕ್ಕೆ ತಾವು ವಿದ್ಯಾರ್ಥಿಗಳ ಹಾಸ್ಟಲ್ ಶುಲ್ಕವನ್ನು ಭರಿಸಿದರೆ ವಿದ್ಯಾರ್ಥಿಗಳಿಗೆ ಉಚಿತವಾಗಿ ಊಟದ ವ್ಯವಸ್ಥೆಯನ್ನು ಮಾಡಲಾಗುತ್ತದೆ ಎಂದು ತಿಳಿಸಿದರು.<br>ನಂತರ ಮುಂದುವರೆಯುತ್ತಾ ಕೆ.ಆರ್.ಪುಟ್ಟಸ್ವಾಮಿರವರ ಸಲಹೆಗೆ ಉತ್ತರಿಸುತ್ತಾ |

| | | |
|---|---|---|
| | | ಸಂಸ್ಥೆಯಲ್ಲಿ ಹತ್ತು ವರ್ಷಗಳಿಂದ ಹೆಚ್ಚು ಸೇವೆಸಲ್ಲಿಸದವರಿಗೆ ರಜಾ ದಿನಗಳಲ್ಲಿ (ಏಪ್ರಿಲ್ – ಮೇ ತಿಂಗಳು) ಅವರ ವೇತನದ 50% ವೇತನವನ್ನು ನೀಡಬೇಕೆಂದು ಕಾರ್ಯಕಾರಿ ಮಂಡಳಿಯು 2023–24ನೇ ಸಾಲಿನಲ್ಲಿ ತೀರ್ಮಾನಿಸಿತ್ತು. ಆಗ ಕಾರ್ಯದರ್ಶಿಯವರ ಸಲಹೆ ಮೇರೆಗೆ 10 ವರ್ಷಗಳ ನಿರಂತರ ಸೇವೆಯನ್ನು ಹಾಗೂ 5 ವರ್ಷ ಪೂರೈಸಿದವರಿಗೂ 50% ವೇತನವನ್ನು ನೀಡಬಹುದೆಂದು ತಿಳಿಸಿದರು. ಇದಕ್ಕೆ ಕಾರ್ಯಕಾರಿ ಮಂಡಳಿಯು ಒಪ್ಪಿ ಸದರಿ ಸಾಲಿನಿಂದಲೇ ನಗದು ರೂಪದಲ್ಲಿ 50% ವೇತನವನ್ನು ನೀಡಲಾಗಿದೆ. ಸಂಸ್ಥೆಯ ವತಿಯಿಂದ ಬಸ್ಸುಗಳನ್ನ ಕೊಂಡು ನಿರ್ವಹಿಸಲು ಈ ಹಿಂದೆಯೇ ಚರ್ಚಿಸಿ ಅದನ್ನು ಎಸ್.ಎಂ.ಲಿಂಗಪ್ಪ ಚಾರಿಟಬಲ್ ಟ್ರಸ್ಟ್ (ರಿ) ಅವರ ಸಹಯೋಗ ದೊಂದಿಗೆ ಕಳೆದ 6 ವರ್ಷಗಳ ಹಿಂದೆಯೇ ಒಡಂಬಡಿಕೆ ಮಾಡಿಕೊಂಡು ಬಸ್ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ ಸದರಿ ಸಾಲಿನಲ್ಲಿಯೂ ಸಹ ಒಂದು ಹೊಸ ಬಸ್ಸುನ್ನು ಕೊಂಡು ಈಗ ಮೂರು ಬಸ್‌ಗಳು ಸಂಚರಿಸುತ್ತಿವೆ. ಹಾಗೂ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಅನುಕೂಲ ಕಲ್ಪಿಸಿದೆ.<br>ಮುಂದುವರಿದು ಹೊಸ ಕಾರ್ಯಕಾರಿ ಮಂಡಳಿಯ ಪ್ರಥಮ ಸಭೆಯಲ್ಲಿಯೇ ನೌಕರರ ಸಂಬಳವನ್ನು ಹೆಚ್ಚಿಸಲು ತೀರ್ಮಾನಿಸಲಾಯಿತು. ಆ ತೀರ್ಮಾನದಂತೆ ಸುಮಾರು 14 ಲಕ್ಷಕ್ಕೂ ಹೆಚ್ಚು ಹೆಚ್ಚುವರಿ ಸಂಬಳವನ್ನ ಸದರಿ ಸಾಲಿನಲ್ಲಿ (2022–23ನೇ ಸಾಲು) ನೌಕರರಿಗೆ ನೀಡಲಾಗಿದೆ. ಕರೋನ ಕಾಯಿಲೆ ನಂತರ ಇದೇ ಮೊದಲ ಬಾರಿಗೆ ಸಂಸ್ಥೆಯ ನೌಕರರಿಗೆ ಸಂಬಳವನ್ನ ಹೆಚ್ಚಿಸಲಾಗಿದೆ. ಸಂಸ್ಥೆಯ ಅಭಿವೃದ್ಧಿಯಲ್ಲಿ ಸಂಸ್ಥೆಯ ನೌಕರರ ಪಾತ್ರವನ್ನು ಕೊಂಡಾಡಿದರು. ಮುಂದೆಯು ಸಹ ಅವರ ಸಹಕಾರ ಹೀಗೆ ಇರಲಿ ಎಂದು ಹೇಳುತ್ತಾ ಹಾಗೂ ಬಯಸುತ್ತಾ ತಮ್ಮ ಅಧ್ಯಕ್ಷೀಯ ಭಾಷಣವನ್ನು ಮುಗಿಸಿದರು. |

| | | |
|---|---|---|
| 11. | ವಂದನಾರ್ಪಣೆ | ಸಂಸ್ಥೆಯ ಅಧ್ಯಕ್ಷರು, ಕಾರ್ಯದರ್ಶಿಯವರು, ಎಲ್ಲಾ ಸದಸ್ಯರು, ಹಾಗೂ ಮುಖ್ಯಸ್ಥರು, ಉಪನ್ಯಾಸಕರು, ಬೋಧಕ, ಬೋಧಕೇತರ ವರ್ಗದವರಿಗೆ ಸಂಸ್ಥೆಯ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕರಾದ ಶ್ರೀ.ಎಂ.ಎ.ಮಂಜುನಾಥ್‌ರವರು ವಂದನಾರ್ಪಣೆಯನ್ನು ನುಡಿದರು. |
| 12. | ರಾಷ್ಟ್ರಗೀತೆ | ಈ ವಾರ್ಷಿಕ ಮಹಾಸಭೆಯಲ್ಲಿ ಹಾಜರಿದ್ದ ಎಲ್ಲರೂ ಎದ್ದು ನಿಂತು ಗೌರವಯುತವಾಗಿ ರಾಷ್ಟ್ರಗೀತೆಯನ್ನು ಹಾಡುವುದರ ಮೂಲಕ ಸಭೆಯನ್ನು ಮುಕ್ತಾಯಗೊಳಿಸಿತು. |

**ದಿನಾಂಕ: 30–07–2023** **–ಸಹಿ–**

**ಸ್ಥಳ: ಕೃಷ್ಣರಾಜಪೇಟೆ.** **(ಎಸ್.ಸಿ.ಕಿರಣ್ ಕುಮಾರ್)**

**ಸಭಾಧ್ಯಕ್ಷರು**

## ಮಹಾಸಭೆ: 36

## 2023–2024ನೇ ಸಾಲಿನ ಸರ್ವಸದಸ್ಯರ ವಾರ್ಷಿಕ ಮಹಾಸಭೆ.
## ದಿನಾಂಕ: 28–07–2024

ಗ್ರಾಮಭಾರತಿ ವಿದ್ಯಾಸಂಸ್ಥೆ(ರಿ)., ಕೆ.ಆರ್.ಪೇಟೆ. ಈ ವಿದ್ಯಾಸಂಸ್ಥೆಯ 2023–2024ನೇ ಸಾಲಿನ ಸರ್ವಸದಸ್ಯರ ವಾರ್ಷಿಕ ಮಹಾಸಭೆಯು ದಿನಾಂಕ 28–07–2024ನೇ ಭಾನುವಾರ ಬೆಳಿಗ್ಗೆ 10.30 ಗಂಟೆಗೆ ಸರಿಯಾಗಿ ವಿದ್ಯಾಸಂಸ್ಥೆಯ ಸಾವುಕಾರ್ ಎಸ್.ಸಿ ಚಿಕ್ಕಣ್ಣಗೌಡರ ಸಭಾಗೃಹದಲ್ಲಿ ಸಂಸ್ಥೆಯ ಅಧ್ಯಕ್ಷರಾದ ಶ್ರೀಮಾನ್ ಎಸ್.ಸಿ.ಕಿರಣ್‌ಕುಮಾರ್‌ರವರ ಘನ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಈ ಮಹಾಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳು.

**ಹಾಜರಿ :** ಹಾಜರಾಗಿದ್ದ ಸದಸ್ಯರುಗಳ ಹಾಜರಾತಿಯನ್ನು ಅಲಾಯಿದ ಪಡೆಯಲಾಗಿದೆ.

| ಕ್ರ.ಸಂ | ವಿಷಯ | ತೀರ್ಮಾನ |
|---|---|---|
| 1 | ದೇವತಾ ಪ್ರಾರ್ಥನೆ | ಸಂಸ್ಥೆಯ ಆಂಗ್ಲ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆ, ಮುಖ್ಯ ಶಿಕ್ಷಕಿಯಾದ ಶ್ರೀಮತಿ ಜಯಶ್ರೀ ಇವರ ಜೊತೆ ಶ್ರೀಮತಿ ಲೀಲಾವತಿ ಹಾಗೂ ವೀಣಾ ಸಾಣಿಕೊಪ್ಪ ಇವರು ಸುಮಧುರವಾದ ಧ್ವನಿಯಿಂದ ದೇವತಾ ಪ್ರಾರ್ಥನೆಯನ್ನ ನಡೆಸಿಕೊಟ್ಟರು. |
| 2 | ಸ್ವಾಗತ ಭಾಷಣ | ವಿದ್ಯಾಸಂಸ್ಥೆಯ ಎಸ್‌ಎಂ ಲಿಂಗಪ್ಪ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಬಿ ಎಸ್ ರಘುಪತಿ ರವರು ಸಂಸ್ಥೆಯ ಗೌರವಾನ್ವಿತ ಅಧ್ಯಕ್ಷರು ಕಾರ್ಯದರ್ಶಿಯವರು ಆಡಳಿತ ಮಂಡಳಿಯ ಸದಸ್ಯರು ಸಂಸ್ಥೆಯ ಸದಸ್ಯರುಗಳು ಹಾಗೂ ಸಂಸ್ಥೆಯ ಎಲ್ಲಾ ವಿಭಾಗದ ಮುಖ್ಯಸ್ಥರು ಉಪನ್ಯಾಸಕರು ಹಾಗೂ ಸಿಬ್ಬಂದಿ ವರ್ಗದವರನ್ನೆಲ್ಲಾ ಆತ್ಮೀಯವಾಗಿ ಸ್ವಾಗತ ಮಾಡಿದರು. |
| 3 | ದಿವಂಗತರಾಗಿರುವ ಸಂಸ್ಥೆಯ ಮಾಜಿ ನಿರ್ದೇಶಕರಾದ ಶ್ರೀಯುತ | ದಿವಂಗತರಾಗಿರುವ ಸಂಸ್ಥೆಯ ಮಾಜಿ ನಿರ್ದೇಶಕರಾದ ಶ್ರೀಯುತ ಎಸ್.ಸಿ.ರಾಮಲಿಂಗೇಗೌಡರ |

| | | |
|---|---|---|
| | ಎಸ್.ಸಿ.ರಾಮಲಿಂಗೇಗೌಡರ ಆತ್ಮಕ್ಕೆ ಶಾಂತಿ ಯನ್ನು ಕೋರುವ ವಿಚಾರ | ಆತ್ಮಕ್ಕೆ ಶಾಂತಿಯನ್ನ ಕೋರುವ ಸಂಬಂಧ ಶ್ರೀಯುತ ರಾಮಲಿಂಗೇಗೌಡರ ಬಗ್ಗೆ ಎಚ್.ಎನ್ ವಜ್ರಪ್ರಸಾದ್ ರವರು ನುಡಿನಮನವನ್ನು ನುಡಿದರು. ಸಭೆಯಲ್ಲಿ ಹಾಜರಿದ್ದ ಅಧ್ಯಕ್ಷರು ಕಾರ್ಯದರ್ಶಿಯವರು ಎಲ್ಲರೂ ಎದ್ದು ನಿಂತು ಎರಡು ನಿಮಿಷಗಳ ಕಾಲ ಮೌನವನ್ನು ಆಚರಿಸುವುದರ ಮೂಲಕ ಶ್ರದ್ಧಾಂಜಲಿಯನ್ನು ಅರ್ಪಿಸಲಾಯಿತು. |
| 4 | ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆಯನ್ನ ಓದಿ ರೆಕಾರ್ಡ್ ಮಾಡುವ ವಿಚಾರ. | ಸರ್ವ ಸದಸ್ಯರ 2023–2024ನೇ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆಯನ್ನ ಎಸ್.ಎಂ. ಲಿಂಗಪ್ಪ ಶಿಕ್ಷಣ ಮಹಾವಿದ್ಯಾಲಯದ ಸಹ ಪ್ರಾಧ್ಯಾಪಕರಾದ ಶ್ರೀ ಸತೀಶ್ ರವರು ಓದಿದ್ದನ್ನು ಸಭೆಯು ಒಪ್ಪಿ ರೆಕಾರ್ಡ್ ಮಾಡತಕ್ಕದ್ದೆಂದು ಸಭೆಯು ಸರ್ವಾನುಮತ–ದಿಂದ ತೀರ್ಮಾನಿಸಿತು. |
| 5 | ಹಿಂದಿನ ವಾರ್ಷಿಕ ಮಹಾಸಭೆಯ ನಡಾವಳಿಗಳನ್ನು ಓದಿ ರೆಕಾರ್ಡ್ ಮಾಡುವ ವಿಚಾರ | ಹಿಂದಿನ ವಾರ್ಷಿಕ ಮಹಾ ಸಭೆಯ ನಡಾವಳಿಗಳನ್ನ ಪ್ರೌಢಶಾಲೆಯ ಮುಖ್ಯ ಶಿಕ್ಷಕ ಎಚ್.ಎಸ್.ಕೃಷ್ಣರವರು ಓದಿದನ್ನ ಸಭೆಯು ಸರ್ವಾನುಮತದಿಂದ ಒಪ್ಪಿ ರೆಕಾರ್ಡ್ ಮಾಡತಕ್ಕದ್ದು ತೀರ್ಮಾನಿಸಿತು. |
| 6 | ಸಂಸ್ಥೆಯ 2023–2024ನೇ ಸಾಲಿನ ವಾರ್ಷಿಕ ವರದಿಯನ್ನ ಮಂಡಿಸುವ ವಿಚಾರ | ಸಂಸ್ಥೆಯ 2023–2024ನೇ ಸಾಲಿನಲ್ಲಿ ಸಂಸ್ಥೆಯಲ್ಲಿ ನಡೆದಿರುವ ಕಾರ್ಯಕ್ರಮಗಳ ಸಂಪೂರ್ಣ ವರದಿಯನ್ನ ಪ್ರೌಢಶಾಲಾ ವಿಭಾಗದ ಎಚ್.ಎನ್.ವಜ್ರಪ್ರಸಾದ್ ಸಹ ಶಿಕ್ಷಕರು ಇವರು ವಿವರಿಸಿದರು. ಇದನ್ನ ಸಭೆಯು ಸರ್ವಾನುಮತಿದಿಂದ |

| | | |
|---|---|---|
| | | ಒಪ್ಪಿ ರೆಕಾರ್ಡ್ ಮಾಡತಕ್ಕದ್ದೆಂದು ತೀರ್ಮಾನಿಸಲಾಯಿತು. |
| 7 | 2023–2024ನೇ ಸಾಲಿನ ಲೆಕ್ಕ ಪರಿಶೋಧಕರ ವರದಿಯನ್ನು ಪರಿಶೀಲಿಸಿ ಅಂಗೀಕಾರ ಮಾಡುವ ವಿಚಾರ | 2023–2024ನೇ ಲೆಕ್ಕ ಪರಿಶೋಧಕರ ವರದಿಯನ್ನ ಕೂಲಂಕುಶವಾಗಿ ಪರಿಶೀಲಿಸಿ ಚರ್ಚಿಸಿದರು, ಈ ಲೆಕ್ಕ ಪರಿಶೋಧಕರ ವರದಿಯನ್ನು ಸಂಸ್ಥೆಯ ಕಾರ್ಯದರ್ಶಿಯವರಾದ ಶ್ರೀಮತಿ ಕೆ.ಎಂ.ಪುಟ್ಟಲಕ್ಷ್ಮಮ್ಮನವರ ಪರವಾಗಿ ಪ್ರೌಢಶಾಲಾ ಮುಖ್ಯ ಶಿಕ್ಷಕರು ಮಂಡಿಸಿದರು. ಲೆಕ್ಕಪರಿಶೋಧಕರ ವರದಿಯನ್ನ ಅಂಗೀಕರಿಸ–ತಕ್ಕದ್ದೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು. |
| 8 | 2024–2025 ನೇ ಸಾಲಿಗೆ ಸಂಸ್ಥೆಯ ಬಡ್ಜೆಟ್ ನ್ನ ಮಂಜೂರು ಮಾಡುವ ವಿಚಾರ | 2024–2025 ನೇ ಸಾಲಿನ ಸಂಸ್ಥೆಯ ಬಡ್ಜೆಟ್ ನ್ನ ವಿದ್ಯಾಸಂಸ್ಥೆಯ ಕಾರ್ಯದರ್ಶಿಯವರಾದ ಶ್ರೀಮತಿ ಕೆ.ಎಂ. ಪುಟ್ಟಲಕ್ಷ್ಮಮ್ಮನವರ ಪರವಾಗಿ ಪ್ರೌಢಶಾಲಾ ವಿಭಾಗದ ಸಹಶಿಕ್ಷಕರಾದ ಶ್ರೀ ಸಿ.ಆರ್.ಹರೀಶ್ ರವರು ಈ ಕೆಳಗಿನಂತೆ ವಿವರಿಸಿದರು. |

## 2023–24ನೇ ಸಾಲಿನ ಮಂಜೂರಾತಿಗಾಗಿ ಸಿದ್ಧಪಡಿಸಿರುವ ಬಡ್ಜೆಟ್ ವಿವರ.

| ಕ್ರ.ಸಂ. | ವಿವರಗಳು | 2023–24ನೇ ಸಾಲಿಗೆ ಮಂಜೂರಾಗಿರುವುದು (ರೂಪಾಯಿಗಳಲ್ಲಿ) | 2023–24ನೇ ಸಾಲಿಗೆ ಖರ್ಚಾಗಿರುವುದು (ರೂಪಾಯಿಗಳಲ್ಲಿ) | 2024–25ನೇ ಸಾಲಿಗೆ ಮಂಜೂರಾತಿ ಕೋರಿರುವುದು (ರೂಪಾಯಿಗಳಲ್ಲಿ) |
|---|---|---|---|---|
| 1 | ಸಂಸ್ಥೆಯ ನೌಕರರ ಸಂಬಳಕ್ಕಾಗಿ | ₹ 85,00,000.00 | ₹ 62,15,209.00 | ₹ 90,00,000.00 |
| 2 | ವಿದ್ಯುಚ್ಛಕ್ತಿ ಶುಲ್ಕ | ₹ 1,75,000.00 | ₹ 1,31,888.00 | ₹ 1,50,000.00 |
| 3 | ವಾರ್ಷಿಕ ಮಹಾಸಭೆಯ ಖರ್ಚು | ₹ 50,000.00 | ₹ 30,000.00 | ₹ 50,000.00 |
| 4 | ಪುಸ್ತಕ ಮತ್ತು ವಿಜ್ಞಾನ ಉಪಕರಣಗಳು/ಸಾಂಸ್ಕೃತಿಕ ಹಬ್ಬ/ರಾಷ್ಟ್ರೀಯ ಹಬ್ಬಗಳು | ₹ 2,00,000.00 | ₹ 1,99,900.00 | ₹ 1,00,000.00 |
| 5 | ಪ್ರಯಾಣ ಭತ್ಯೆ | ₹ 25,000.00 | ₹ 2500.00 | ₹ 25,000.00 |
| 6 | ಅತಿಥಿ ಸತ್ಕಾರ ಮತ್ತು ಗೌರವ ಧನ | ₹ 3,00,000.00 | ₹ – | ₹ 2,00,000.00 |
| 7 | ಅಂಚೆ ವೆಚ್ಚ | ₹ 5,000.00 | ₹ – | ₹ 5,000.00 |
| 8 | ಆಡಿಟ್ ಫೀ ಮತ್ತು ಅನಿರೀಕ್ಷಿತ ವೆಚ್ಚ | ₹ 1,50,000.00 | ₹ 18,880.00 | ₹ 1,00,000.00 |
| 9 | ಜಾಹಿರಾತು ವೆಚ್ಚ | ₹ 25,000.00 | ₹ – | ₹ 5,000.00 |
| 10 | ಫರ್ನಿಚರ್ ವೆಚ್ಚ | ₹ 2,00,000.00 | ₹ – | ₹ – |

| | | | | |
|---|---|---|---|---|
| 11 | ಸಾದಿಲ್ವಾರ್ ವೆಚ್ಚ ಮತ್ತು ಲೇಖನ ಸಾಮಾಗ್ರಿಗಳು ಮತ್ತು ಪರೀಕ್ಷಾ ವೆಚ್ಚಗಳು. | ₹ 6,00,000.00 | ₹ 4,16,958.00 | ₹ 6,00,000.00 |
| 12 | ವಿದ್ಯಾಸಂಸ್ಥೆ ಕಟ್ಟಡ ಹಾಗೂ ಆಸ್ತಿ ನಿರ್ವಹಣ ವೆಚ್ಚ | ₹ 20,00,000.00 | ₹ 6,86,400.00 | ₹ 15,00,000.00 |
| 13 | ಮುಂಗಡ ಹಣ ಮತ್ತು ಸಾಲಗಳ ಮರುಪಾವತಿ ವೆಚ್ಚ | ₹ 1,60,000.00 | ₹ – | ₹ 1,60,000.00 |
| 14 | ಸ್ಥಿರ ನಿಧಿಗಾಗಿ | ₹ 10,00,000.00 | ₹ 11,82,838.00 | ₹ 10,00,000.00 |
| 15 | ಸಂಸ್ಥೆ ಹಾಗೂ ಸಂಸ್ಥೆಯ ಎಲ್ಲಾ ವಿಭಾಗಗಳ ನವೀಕರಣ ಶುಲ್ಕ ಪಾವತಿಸಲು. | ₹ 4,00,000.00 | ₹ 24,900.00 | ₹ 3,00,000.00 |
| | **ಒಟ್ಟು** | **₹ 1,37,90,000.00** | **₹ 9,09,473.00** | **₹ 1,32,95,000.00** |

ಮೇಲಿನ ಸಂಸ್ಥೆಯ ಬಡ್ಜೆಟ್ ನ್ನ ಸಭೆಯಲ್ಲಿ ಚರ್ಚಿಸಿ ಮಂಜೂರು ಮಾಡತಕ್ಕದ್ದೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

| | | |
|---|---|---|
| 9 | 2024–2025ನೇ ಸಾಲಿನ ಆಡಳಿತ ಮಂಡಳಿ ರಚನೆ | 2024–2025 ನೇ ಸಾಲಿನ ಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯರು ಹಾಗೂ ಪದನಾಮಗಳನ್ನ ಕಾರ್ಯದರ್ಶಿಯವರಾದ ಶ್ರೀಮತಿ ಕೆ.ಎಂ.ಪುಟ್ಟಲಕ್ಷ್ಮಮ್ಮ ನವರ ಪರವಾಗಿ ಶ್ರೀಮತಿ ಜಯಶ್ರೀರವರು ಈ ಕೆಳಕಂಡಂತೆ ವಿವರಿಸಿದರು. |

| ಕ್ರ.ಸಂ | ಸದಸ್ಯರ ಹೆಸರು | ಪದನಾಮ |
|---|---|---|
| 1 | ಶ್ರೀ. ಎಸ್.ಸಿ. ಕಿರಣ್ ಕುಮಾರ್ ರವರು | ಅಧ್ಯಕ್ಷರು |
| 2 | ಶ್ರೀಮತಿ ಕೆ.ಎಂ.ಪುಟ್ಟಲಕ್ಷ್ಮಮ್ಮ ರವರು | ಕಾರ್ಯದರ್ಶಿ |
| 3 | ಶ್ರೀ ಬಿ.ಎಸ್. ಚಂದ್ರಶೇಖರ್ ರವರು | ನಿರ್ದೇಶಕರು |
| 4 | ಶ್ರೀಮತಿ ಎನ್.ಕೌಸಲ್ಯ ರವರು | ನಿರ್ದೇಶಕರು |
| 5 | ಶ್ರೀ ಎಲ್.ವಿ.ನಾಗೇಶ್ ರವರು | ನಿರ್ದೇಶಕರು |

| | | |
|---|---|---|
| 6 | ಶ್ರೀ ಎಸ್.ಟಿ.ಶ್ರೀನಿವಾಸ್ ರವರು | ನಿರ್ದೇಶಕರು |
| 7 | ಶ್ರೀ ಎ.ಎನ್.ಬಾಲಚಂದ್ರ ರವರು | ನಿರ್ದೇಶಕರು |
| 8 | ಶ್ರೀ ಎಸ್.ಎಸ್.ರುದ್ರೇಶ್ ರವರು | ನಿರ್ದೇಶಕರು |
| 9 | ಶ್ರೀ ಎಂ.ಜಿ.ಪ್ರಕಾಶ್ ರವರು | ನಿರ್ದೇಶಕರು |

ಈ ಆಡಳಿತ ಮಂಡಳಿಗೆ ಮಹಾಸಭೆಯು ಒಪ್ಪಿ ಅಂಗೀಕರಿಸ

ತಕ್ಕದ್ದು ಸರ್ವಾನುಮತದಿಂದ ತೀರ್ಮಾನಿಸಿತು

| | | |
|---|---|---|
| 10 | ಸಂಸ್ಥೆಯ ಸದಸ್ಯರುಗಳಿಗೆ ಸಲಹೆ ನೀಡಲು ಅವಕಾಶ | ಸಂಸ್ಥೆಯ ಸದಸ್ಯರುಗಳಿಗೆ ಸಂಸ್ಥೆಗೆ ಸಂಬಂಧಪಟ್ಟಂತೆ ಸಲಹೆಗಳನ್ನು ನೀಡುವ ಅವಕಾಶ ಬಂದಂತಹ ಸಂದರ್ಭದಲ್ಲಿ, ಮೊದಲಿಗೆ ಸಂಸ್ಥೆಯ ಸದಸ್ಯರಾದ ಶ್ರೀಯುತ ಕೆ.ಆರ್.ಪುಟ್ಟಸ್ವಾಮಿ, ನಿವೃತ್ತ ಮುಖ್ಯಶಿಕ್ಷಕರು ಮಾತನಾಡುತ್ತಾ ಸಂಸ್ಥೆಯು ದಿನೇ ದಿನೇ ಪ್ರವರ್ಧಮಾನಕ್ಕೆ ಬೆಳೆಯುತ್ತಿರುವುದು ಶ್ಲಾಘನೀಯ ವಿಚಾರ. ಸಂಸ್ಥೆಯು ಬೃಹದಾಕಾರವಾಗಿ ಬೆಳೆದಿರುವುದರಿಂದ ಹಣಕಾಸು ವ್ಯವಹಾರವನ್ನು ನೋಡಿಕೊಳ್ಳಲು ಒಬ್ಬರು ಕೋಶಾಧ್ಯಕ್ಷರನ್ನು ನೇಮಕ ಮಾಡಿಕೊಳ್ಳುವುದು ಉಚಿತ ಎಂಬುದು ನನ್ನ ಭಾವನೆ ಎಂದರು.<br>ಇದಕ್ಕೆ ಅಧ್ಯಕ್ಷರು ಉತ್ತರಿಸುತ್ತಾ... ಸಂಸ್ಥೆಯ ಸಂವಿಧಾನದಲ್ಲಿ ಕೋಶಾಧ್ಯಕ್ಷರ ಅಧಿಕಾರವೂ ಸೀಮಿತವಾಗಿದೆ ಅಲ್ಲದೆ ಸಂಸ್ಥೆಯಲ್ಲಿ ಹಣಕಾಸು ವ್ಯವಹಾರವನ್ನು ನಿರ್ವಹಿಸಲು ಒಬ್ಬರು ಅಕೌಂಟೆಂಟ್ ಹಾಗೂ ಕ್ಯಾಶಿಯರ್ ಅನ್ನು ಪೂರ್ಣ ಪ್ರಮಾಣದಲ್ಲಿ ನೇಮಕ ಮಾಡಿದ್ದು. ಎಲ್ಲಾ ಹಣಕಾಸು ವ್ಯವಹಾರವು ಸಂಸ್ಥೆಯ ಕಾರ್ಯದರ್ಶಿಯವರ ಮೇಲ್ವಿಚಾರಣೆಯಲ್ಲಿ |

| | | |
|---|---|---|
| | | ನಡೆಯುವುದರಿಂದ ಕೋಶಾಧ್ಯಕ್ಷರ ಅವಶ್ಯಕತೆ ಇರುವುದಿಲ್ಲ ಎಂದರು.<br>ಕಳೆದ ಸಾಲಿನಲ್ಲಿ ಎಸ್.ಎಸ್.ಎಲ್.ಸಿ ಫಲಿತಾಂಶ 63.5%ಗೆ ಕುಸಿತವಾಗಿದೆ. ಇದಕ್ಕೆ ಕಾರಣವನ್ನ ಬಯಸುತ್ತೇನೆ. ಇದಕ್ಕೆ ಈ ಸಾಲಿನಲ್ಲಿ ಪರೀಕ್ಷಾ ಕೊಠಡಿಗಳಿಗೆ ಸಿ.ಸಿ.ಟಿವಿ ಅಳವಡಿಸಿರುವುದು ಕಾರಣ ಎಂಬುದನ್ನು ನಾನು ಒಪ್ಪುವುದಿಲ್ಲ ಎಂದರು. ಇದಕ್ಕೆ ಗ್ರಾಮಭಾರತಿ ಪ್ರೌಢಶಾಲೆಯ ಮುಖ್ಯ ಶಿಕ್ಷಕರಾದ ಎಚ್.ಎಸ್.ಕೃಷ್ಣರವರು ಉತ್ತರಿಸುತ್ತಾ…ಇತ್ತೀಚಿನ ವರ್ಷಗಳಲ್ಲಿ ಕನ್ನಡ ಮಾಧ್ಯಮಕ್ಕೆ ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳು ಹೆಚ್ಚು ಪ್ರವೇಶ ಪಡೆಯುತ್ತಿದ್ದಾರೆ. ಆ ಸಂದರ್ಭದಲ್ಲಿ ಪುಟ್ಟಸ್ವಾಮಿಯವರು ಮಧ್ಯ ಪ್ರವೇಶಿಸಿ ಇದನ್ನು ನಾನು ಒಪ್ಪಲು ತಯಾರಿಲ್ಲ ಎಂದರು. ಕೃಷ್ಣಾರವರು ಮಾತನ್ನು ಮುಂದುವರಿಸುತ್ತಾ… ಕಳೆದ ಸಾಲಿನಲ್ಲಿ ನಮ್ಮಲ್ಲಿ ಸುಮಾರು 74 ವಿದ್ಯಾರ್ಥಿಗಳು ಎಸ್.ಎಸ್.ಎಲ್.ಸಿ ಪರೀಕ್ಷೆಯನ್ನು ಬರೆದಿರುತ್ತಾರೆ. ಈ 74 ವಿದ್ಯಾರ್ಥಿ–ಗಳಲ್ಲಿ ಶೇಕಡ 75ರಷ್ಟು ವಿದ್ಯಾರ್ಥಿಗಳ ಶೈಕ್ಷಣಿಕ ಗುಣಮಟ್ಟವು ಕಡಿಮೆ ಇದ್ದಿರುತ್ತದೆ ಎಂದರು. ನಾನು ಮತ್ತು ನನ್ನ ಸಹೋದ್ಯೋಗಿಗಳ ಸಂಪೂರ್ಣ ಸಹಕಾರದೊಂದಿಗೆ 74 ವಿದ್ಯಾರ್ಥಿಗಳಲ್ಲಿ 47 ವಿದ್ಯಾರ್ಥಿ–ಗಳು ಪರೀಕ್ಷೆಯಲ್ಲಿ ತೇರ್ಗಡೆ ಹೊಂದುವಂತೆ ಮಾಡಲು ಯಶಸ್ವಿಯಾಗಿ ರುತ್ತೇವೆ. ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೂ ಸಹ ವಿಶೇಷ ತರಗತಿಗಳನ್ನು ನಡೆಸುತ್ತಿದ್ದೇವೆ ಎಂದರು. ಇದಕ್ಕೆ ಅವರ ಸಹೋದ್ಯೋಗಿಗಳಾದ ಎಚ್.ಎನ್.ವಜ್ರಪ್ರಸಾದ್, ಜಿ.ಸಿ.ಸ್ವಾಮಿ, ಸಂಸ್ಥೆಯ ನಿವೃತ್ತ ಶಿಕ್ಷಕರಾದ ಶ್ರಿಯುತ |

| | | |
|---|---|---|
| | | ಟಿ.ಸುರೇಶ್ ಹಾಗೂ ಸಭೆಯಲ್ಲಿದ್ದ ಇತರೆ ಸದಸ್ಯರುಗಳು ಸಹ ಕೃಷ್ಣರವರ ಮಾತಿಗೆ ಸಹಮತವನ್ನು ವ್ಯಕ್ತಪಡಿಸಿದರು. ಕೃಷ್ಣರವರು ಮಾತನ್ನು ಮುಂದುವರಿಸುತ್ತಾ ಮುಂದಿನ ಶೈಕ್ಷಣಿಕ ವರ್ಷದಲ್ಲಿ ಎಸ್.ಎಸ್.ಎಲ್.ಸಿ. ಫಲಿತಾಂಶ ಉತ್ತಮ ಪಡಿಸಲು ಅಗತ್ಯ ಕ್ರಮವನ್ನು ಕೈಗೊಳ್ಳಲಾಗುವುದು. ಇದಕ್ಕೆ ಕೆ.ಆರ್.ಪುಟ್ಟಸ್ವಾಮಿರವರು (ನಮ್ಮ ಗುರುಗಳು) ಯಾವ ರೀತಿಯ ಕ್ರಮವನ್ನ ಕೈಕೊಳ್ಳಬೇಕು ಎಂಬ ಸಲಹೆಗಳೇ ನಾದರೂ ನೀಡಿದರೆ ಅವುಗಳನ್ನು ಅವಶ್ಯವಾಗಿ ಅನುಸರಿಸಲಾಗುವುದು ಎಂದು ಸಮಜಾಯಿಷಿ ನೀಡಿದರು. ಕೆ.ಆರ್.ಪುಟ್ಟಸ್ವಾಮಿರವರು ಮಾತನ್ನು ಮುಂದುವರೆಸುತ್ತಾ... ಸರ್ಕಾರವು ಸರ್ಕಾರಿ ನೌಕರರಿಗೆ ಏಳನೇ ವೇತನ ಆಯೋಗವನ್ನ ಈ ತಿಂಗಳಿನಿಂದ ಜಾರಿ ಮಾಡಿರುವುದು ಎಲ್ಲರಿಗೂ ತಿಳಿದಿರುವ ವಿಷಯ. ನಮ್ಮ ಸಂಸ್ಥೆಯಲ್ಲೂ ಪ್ರತಿ ವರ್ಷವೂ ಸಹ ನೌಕರರುಗಳಿಗೆ ಅವರವರ ಜೇಷ್ಠತೆಗೆ ಅನುಗುಣವಾಗಿ ಬಡ್ತಿಯನ್ನು ನೀಡುತ್ತಿರುವುದು ಸಂಸ್ಥೆಯ ಜಮಾ–ಖರ್ಚು ವರದಿಯನ್ನು ಗಮನಿಸಿದಾಗ ತಿಳಿಯುತ್ತದೆ. ಹಾಗೂ ಬಡ್ಜೆಟ್ ನಲ್ಲಿ ಅನುದಾನವನ್ನು ಕಲ್ಪಿಸಿರುವುದನ್ನು ಗಮನಿಸಿದಾಗ ಮುಂದಿನ ಸಾಲಿನಲ್ಲಿಯೂ ಸಹ ನೌಕರರ ಸಂಬಳವನ್ನು ಹೆಚ್ಚಿಸಲು ಅಧ್ಯಕ್ಷರು ಹಾಗೂ ಕಾರ್ಯದರ್ಶಿಯವರು ಕ್ರಮಕೈಗೊಳ್ಳುವರೆಂದು ತಿಳಿಯುತ್ತದೆ. ಮುಂದೆಯೂ ಸಹ ಇದೇ ರೀತಿ ಸಂಸ್ಥೆಯನ್ನ ಇನ್ನೂ ಎತ್ತರಕ್ಕೆ ಬೆಳೆಸಲಿ ಇದಕ್ಕೆ ನಮ್ಮ ಸಂಪೂರ್ಣ ಸಹಕಾರವಿದೆ ಎಂದು ಹೇಳಿ, ಸಭೆಯಲ್ಲಿ ಮಾತನಾಡಲು ಅವಕಾಶ ನೀಡಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ಮಾತನ್ನು ಮುಕ್ತಾಯ ಮಾಡಿದರು. |

| | | |
|---|---|---|
| | | ಎರಡನೆರಯವರಾಗಿ ಸದಸ್ಯರಾದ ಶ್ರೀಯುತ ಶಾಂತಹೃದಯರವರು ಮಾತನಾಡುತ್ತಾ... ಸಂಸ್ಥೆಯಲ್ಲಿ ಸಭೆಯು ಪ್ರಾರಂಭವಾಗುವ ಮುಂಚಿತವಾಗಿ ಸಹಿ ಪಡೆಯುವುದು ಉಚಿತವಲ್ಲ ಎಂದು ಸಲಹೆ ನೀಡಿದರು. ಈ ಸಂದರ್ಭದಲ್ಲಿ ಸಭೆಯಲ್ಲಿ ಹಾಜರಿದ್ದ ಸದಸ್ಯರಾದ ಮಲ್ಕೋನಹಳ್ಳಿ ಅಣ್ಣಯ್ಯರವರು ಅಧ್ಯಕ್ಷರ ಅನುಮತಿ ಯನ್ನು ಪಡೆದು ಶಾಂತಹೃದಯ ಅವರಿಗೆ ಹಾಜರಾತಿ ಪುಸ್ತಕಕ್ಕೆ ಸಭೆಯ ಮುಂಚೆ ಸಹಿಯನ್ನ ಪಡೆದು ಕೊರಂ ಇದೆ ಎಂಬುದನ್ನು ದೃಢೀಕರಿಸಿಕೊಂಡು ಸಭೆ ಯನ್ನ ಪ್ರಾರಂಭಿಸುವುದು ವಾಡಿಕೆ. ಇದನ್ನು ಬದಲಾಯಿಸುವುದು ಉಚಿತವು ಅಲ್ಲ ಮತ್ತು ಕಾನೂನಿ ನಲ್ಲಿ ಅವಕಾಶವೂ ಇಲ್ಲ ಎಂದು ತಿಳಿಸಿದರು.<br>ಶ್ರೀಯುತ ಶಾಂತಹೃದಯರವರು ಸಂಸ್ಥೆಗೆ ಸಂಬಂದಪಡದ ಕೆಲವೊಂದು ಇತರೆ ವಿಷಯಗಳನ್ನು ಪ್ರಸ್ತಾಪಿಸಿದರು ಅವುಗಳನ್ನು ಕಡತದೊಳಗೆ ಸೇರಿಸದಿರಲು ಅಧ್ಯಕ್ಷರು ಸೂಚಿಸಿದರು.<br>ಮೂರನೆಯವರಾಗಿ ಸದಸ್ಯರಾದ ಶ್ರೀಯುತ ಎಸ್.ಕೆ.ಪ್ರಕಾಶ್ ಮಾತನಾಡುತ್ತಾ... ಸಂಸ್ಥೆಯ ಮಾಜಿ ನಿರ್ದೇಶಕರಾದ ಎಸ್.ಸಿ.ರಾಮಲಿಂಗೇಗೌಡರ ಆತ್ಮಕ್ಕೆ ಶಾಂತಿ ಕೋರಿದ್ದು ಉಚಿತವಾಗಿತ್ತು. ಮುಂದಿನ ದಿನಗಳಲ್ಲಿ ಸಂಸ್ಥೆಯ ಅಜೀವ ಸದಸ್ಯರುಗಳು ಯಾರಾದರೂ ನಿಧನರಾದರೆ ಅವರಿಗೂ ಸಹ ಶ್ರದ್ಧಾಂಜಲಿ–ಯನ್ನು ಸಲ್ಲಿಸುವುದು ಸೂಕ್ತ ಎಂಬ ಅಭಿಪ್ರಾಯವನ್ನ ಸಭೆಯ ಮುಂದಿಟ್ಟರು. |
| 11. | ಅಧ್ಯಕ್ಷರ ಭಾಷಣ | ಗ್ರಾಮಭಾರತಿ ವಿದ್ಯಾಸಂಸ್ಥೆಯ ಅಧ್ಯಕ್ಷರು ಹಾಗೂ ಮಹಾಸಭೆ–ಯ ಅಧ್ಯಕ್ಷತೆಯನ್ನ ವಹಿಸಿದ್ದ |

| | | |
|---|---|---|
| | | ಶ್ರೀಯುತ ಎಸ್.ಸಿ.ಕಿರಣ್ ಕುಮಾರ್ ರವರು ಮಹಾಸಭೆಯ ವೇದಿಕೆಯಲ್ಲಿ ಉಪಸ್ಥಿತರಿದ್ದ ಎಲ್ಲಾ ಹಿರಿಯರು ಹಾಗೂ ವೇದಿಕೆಯ ಮುಂಭಾಗದಲ್ಲಿ ಉಪಸ್ಥಿತರಿದ್ದ ಸರ್ವರಿಗೂ ನಮಸ್ಕರಿಸಿ ಅಧ್ಯಕ್ಷೀಯ ಭಾಷಣವನ್ನು ಪ್ರಾರಂಭಿಸಿದರು.<br>ಮೊದಲಿಗೆ ಸಂಸ್ಥೆಯ ಮಾಜಿ ನಿರ್ದೇಶಕರಾದ ದಿವಂಗತ ಎಸ್.ಸಿ.ರಾಮಲಿಂಗೇಗೌಡರಿಗೆ ನುಡಿನಮನವನ್ನು ಸಲ್ಲಿಸಿದರು. ಎಸ್.ಸಿ. ರಾಮಲಿಂಗೇಗೌಡರು ನನ್ನ ದೊಡ್ಡಪ್ಪನವರು. ನಮ್ಮ ತಂದೆಯ ತಲೆ–ಮಾರಿನ ಕೊನೆಯ ಕೊಂಡಿಯಾಗಿದ್ದರು. ಅವರು ಮತ್ತು ನಾನು ಒಟ್ಟಿಗೆ ಸಂಸ್ಥೆಯ ನಿರ್ದೇಶಕರಾದವರು. 2007ನೇ ಇಸವಿಯಲ್ಲಿ ಸಂಸ್ಥೆಯ ಅಧ್ಯಕ್ಷರಾಗಿದ್ದ ನನ್ನ ತಂದೆ ಎಸ್.ಸಿ.ಚಿಕ್ಕಣ್ಣಗೌಡರು ನಿಧನರಾದಾಗ ನಮ್ಮ ಕುಟುಂಬದಲ್ಲಿ ಹಿರಿಯರಾದ ನನ್ನ ಅತ್ತೆ ಮತ್ತು ಅವರ ಮಕ್ಕಳು ಎಲ್ಲರೂ ರಾಮಲಿಂಗೇಗೌಡರು ಸಂಸ್ಥೆಯ ಅಧ್ಯಕ್ಷ ಸ್ಥಾನವನ್ನು ವಹಿಸಿಕೊಂಡು ಮುನ್ನಡೆಸಲಿ ನೀನು ಅವರೊಂದಿಗೆ ಕೈಜೋಡಿಸಬೇಕು ಎಂದು ಹೇಳಿದ್ದರು. ಆದರೆ ನನ್ನ ದೊಡ್ಡಪ್ಪ ನನ್ನ ಹೆಸರನ್ನುಅಧ್ಯಕ್ಷ ಸ್ಥಾನಕ್ಕೆ ಸೂಚಿಸಿ ನನ್ನನ್ನು ಅಧ್ಯಕ್ಷ ಸ್ಥಾನದಲ್ಲಿ ಕೂರಿಸಿದರು. ನಂತರ ನನಗೆ, ನೋಡು ಮಗ ನಾನು ಮೈಸೂರಿನಲ್ಲಿ ಇದ್ದುಕೊಂಡು ಇಲ್ಲಿ ಸಂಸ್ಥೆಯನ್ನು ಮುನ್ನಡೆಸುವುದು ಸೂಕ್ತವಲ್ಲ. ಅಲ್ಲದೆ ನೀನು ಕಾನೂನು ಪದವೀಧರ, ನೀನು ಕಾನೂನನ್ನು ಬಲ್ಲವನಾಗಿದ್ದು ನನಗಿಂತ ನೀನು ಆಸ್ಥಾನಕ್ಕೆ ಸೂಕ್ತ. ನನ್ನ ಕೊನೆ ಉಸಿರು ಇರುವವರೆಗೂ ನಾನು ನಿನ್ನ ಜೊತೆಗಿರುತ್ತೇನೆ. ನೀನು ಧೈರ್ಯವಾಗಿ ಸಂಸ್ಥೆಯನ್ನು ಮುನ್ನಡೆಸು ಎಂದು ಹರಸಿದರು. ನಮ್ಮ ಕುಟುಂಬದವರು ಯಾರು ಯಾವತ್ತೂ ಹಣಕ್ಕಾಗಿ ಯಾಗಲಿ, ಅಧಿಕಾರಕ್ಕಾಗಲಿ ಆಸೆ ಪಟ್ಟವರಲ್ಲ. ಅಲ್ಲದೆ ಸಂಸ್ಥೆಯ ಅಧ್ಯಕ್ಷ ಸ್ಥಾನವನ್ನು ಅಧಿಕಾರವೆಂದು ಭಾವಿಸಿದವರೂ ಅಲ್ಲ. ಸಂಸ್ಥೆಯನ್ನ ಕಟ್ಟುವುದು ಸಂಸ್ಥೆಗಾಗಿ ದುಡಿಯುವುದು ನಾವು ಮಾಡುವ ಸಾಮಾಜಿಕ ಸೇವೆ ಎಂದು ತಿಳಿದಿದ್ದವರು. ಈ ವಿಷಯದಲ್ಲಿ ನನ್ನ ಹಾದಿಯಾಗಿ ರಾಮಲಿಂಗೇಗೌಡರು ಸಹ ಹೊರತಾಗಿರಲಿಲ್ಲ. ಇಂದಿನ ದಿನಮಾನಸದಲ್ಲಿ ಸಾಕಷ್ಟು ಖಾಸಗಿ ಶಾಲಾ– |

| | | |
|---|---|---|
| | | ಕಾಲೇಜುಗಳು ತಲೆಯೆತ್ತಿದ್ದು. ಯಾರೊಬ್ಬರೂ ಸಂಘ–ಸಂಸ್ಥೆಯ<br>ಅಡಿಯಲ್ಲಿ ಶಾಲಾ–ಕಾಲೇಜುಗಳನ್ನು ಪ್ರಾರಂಭಿಸಿಲ್ಲ. ಬದಲಾಗಿ<br>ಟ್ರಸ್ಟ್ ಅಡಿಯಲ್ಲಿ ಪ್ರಾರಂಭಿಸಿರು ತ್ತಾರೆ. ಏಕೆಂದರೆ ಸಂಸ್ಥೆಯ<br>ಅಡಿಯಲ್ಲಿ ಪ್ರಾರಂಭಿಸಿದರೆ ಪ್ರತಿ ವರ್ಷ ಸದಸ್ಯರುಗಳಿಗೆ<br>ಮಹಾಸಭೆಯಲ್ಲಿ ಉತ್ತರಿಸ ಬೇಕಾಗುತ್ತದೆ. ಆದರೆ<br>ಟ್ರಸ್ಟ್ ಅಡಿಯಲ್ಲಿ ಪ್ರಾರಂಭಿಸಿದರೆ ಯಾರಿಗೂ<br>ಉತ್ತರಿಸಬೇಕಾಗಿಲ್ಲ. ಆದರೆ ತಮ್ಮ ಪೂರ್ವಜರು ಇದಕ್ಕೆ<br>ಹೊರತಾಗಿ ಸಂಘ–ಸಂಸ್ಥೆಗಳ ಕಾನೂನಿನ ಅಡಿಯಲ್ಲಿ<br>ಗ್ರಾಮಭಾರತಿ ವಿದ್ಯಾಸಂಸ್ಥೆಯನ್ನು ನೋಂದಾಯಿಸಿ ಸುಮಾರು<br>150ಕ್ಕೂ ಹೆಚ್ಚು ಸಮಾನಮಸ್ಕರನ್ನು ಸದಸ್ಯರನ್ನಾಗಿ ಮಾಡಿಕೊಂಡು<br>ಶಾಲಾ–ಕಾಲೇಜುಗಳನ್ನು ಪ್ರಾರಂಭಿಸಿ ಪ್ರತಿ ವರ್ಷವೂ ಸಂಸ್ಥೆಯಲ್ಲಿ<br>ನಡೆಯುವ ಎಲ್ಲಾ ವರದಿಯನ್ನು ಮಹಾಸಭೆಯಲ್ಲಿ ಮಂಡಿಸಿ ಪ್ರತಿ<br>ವರ್ಷವೂ ಸಂಸ್ಥೆಯನ್ನು ನವೀಕರಿಸಲಾಗುತ್ತಿದೆ. ಅವರ ಆದರ್ಶ<br>ಗಳನ್ನು ಹಾಗೂ ತತ್ವಗಳನ್ನು ನಾವು ಸಹ ಮೈಗೂಡಿಸಿಕೊಂಡು<br>ಸಾಧ್ಯವಾದಷ್ಟು ಅನುಸರಿಸುತ್ತಿದ್ದೇವೆ ಎಂದು ತಿಳಿಸಬಯಸುತ್ತೇನೆ.<br>ಶ್ರೀಯುತ ರಾಮಲಿಂಗೇ ಗೌಡರು ಸದಾ<br>ಹಸನ್ಮುಖಿಗಳು, ಮಗುವಿನ ಮನಸುಳ್ಳವ ರಾಗಿದ್ದು ಎಲ್ಲಾ<br>ವಯೋಮಾನದವರೊಂದಿಗೆ ಸುಲಭ ವಾಗಿ ಬೆರೆಯುತಿದ್ದರು.<br>ಹಿಂದುಳಿದ ವರ್ಗದವರು ಹಾಗೂ ಬಡವರನ್ನು ಕಂಡರೆ ಮಾತೃ<br>ಹೃದಯಿಯಾಗುತ್ತಿದ್ದರು. ಅವರು ಇಂದು ಭೌತಿಕವಾಗಿ<br>ನಮ್ಮೊಂದಿಗಿಲ್ಲ ಆದರೂ ಅವರ ಆಶೀರ್ವಾದ ಸದಾ ನಮ್ಮ ಮೇಲೆ<br>ಇರುತ್ತದೆ. ಮುಂದುವರೆದು... ಸದಸ್ಯರಾದ ಪುಟ್ಟಸ್ವಾಮಿರವರು<br>ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಕಡಿಮೆ ಪಲಿತಾಂಶ<br>ಬಂದಿರುವುದಕ್ಕೆ ಅಸಮಾಧಾನವನ್ನು ವ್ಯಕ್ತಪಡಿಸಿರುವುದು<br>ಸರಿಯಷ್ಟೇ. ಇದಕ್ಕೆ ಮುಖ್ಯೋಪಾಧ್ಯಾಯರು ಹಾಗೂ ಇತರೆ<br>ಸದಸ್ಯರುಗಳು ಸಹ ಕಾರಣವನ್ನು ತಿಳಿಸಿರುತ್ತಾರೆ. ನನ್ನ ದೃಷ್ಟಿಯಲ್ಲಿ<br>ಇದಕ್ಕೆ ಮತ್ತೊಂದು ಕಾರಣವೂ ಇದೆ. ಅದೇನೆಂದರೆ. ಈ<br>ಸಾಲಿನಿಂದ ಎಸ್.ಎಸ್.ಎಲ್.ಸಿ ಪರೀಕ್ಷಾ ವಿಧಾನವನ್ನ<br>ಸಾರ್ವಜನಿಕ ಶಿಕ್ಷಣ ಇಲಾಖೆ ಬದಲಾಯಿಸಿದ್ದು, ಒಟ್ಟು ಮೂರು<br>ಪರೀಕ್ಷೆಗಳನ್ನ ನಡೆಸಲು ಇಲಾಖೆ ತೀರ್ಮಾನಿಸಿದೆ. ಅಲ್ಲದೆ |

| | | |
|---|---|---|
| | | ವಿದ್ಯಾರ್ಥಿಗಳಿಗೆ ಮೂರು ಪರೀಕ್ಷೆಗಳಲ್ಲಿ ಯಾವ ಪರೀಕ್ಷೆಯಲ್ಲಿ ಯಾವ ವಿಷಯವನ್ನು ಬೇಕಾದರೂ ಬರೆಯಲು ಅನುಮತಿಸಿದ್ದು, ಈಗ ನಮ್ಮ ವರದಿಯಲ್ಲಿ ತಿಳಿಸಿರುವುದು ಪ್ರಥಮ ಪರೀಕ್ಷೆಯ ಫಲಿತಾಂಶ ಮಾತ್ರವಾಗಿರುತ್ತದೆ. ಈಗಾಗಲೇ ದ್ವಿತೀಯ ಪರೀಕ್ಷೆಯು ಮುಕ್ತಾಯವಾಗಿ ಫಲಿತಾಂಶ ಬಂದಿದ್ದು ಅದರಲ್ಲಿ 9 ವಿದ್ಯಾರ್ಥಿಗಳು ತೇರ್ಗಡೆಯಾದವರನ್ನು ಪರಿಗಣಿಸಿದರೆ ಪ್ರೌಢಶಾಲೆಯ ಫಲಿತಾಂಶ 76% ಆಗಿರುತ್ತದೆ. ಇದಲ್ಲದೆ ಆಗಸ್ಟ್ ತಿಂಗಳಿನಲ್ಲಿ ಮೂರನೆಯ ಪರೀಕ್ಷೆ ನಡೆಯುವುದು, ಅದರಲ್ಲಿಯೂ ಕೆಲವು ವಿದ್ಯಾರ್ಥಿಗಳು ತೇರ್ಗಡೆ ಹೊಂದಿದರೆ ಫಲಿತಾಂಶವು ಇನ್ನು ಉತ್ತಮಗೊಳ್ಳಬಹುದು. ಅಲ್ಲದೆ ಈ ಎರಡು ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದದ ವಿದ್ಯಾರ್ಥಿಗಳನ್ನು ಅನುತ್ತೀರ್ಣ ಎಂದು ನಮೂದಿಸುವಂತಿಲ್ಲ. ಅದರ ಬದಲಾಗಿ ಸಾರ್ವಜನಿಕ ಶಿಕ್ಷಣ ಇಲಾಖೆಯೂ ತೇರ್ಗಡೆ ಹೊಂದದ ವಿದ್ಯಾರ್ಥಿಗಳ ಹೆಸರಿನ ಮುಂದೆ ಏನ್.ಸಿ. ಎಂದು ಬರೆಯಲಾಗಿದೆ ಅಂದರೆ ನಾಟ್ ಕಂಪ್ಲೀಟ್. ಶಿಕ್ಷಣ ಇಲಾಖೆಯು ಪರೀಕ್ಷಾ ವಿಧಾನವನ್ನ ಬದಲಾಯಿಸಿರುವುದರಿಂದ ಈ ಬಾರಿ ಸ್ವಲ್ಪ ಗೊಂದಲಗಳಾಗಿದ್ದು ಇದನ್ನು ನಮ್ಮ ಶಿಕ್ಷಕರು ಸರಿಯಾಗಿ ಪಾಠ ಮಾಡಿಲ್ಲವೆಂದು ದೂರುವುದು ಬೇಡ. ಮುಂದೆ ಅದು ಸರಿ ಹೋಗಬಹುದೆಂಬ ಆಶಾಭಾವನೆಯೊಂದಿಗೆ ನಾವೆಲ್ಲರೂ ಮುಂದುವರೆಯೋಣ. ನಮ್ಮ ಮುಖ್ಯೋ ಪಾಧ್ಯಾಯರ ಆದಿಯಾಗಿ ಎಲ್ಲಾ ಶಿಕ್ಷಕರುಗಳು ಶಾಲೆಯ ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗಾಗಿ ಪ್ರಾಮಾಣಿಕವಾಗಿ ಶ್ರಮ ಹಾಕಿರುವುದನ್ನ ವರ್ಷ ಪೂರ್ತಿ ಗಮನಿಸಿದ್ದೇನೆ. ಅದಕ್ಕಾಗಿ ಅವರುಗಳನ್ನ ಈ ಸಂದರ್ಭದಲ್ಲಿ ಅಭಿನಂದಿಸ ಬಯಸುತ್ತೇನೆ. ಈಗ ಪುಟ್ಟಸ್ವಾಮಿಯವರಿಗೆ ಎಸ್.ಎಸ್.ಎಲ್.ಸಿ ಪರೀಕ್ಷೆಯ ಫಲಿತಾಂಶವು ಏಕೆ ಕಡಿಮೆಯಾಗಿದೆ ಎಂಬುದು ಅರ್ಥವಾಯಿತೆಂದು ಬಾವಿಸುತ್ತೇನೆ.<br><br>ಮುಂದುವರೆದು ಸದಸ್ಯರಾದ ಶಾಂತಹೃದಯರವರು ನೀಡಿದ ಸಲಹೆಗೆ ಸದಸ್ಯರಾದ ಮಲ್ಕೋನಹಳ್ಳಿ ಅಣ್ಣಯ್ಯರವರು ನೀಡಿರುವ ಉತ್ತರ ಸೂಕ್ತವಾಗಿರುತ್ತದೆ. ನಿಯಮಾನುಸಾರ |

| | | |
|---|---|---|
| | | ಯಾವುದೇ ಆಡಳಿತ ಮಂಡಳಿ ಸಭೆ ಅಥವಾ ಸಂಘ ಸಂಸ್ಥೆಗಳ ಮಹಾಸಭೆಯು ಪ್ರಾರಂಭವಾಗಬೇಕಿದ್ದರೆ ಕೋರಂ ಅವಶ್ಯಕತೆ ಇರುತ್ತದೆ. ಆದುದರಿಂದ ಸದಸ್ಯರ ಸಹಿಯನ್ನ ಹಾಜರಾತಿ ಪುಸ್ತಕದಲ್ಲಿ ಪಡೆದು ಕೊರಂ ಇದೆ ಎಂಬುದನ್ನ ದೃಢೀಕರಿಸಿಕೊಂಡು ಸಭೆಯನ್ನು ನಡೆಸುವುದು ಅಧ್ಯಕ್ಷರ ಕರ್ತವ್ಯವಾಗಿರುತ್ತದೆ. ಅದನ್ನು ನಮ್ಮ ಸಂಸ್ಥೆಯ ಸಭೆಗಳಲ್ಲಿಯೂ ಪಾಲಿಸಿಕೊಂಡು ಬಂದಿರುತ್ತೇನೆ. ಇದಲ್ಲದೆ ಅವರು ಪ್ರಸ್ತಾಪಿಸಿರುವ ಇತರೆ ವಿಷಯಗಳು ಸಂಸ್ಥೆಗೆ ಸಂಬಂಧ ಪಡದಿರುವುದರಿಂದ ಆ ವಿಷಯಗಳ ಬಗ್ಗೆ ಮಾತನಾಡಲು ಬಯಸುವುದಿಲ್ಲ. ಮುಂದುವರೆದು ಸದಸ್ಯರಾದ ಎಸ್.ಕೆ.ಪ್ರಕಾಶ್ ರವರು ಸಂಸ್ಥೆಯ ಅಜೀವ ಸದಸ್ಯರುಗಳು ನಿಧನರಾದಾಗ ಅವರುಗಳಿಗೂ ಮಹಾಸಭೆಯಲ್ಲಿ ಶ್ರದ್ಧಾಂಜಲಿಯನ್ನು ಕೋರಲು ನೀಡಿದ ಸಲಹೆಯು ಸರಿಯಾದದ್ದು. ಸಂಸ್ಥೆಯಲ್ಲಿ ಈ ಹಿಂದಿನಿಂದಲೂ ಸಹ ಸಂಸ್ಥೆಯ ಸದಸ್ಯರುಗಳು ನಿಧನರಾದಾಗ ಮಹಾಸಭೆಯಲ್ಲಿ ಅವರ ಆತ್ಮಕ್ಕೆ ಶಾಂತಿಯನ್ನ ಕೋರಲಾಗುತ್ತಿದೆ. ಈ ಹಿಂದೆ ಸಂಸ್ಥೆಯ ಮಹಾಸಭೆಯಲ್ಲಿ ಅಜೀವ ಸದಸ್ಯರಾದ ಚಟ್ಟೇನಹಳ್ಳಿ ಛೇರ್ಮೆನ್ ಶಿವಣ್ಣನವರಿಗೆ ಶ್ರದ್ಧಾಂಜಲಿಯನ್ನ ಅರ್ಪಿಸಲಾಗಿದೆ ಎಂದು ತಮ್ಮ ಗಮನಕ್ಕೆ ತರಬಯಸುತ್ತೇನೆ. ಸದರಿ ಸಾಲಿನಲ್ಲಿ ಯಾರಾದರೂ ಸದಸ್ಯರುಗಳು ನಿಧನರಾಗಿದ್ದು, ನಮ್ಮ ಗಮನಕ್ಕೆ ಬರದಿದ್ದರೆ ಅದನ್ನ ನೀವುಗಳು ನಮ್ಮ ಗಮನಕ್ಕೆ ತನ್ನಿ ಅವರಗೂ ಶ್ರದ್ಧಾಂಜಲಿಯನ್ನ ಅರ್ಪಿಸುವುದು ನಮ್ಮೆಲ್ಲರ ಆಧ್ಯ ಕರ್ತವ್ಯವಾಗಿದೆ. ಅದನ್ನ ಖಂಡಿತವಾಗಿಯೂ ಮಾಡೋಣ ಎಂದರು.<br>ಇದೇ ರೀತಿ ಮುಂದಿನ ದಿನಗಳಲ್ಲಿಯೂ ಸಹ ಸಂಸ್ಥೆಯ ಏಳಿಗೆಗೆ ಸಂಸ್ಥೆಯ ಎಲ್ಲಾ ನೌಕರರುಗಳ, ಆಡಳಿತ ಮಂಡಳಿ ಸದಸ್ಯರ ಹಾಗೂ ಸರ್ವ ಸದಸ್ಯರ ಸಹಕಾರವನ್ನು ಬಯಸುತ್ತಾ, ಸಭೆಯಲ್ಲಿ ಹಾಜರಿದ್ದ ಸರ್ವರಿಗೂ ವಂದಿಸುತ್ತಾ ನನ್ನ ಮಾತಿಗೆ ವಿರಾಮವನ್ನ ನೀಡುತ್ತೇನೆ ಎಂದು ಹೇಳಿ ಅಧ್ಯಕ್ಷರ ಭಾಷಣವನ್ನ ಮುಕ್ತಾಯ ಮಾಡಿದರು. |

| | | |
|---|---|---|
| 12 | ವಂದನಾರ್ಪಣೆ | ಸಂಸ್ಥೆಯ ಅಧ್ಯಕ್ಷರು, ಕಾರ್ಯದರ್ಶಿಯವರು, ಸರ್ವಸದಸ್ಯರುಗಳು ಹಾಗೂ ಸಂಸ್ಥೆಯ ಎಲ್ಲಾ ವಿಭಾಗಗಳ ಮುಖ್ಯಸ್ಥರು, ಉಪನ್ಯಾಸಕರು, ಬೋಧಕ ಬೋಧಕೇತರ ವರ್ಗದವರಿಗೆಲ್ಲಾ ಸಂಸ್ಥೆಯ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕರಾದ ಶ್ರೀ ಎಂ.ಜೆ.ಮಂಜುನಾಥ್ ರವರು ವಂದನೆಗಳನ್ನ ಸಲ್ಲಿಸಿದರು. |
| 13 | ರಾಷ್ಟ್ರಗೀತೆ | 2023–24ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ಹಾಜರಾಗಿದ್ದ ಎಲ್ಲರೂ ಎದ್ದು ನಿಂತು ಗೌರವಯುತ–ವಾಗಿ ರಾಷ್ಟ್ರಗೀತೆಯನ್ನು ಹಾಡುವುದರ ಮೂಲಕ ಸಭೆಯನ್ನ ಮುಕ್ತಾಯಗೊಳಿಸಲಾಯಿತು |

**ದಿನಾಂಕ: 28–07–2024**

**ಸ್ಥಳ: ಕೃಷ್ಣರಾಜಪೇಟೆ.**

**–ಸಹಿ–**

**(ಎಸ್.ಸಿ.ಕಿರಣ್ ಕುಮಾರ್)**

**ಸಭಾಧ್ಯಕ್ಷರು**